ಶುಕ್ರವಾರ, ಆಗಸ್ಟ್ 8, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ತನಿಷಿ ದಾಖಲೆ

ಕರ್ನಾಟಕದ ತನಿಷಿ ಗುಪ್ತಾ ಅವರು ಅಹಮದಾಬಾದ್‌ನಲ್ಲಿ ನಡೆದ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು





ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು


UP TO 40% OFF!*
FACTORY PRICE ADVANTAGE
*ಸ್ಟೋರ್ ಉತ್ಪನ್ನಗಳ ಮೇಲೆ
"ರಾಖಿ ಹಬ್ಬವನ್ನು ಕಾಜುಕತ್ಲಿಯ ಸಿಹಿ ಸಂಪ್ರದಾಯದೊಂದಿಗೆ ಆಚರಿಸಿ"
KAJU KATLI 250 g
MRP ₹ 325/- | ₹ 195/-
ಈ ಆಫರ್ ಬೋಳಾಸ್ ಸ್ಟೋರ್ಸ್ ಗಳಲ್ಲಿ 2025ರ ಆಗಸ್ಟ್ 8 ಮತ್ತು 9ರಂದು ಮಾತ್ರ ಮಾನ್ಯ.
Bolas
Bolas Kaju Katli
NO ADDED CHEMICAL PRESERVATIVES
3 MONTHS MODIFIED ATMOSPHERIC PACKING MEANS LONGER SHELF LIFE
TOP QUALITY INGREDIENTS SOURCED WORLDWIDE
ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ. | ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ. | ಮೊದಲ 100 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯ. | ಸ್ಟೋರ್‌ಗಳಲ್ಲಿ ಖರೀದಿ ಮಾಡಲು ಮಾತ್ರ. | ಪ್ರತಿ ಗ್ರಾಹಕ ಒಮ್ಮೆಮಾತ್ರ ಆಫರ್ ಪಡೆಯಬಹುದು | ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ
DRY FRUITS | NUTS | SWEETS & MORE
FACTORY PRICE ADVANTAGE
ಬೋಳಾಸ್ Bolas
ಚೆನ್ನಪಟ್ಟಣ-9483548777 | ಕನಕಪುರ-9019963559 | ತುಮಕೂರು-9364009426 | ಬನಶಂಕರಿ-9364016910 | ಬಾಣಸವಾಡಿ-9364016909 | ಬೆಂಗಳೂರು ಮೀನಾಕ್ಷಿಮಾಲ್ -9606019779 | ಬೆಂಗಳೂರು ಟಿಸಿ ಪಾಳ್ಯ-9364016907 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್- 9364016908 | ಹರಳೂರು-6364863287 | ಎಚ್.ಎಸ್.ಆರ್-364863283 | ಜಯನಗರ-6364863281 | ನೆಲಮಂಗಲ-9364016903 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ಆಫ್ ಸರ್ಜಾಪುರ ರೋಡ್-6364863286 | ಆರ್ ಟಿ ನಗರ-6364863284 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ಉತ್ತರಹಳ್ಳಿ-9364016911 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಟ್ ರೋಡ್-9364016906 | ವಿಲ್ಸನ್ ಗಾರ್ಡನ್-6364863282 | ಮತ್ತಿಕೆರೆ-9364016901 | ಕೆಂಗೇರಿ-9364016916 | ಬಿಟಿಎಂ-ಲೇಔಟ್ 9364016917 | ನಾಗರಭಾವಿ-9972058196 | ತುಮಕೂರು (ಬಿ. ಹೆಚ್. ರೋಡ್)-9035079191 | ಚಿಕ್ಕಬಳ್ಳಾಪುರ -9035079192 |
/bolas.outlet
www.bolas.co.in

ಶುಕ್ರವಾರ, ಆಗಸ್ಟ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 219 | ಪುಟ 18
prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಇಸ್ರೊ ಕೇಂದ್ರಕ್ಕೆ ಭೇಟಿ

ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಅರಿತುಕೊಳ್ಳಲು ಈಶಾನ್ಯ ರಾಜ್ಯಗಳ ಸುಮಾರು 100 ವಿದ್ಯಾರ್ಥಿಗಳ ತಂಡವೊಂದು ಬೆಂಗಳೂರಿನಲ್ಲಿರುವ ಇಸ್ರೊ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿತು

ಗಿಲ್ ಸಾರಥ್ಯ



ಭಾರತ ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್ ಅವರು ಇದೇ 28ರಿಂದ ಬೆಂಗಳೂರಿನಲ್ಲಿ ನಡೆಯುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಉತ್ತರ ವಲಯ ತಂಡವನ್ನು ಮುನ್ನಡೆಸಲಿದ್ದಾರೆ

ಸೆನ್ಸೆಕ್ಸ್ 80,623 | ನಿಫ್ಟಿ 24,596 | $ 87.58 | ಚಿನ್ನ (Std. 10g) ₹1,06,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,500 (ಬೆಂಗಳೂರು)

ಸಂಸದ ಕೆ. ಸುಧಾಕರ್ ಹೆಸರು ಬರೆದಿಟ್ಟು ಕಾರು ಚಾಲಕ ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಯ ಕಾರು ಚಾಲಕ ಬಾಬು (33) ಡೆತ್‌ನೋಟ್‌ನಲ್ಲಿ ಸಂಸದ ಡಾ.ಕೆ.ಸುಧಾಕರ್ ಹೆಸರು ಬರೆದಿಟ್ಟು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಮರಕ್ಕೆ ಗುರುವಾರ ನೇಣು ಹಾಕಿಕೊಂಡಿದ್ದಾರೆ.

'ಸಂಸದ ಡಾ.ಕೆ.ಸುಧಾಕರ್ ಮತ್ತು ಅವರ ಬೆಂಬಲಿಗ ಚಿಕ್ಕಕಾಡಿಗೇನಹಳ್ಳಿಯ ನಾಗೇಶ್ ಎನ್. ಹಾಗೂ ಜಿಲ್ಲಾ ಪಂಚಾಯಿತಿ ಲೆಕ್ಕ ಶಾಖೆಯ ಎಸ್‌ಡಿಎ ಮಂಜುನಾಥ್ ಈ ಮೂವರು ನನ್ನ ಆತ್ಮಹತ್ಯೆಗೆ ಕಾರಣ' ಎಂದು ಮರಣಪತ್ರದಲ್ಲಿ ಬರೆದಿದ್ದಾರೆ.

ಇನ್ನಷ್ಟು ಸುದ್ದಿ ▶ 5

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಲಕ್ಷ ಮತಕಳವು: ರಾಹುಲ್

ಮಹದೇವಪುರ ಕ್ಷೇತ್ರದ ದಾಖಲೆಗಳ ಬಿಡುಗಡೆ ಮಾಡಿದ ಕಾಂಗ್ರೆಸ್ ನಾಯಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರದ ಫಲಿತಾಂಶದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, '2024 ರ ಚುನಾವಣೆಯ ಸಮಯದಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಲಕ್ಷ ಮತಗಳ ಕಳ್ಳತನ ನಡೆದಿದೆ' ಎಂದು ಆರೋಪಿಸಿದರು.

ಮತ ಕಳವಿನ ಕುರಿತ 'ಅಣು ಬಾಂಬ್' ಸಿಡಿಸುತ್ತೇನೆ ಎಂದು ಕಳೆದ ವಾರ ಘೋಷಿಸಿದ್ದ ಕಾಂಗ್ರೆಸ್ ನಾಯಕ, ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮತಕಳವಿನ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದರು. ಬಿಜೆಪಿ ಹಾಗೂ ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಬಿಜೆಪಿಯೊಂದಿಗೆ ಆಯೋಗದ ಮೈತ್ರಿಯು ಸಂವಿಧಾನದ ವಿರುದ್ಧದ ಅಪರಾಧ' ಎಂದು ವಿಶ್ಲೇಷಿಸಿದರು.

▶ 6

ಪ್ರತಿಭಟನೆಗೆ ಇಂದು ಚಾಲನೆ

ಇದೇ ವಿಚಾರವನ್ನು ಮುಂದಿಟ್ಟುಕೊಂಡು ರಾಷ್ಟ್ರದಾದ್ಯಂತ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಮುಂದಾಗಿದೆ. ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ನಡೆಯುವ ಪ್ರತಿಭಟನಾ ಸಭೆಯಿಂದ ಹೋರಾಟ ಆರಂಭಿಸಲಿದ್ದು, ರಾಹುಲ್ ಗಾಂಧಿ ಪ್ರತಿಭಟನೆಗೆ ಚಾಲನೆ ನೀಡಲಿದ್ದಾರೆ.

ರಾಹುಲ್ ನೀಡಿದ ಉದಾಹರಣೆಗಳು




ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮತಕಳವಿನ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದ ರಾಹುಲ್ ಗಾಂಧಿ


- ಹಲವು ಮತಗಟ್ಟೆಗಳಲ್ಲಿ ಒಬ್ಬ ಮತದಾರನದ್ದೇ ಹೆಸರು ಇರುವ ಬಗ್ಗೆ ಉಲ್ಲೇಖಿಸಿದ ರಾಹುಲ್, 26 ವರ್ಷದ ಪುರುಷ ಮತದಾರನೊಬ್ಬ ಮತಗಟ್ಟೆ ಸಂಖ್ಯೆಗಳಾದ 116, 124, 125 ಮತ್ತು 126ರಲ್ಲಿ ತಮ್ಮ ಹೆಸರನ್ನು ಹೊಂದಿದ್ದರು. ಈ ಮತದಾರರ ಮತಪಟ್ಟಿಯಲ್ಲಿನ ಚಿತ್ರದ ಪ್ರಕಾರ, ಆತ ನಾಲ್ಕು ವಿಭಿನ್ನ ಕಡೆ ಹೆಸರು ಹೊಂದಿದ್ದ.
- ಮತ್ತೊಬ್ಬ ಮತದಾರ, 37 ವರ್ಷದ ಪುರುಷ ಬೂತ್ ಸಂಖ್ಯೆ 458 ಮತ್ತು 459ರಲ್ಲಿ ಅಲ್ಲದೇ ಲಖನೌದಲ್ಲಿ ಕೂಡ ಮತದಾನದ ಪಟ್ಟಿಯಲ್ಲಿ ಹೆಸರನ್ನು ಹೊಂದಿದ್ದಾರೆ. 33 ವರ್ಷದ ಪುರುಷ ಮತದಾರ ಬೂತ್ ಸಂಖ್ಯೆ 513 ಮತ್ತು 321ರಲ್ಲಿ ಹಾಗೂ ವಾರಾಣಸಿಯಲ್ಲಿ ಮತ ಹಕ್ಕು ಹೊಂದಿದ್ದಾರೆ.
- ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿಯಲು 25 ಕ್ಷೇತ್ರಗಳ ಕೊರತೆ ಇತ್ತು. ಮತ ಕಳವಿನ ಮೂಲಕ ಅವರು ಈ ಕ್ಷೇತ್ರಗಳನ್ನು ಪಡೆದುಕೊಂಡಿದ್ದಾರೆ. ಈ ಎಲ್ಲ ಕ್ಷೇತ್ರಗಳಲ್ಲಿ ಗೆಲುವಿನ ಅಂತರ 30 ಸಾವಿರ ಮತಗಳಿಗಿಂತ ಕಡಿಮೆ ಇದೆ

▶ 6

ಮಹದೇವಪುರ: ಮತ ಕಳವು (ರಾಹುಲ್ ಪ್ರಕಾರ)




ಬೆಂಗಳೂರು ಕೇಂದ್ರ ಫಲಿತಾಂಶ



6,26,208 ಕಾಂಗ್ರೆಸ್‌ನ ಮನ್ಸೂರ್ ಅಲಿ ಖಾನ್ ಪಡೆದ ಮತ | **6,58,915** ಬಿಜೆಪಿಯ ಪಿ.ಸಿ. ಮೋಹನ್ ಗಳಿಸಿದ ಮತ

32,707 ಗೆಲುವಿನ ಅಂತರ

ಯಾರಿಗೆ ಎಷ್ಟು ಮತ?



1,15,586 ಕಾಂಗ್ರೆಸ್ | **2,29,632** ಬಿಜೆಪಿ

1,14,046 ಅಂತರ

ಹತಾಶೆಯಿಂದ ರಾಹುಲ್ ಹೇಳಿಕೆ: ಬಿಜೆಪಿ

ಜನರು ಕಾಂಗ್ರೆಸ್‌ಗೆ ಜನಾದೇಶ ನೀಡದ ಕಾರಣ ಹತಾಶೆ ಮತ್ತು ಕೋಪದಿಂದ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ವಿರುದ್ಧ ಆರೋಪಗಳನ್ನು ಮಾಡಿದ್ದಾರೆ ಎಂದು ಬಿಜೆಪಿ ಟೀಕಿಸಿದೆ.

ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್, 'ಬೇಜವಾಬ್ದಾರಿ ಹಾಗೂ ನಾಚಿಕೆ ಇಲ್ಲದ ನಡವಳಿಕೆಗಾಗಿ ಕಾಂಗ್ರೆಸ್ ಪಕ್ಷವನ್ನು ಮತದಾರರು ತಿರಸ್ಕರಿಸುತ್ತಲೇ ಇದ್ದಾರೆ' ಎಂದರು.

▶ 6

'ಸರ್ವಜ್ಞನಗರದಲ್ಲೂ ಪರಿಶೀಲನೆ ಮಾಡಲಿ'

'ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸರ್ವಜ್ಞನಗರದಲ್ಲೂ ಮತ ಪ್ರಮಾಣ ಹೆಚ್ಚಾಗಿದೆ. ಇಲ್ಲಿ ಕಾಂಗ್ರೆಸ್‌ಗೆ ಮುನ್ನಡೆ ಸಿಕ್ಕಿದೆ. ಮತ ಪ್ರಮಾಣ ಹೆಚ್ಚಾಗಿರುವ ಬಗ್ಗೆ ರಾಹುಲ್ ಗಾಂಧಿ ಅವರು ಅಲ್ಲೂ ಅಧ್ಯಯನ ನಡೆಸಲಿ' ಎಂದು ಸಂಸದ ಪಿ.ಸಿ.ಮೋಹನ್ ಸವಾಲು ಎಸೆದರು.

▶ 6

ಒಳಮೀಸಲು: ಹಲವರ ಆಕ್ಷೇಪ • ಮುನಿಯಪ್ಪ ಸಮರ್ಥನೆ

ಬಲಗೈ ಸಚಿವರ ವಿರೋಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ಒಳ ಮೀಸಲಾತಿ ಕುರಿತ ವರದಿಗೆ ಸಚಿವ ಸಂಪುಟ ಸಭೆಯಲ್ಲೇ ತೀವ್ರ ವಿರೋಧ ವ್ಯಕ್ತಪಡಿಸಿದ ಬಲಗೈ ಸಮುದಾಯದ ಹಿರಿಯ ಸಚಿವರು ವರದಿಯ ಶಿಫಾರಸುಗಳ ಅನುಷ್ಠಾನಕ್ಕೆ ಬಿಡುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ವಿಷಯವಾಗಿ, ಸುಮಾರು ಅರ್ಧ ಗಂಟೆ ಏರಿದ ಧ್ವನಿಯಲ್ಲಿ ಮಾತಿನ ಸಮರ ನಡೆಯಿತು. ಆಗ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನೀವೆಲ್ಲರೂ ವರದಿಯನ್ನು ಆಳವಾಗಿ ಅಧ್ಯಯನ ಮಾಡಿಕೊಂಡು ಬನ್ನಿ. ವಿಶೇಷ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸೋಣ. ಆ ಬಳಿಕ ಸೂಕ್ತ ತೀರ್ಮಾನ ತೆಗೆದುಕೊಳ್ಳೋಣ' ಎಂದು ಸಮಾಧಾನಪಡಿಸಿದರು ಎಂದು ಮೂಲಗಳು ಹೇಳಿವೆ. ಆಯೋಗದ ವರದಿಯ ಪ್ರತಿಗಳನ್ನು ಹಂಚಿದ ತಕ್ಷಣವೇ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಅವರು ಆಕ್ಷೇಪ ವ್ಯಕ್ತಪಡಿಸಿದರು.

▶ 6

16ರಂದು ವಿಶೇಷ ಸಚಿವ ಸಂಪುಟ ಸಭೆ

'ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆ ಸ್ವೀಕರಿಸಿದೆ. ಇದೇ 16ರಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ವರದಿಯ ಬಗ್ಗೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ನಾಗಮೋಹನ್‌ದಾಸ್ ಅವರು ಶ್ರಮವಹಿಸಿ, ಅತಿ ಕಡಿಮೆ ಅವಧಿಯಲ್ಲಿ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ವರದಿ ನೀಡಿದ್ದಾರೆ. ಈ ಸಮುದಾಯಗಳ ಶೇ 92ರಷ್ಟು ಜನ ಸಮೀಕ್ಷೆಯಲ್ಲಿ ಭಾಗಿಯಾಗಿದ್ದಾರೆ. ಈ ವರದಿಯ ಪ್ರತಿಗಳನ್ನು ಸಚಿವ ಸಂಪುಟದ ಎಲ್ಲ ಸದಸ್ಯರಿಗೂ ವಿತರಿಸಲಾಗಿದೆ. ವಿಶೇಷ ಸಂಪುಟ ಸಭೆಗೆ ಎಲ್ಲರೂ ಅಧ್ಯಯನ ಮಾಡಿಕೊಂಡು ಬಂದು ಚರ್ಚೆಯಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರೈತರ ಹಿತಾಸಕ್ತಿ; ರಾಜಿ ಇಲ್ಲ'

ಸುಂಕ ಹೆಚ್ಚಿಸುವ ಟ್ರಂಪ್ ನಿರ್ಧಾರಕ್ಕೆ ಪ್ರಧಾನಿ ಪ್ರತಿಕ್ರಿಯೆ

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗುರಿಯಾಗಿಸಿ ತೀಕ್ಷ್ಣ ಸಂದೇಶ ರವಾನಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಭಾರತವು ತನ್ನ ರೈತರು, ಮೀನುಗಾರರು ಮತ್ತು ಹೈನುಗಾರರ ಹಿತಾಸಕ್ತಿಯೊಂದಿಗೆ ಎಂದಿಗೂ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಹೇಳಿದರು.

ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು ಶೇಕಡ 50ಕ್ಕೆ ಹೆಚ್ಚಿಸಿರುವುದಾಗಿ ಟ್ರಂಪ್ ಘೋಷಿಸಿದ ಮರುದಿನ ಪ್ರಧಾನಿ ಅವರ ಹೇಳಿಕೆ ಬಂದಿದೆ. ಸುಂಕ ಹೆಚ್ಚಿಸುವ ಆದೇಶಕ್ಕೆ ಟ್ರಂಪ್ ಬುಧವಾರ ಸಹಿ ಹಾಕಿದ್ದರು. ಹಸಿರು ಕ್ರಾಂತಿಯ ಹರಿಕಾರ, ಕೃಷಿ ವಿಜ್ಞಾನಿ ದಿವಂಗತ ಎಂ.ಎಸ್. ಸ್ವಾಮಿನಾಥನ್ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಗುರುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಪ್ರಧಾನಿ, 'ನಮಗೆ ರೈತರ ಹಿತಾಸಕ್ತಿ ಇತರ ಎಲ್ಲಕ್ಕಿಂತಲೂ ಮುಖ್ಯ' ಎಂದು ಪ್ರತಿಪಾದಿಸಿದರು.



ರೈತರ ಹಿತಾಸಕ್ತಿ ಕಾಪಾಡಲು ವೈಯಕ್ತಿಕವಾಗಿ ಭಾರಿ ಬೆಲೆ ತೆರಬೇಕಾಗುತ್ತದೆ ಎಂಬುದು ನನಗೆ ತಿಳಿದಿದೆ. ನಾನು ಅದಕ್ಕೆ ಸಿದ್ಧನಿದ್ದೇನೆ

ನರೇಂದ್ರ ಮೋದಿ, ಪ್ರಧಾನಿ

ರೈತರು, ಮೀನುಗಾರರು ಮತ್ತು ಹೈನುಗಾರರ ಹಿತಾಸಕ್ತಿ ಕಾಪಾಡಲು ದೇಶವು ಯಾವುದೇ ಬೆಲೆ ತೆರಲು ಸಿದ್ಧ ಎಂದು ಒತ್ತಿ ಹೇಳಿದರು.

ಭಾರತ ಮತ್ತು ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಯುತ್ತಿದ್ದು, ಅದು ಇನ್ನೂ ಅಂತಿಮಗೊಂಡಿಲ್ಲ. ಕೃಷಿ ಮತ್ತು ಹೈನು ಉತ್ಪನ್ನಗಳ ವಲಯವನ್ನು ಅಮೆರಿಕದ ಉತ್ಪನ್ನಗಳಿಗೆ ಮುಕ್ತಗೊಳಿಸಲು ಭಾರತವು ಒಪ್ಪುತ್ತಿಲ್ಲ. ಧಾನ್ಯ, ಸೋಯಾಬೀನ್, ಸೇಬು, ಬಾದಾಮಿ ಮತ್ತು ಎಥೆನಾಲ್‌ನಂತಹ ಉತ್ಪನ್ನಗಳ ಮೇಲಿನ ಸುಂಕ ಕಡಿಮೆ ಮಾಡಲು ಅಮೆರಿಕ ಬಯಸುತ್ತಿದೆ. ಆದರೆ, ಇವು ರೈತರ ಮೇಲೆ ನೇರ ಪರಿಣಾಮ ಬೀರುತ್ತವೆ ಎಂದು ಈ ಬೇಡಿಕೆಗಳನ್ನು ಭಾರತ ವಿರೋಧಿಸುತ್ತಿದೆ.

ನಾಣ್ಯ ಬಿಡುಗಡೆ

ಪ್ರಧಾನಿ ಅವರು ಎಂ.ಎಸ್. ಸ್ವಾಮಿನಾಥನ್ ಗೌರವಾರ್ಥವಾಗಿ ನಾಣ್ಯ ಹಾಗೂ ಅಂಚೆ ಚೀಟಿ ಬಿಡುಗಡೆ ಮಾಡಿದರು. ಭಾರತದ ಕೃಷಿಗೆ ಸಂಬಂಧಿಸಿದಂತೆ ತಮ್ಮ ದೂರದೃಷ್ಟಿಯ ಯೋಜನೆಗಳನ್ನು ವಿವರಿಸಿದ ಅವರು, ಪೌಷ್ಟಿಕಾಂಶ ಭದ್ರತೆ, ಬೆಳೆ ವೈವಿಧ್ಯ ಮತ್ತು ತಂತ್ರಜ್ಞಾನದ ಅಳವಡಿಕೆಯ ಅಗತ್ಯವನ್ನು ಒತ್ತಿ ಹೇಳಿದರು.

'ನಮ್ಮ ಸರ್ಕಾರ ಯಾವಾಗಲೂ ರೈತರ ಬಲವನ್ನು ರಾಷ್ಟ್ರದ ಪ್ರಗತಿಯ ಅಡಿಪಾಯವೆಂದು ಪರಿಗಣಿಸಿದೆ. ಈಚೆಗಿನ ವರ್ಷಗಳಲ್ಲಿ ರೂಪಿಸಲಾದ ನೀತಿಗಳು ರೈತರಿಗೆ ನೆರವು ನೀಡಿದ್ದಷ್ಟೇ ಅಲ್ಲದೆ, ಅವರಲ್ಲಿ ಆತ್ಮವಿಶ್ವಾಸವನ್ನೂ ತುಂಬಿವೆ' ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ತುಂತುರು ಅಥವಾ ಗುಡುಗು ಸಹಿತ ಮಳೆ ಆಗುವ ಸಾಧ್ಯತೆ ಇದೆ

ಸತ್ಯ ದರ್ಶನಕ್ಕೆ ಹಿಂಜರಿಕೆ ಬೇಡ: ಫ್ರಾಂಕ್ ಬರ್ನಾಸ್

ಬೆಂಗಳೂರು: 'ಕೆಲ ಚಿತ್ರಕಥೆಗಳನ್ನು ಎಷ್ಟೇ ಎಚ್ಚರಿಕೆಯಿಂದ ನಿರೂಪಿಸಿದರೂ ಅಪಾಯ ಇರುತ್ತದೆ. ಹಾಗಂತ ಸತ್ಯ ದರ್ಶನಕ್ಕೆ ಹಿಂಜರಿಯಬಾರದು' ಎಂದು ಚಲನಚಿತ್ರ ನಿರ್ಮಾಪಕ ಫ್ರಾಂಕ್ ಬರ್ನಾಸ್ ಅಭಿಪ್ರಾಯಪಟ್ಟರು.

ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಂವಹನ ಮತ್ತು ಮಾಧ್ಯಮ ಅಧ್ಯಯನ ಶಾಲೆ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಕ್ಷ್ಯಚಿತ್ರ ನಿರ್ಮಾಪಕರು ಎದುರಿಸುವ ಸವಾಲುಗಳನ್ನು ವಿವರಿಸಿದರು.



ಫ್ರಾಂಕ್ ಬರ್ನಾಸ್

'ಸಾಕ್ಷ್ಯಚಿತ್ರಗಳ ಮೇಲೆ ಸದಾ ವಿರೋಧ ಇರುತ್ತದೆ. ಸಿನಿಮಾ ನಿರ್ಮಾಪಕರು ಸೂತ್ರಗಳಿಂದ ದೂರಸರಿದು, ಸತ್ಯದ ಮೇಲೆ ಕೇಂದ್ರೀಕೃತರಾಗಬೇಕು. ಸಾಕ್ಷ್ಯಚಿತ್ರಗಳು ದೊಡ್ಡ ಬಜೆಟ್ ಅಥವಾ ನಾಟಕೀಯ ವಿಷಯ ಅವಲಂಬಿಸದೇ ವಿಷಯ ಸ್ಪಷ್ಟತೆ ಬಯಸುತ್ತದೆ' ಎಂದರು.

ತಮ್ಮ 'ಸೇವಿಂಗ್ ಮಿಷ್ಕಾ' ಸಾಕ್ಷ್ಯಚಿತ್ರದ ಬಗ್ಗೆ ಮಾತನಾಡಿದ ಅವರು, 'ಈ ಸಾಕ್ಷ್ಯಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಯುದ್ಧ ಕಾಲದ ಸ್ಥಳಾಂತರಿಸುವಿಕೆ ವೇಳೆ ಉಕ್ರೇನ್ ಗಡಿಯಲ್ಲಿ ಬಿಟ್ಟುಹೋದ ಸಾಕು ಪ್ರಾಣಿಗಳನ್ನು ಸಾಕ್ಷ್ಯಚಿತ್ರ ಕೇಂದ್ರೀಕರಿಸುತ್ತದೆ' ಎಂದರು. ಸಂವಹನ ಮತ್ತು ಮಾಧ್ಯಮ ಅಧ್ಯಯನ ಶಾಲೆಯ ಡೀನ್ ಮೆಲ್ವಿನ್ ಪಿಂಟೊ, ವಿಭಾಗದ ಮುಖ್ಯಸ್ಥ ಮರುಧು ಪಾಂಡಿಯನ್ ಉಪಸ್ಥಿತರಿದ್ದರು.



ವಾಣಿವಿಲಾಸ ಆಸ್ಪತ್ರೆ ಹಮ್ಮಿಕೊಂಡಿದ್ದ ಸ್ತನ್ಯಪಾನ ಸಪ್ತಾಹದಲ್ಲಿ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಎದೆ ಹಾಲಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು

'ವಾಣಿವಿಲಾಸ'ದಿಂದ ಜಾಥಾ, ವಿವಿಧ ಕಾರ್ಯಕ್ರಮ

ಎದೆ ಹಾಲಿನ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಸ್ತನ್ಯಪಾನ ಸಪ್ತಾಹದ ಪ್ರಯುಕ್ತ ವಾಣಿವಿಲಾಸ ಆಸ್ಪತ್ರೆಯು ನಗರದ ವಿವಿಧೆಡೆ ಜಾಥಾ, ಬೀದಿ ನಾಟಕ, ಉಪನ್ಯಾಸ ಸೇರಿ ವಿವಿಧ ಕಾರ್ಯಕ್ರಮಗಳನ್ನು ನಡೆಸಿ, ತಾಯಂದಿರು ಹಾಗೂ ಸಾರ್ವಜನಿಕರಿಗೆ ಎದೆ ಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸಿತು.

ಆ.1ರಿಂದ ಪ್ರಾರಂಭವಾದ ಸಪ್ತಾಹ ಗುರುವಾರ ಸಂಪನ್ನವಾಯಿತು. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಆಸ್ಪತ್ರೆಗಳ ಸಂಕೀರ್ಣದ ಆವರಣ ಹಾಗೂ ಸುತ್ತಮುತ್ತ ಜಾಗೃತಿ ಜಾಥಾ ನಡೆಯಿತು. ವೈದ್ಯರು, ಶುಶ್ರೂಷಕರು, ವೈದ್ಯಕೀಯ ವಿದ್ಯಾರ್ಥಿಗಳು ಸಿಬ್ಬಂದಿ, ಭಿತ್ತಿ ಪತ್ರ ಪ್ರದರ್ಶಿಸಿ ಜಾಗೃತಿ ಮೂಡಿಸಿದರು.

'ಮಗು ಜನಿಸಿದ ತಕ್ಷಣ ಅಥವಾ ಒಂದು ಗಂಟೆ ಒಳಗೆ ಎದೆ ಹಾಲು ಉಣಿಸಲು ಪ್ರಾರಂಭಿಸಬೇಕು. ಆರು ತಿಂಗಳು ಮಗುವಿಗೆ ಎದೆ ಹಾಲು ಮಾತ್ರ ಉಣಿಸಬೇಕು. ಬಳಿಕ ಎದೆಹಾಲಿನ ಜತೆಗೆ ಪೂರಕ ಆಹಾರ ಒದಗಿಸಲು ಪ್ರಾರಂಭಿಸಬೇಕು. ಕನಿಷ್ಠ ಎರಡು ವರ್ಷ ಎದೆ ಹಾಲು ನೀಡಬೇಕು' ಎಂದು ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥೆ ಡಾ. ಸಹನಾ ದೇವದಾಸ್ ಹೇಳಿದರು.

'ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ತಾಯಿಯ ಎದೆಹಾಲು ಸಹಕಾರಿ. ಇದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಲಿದೆ. ಎದೆ ಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಮಗುವಿಗೆ ಇದು ಮೊದಲ ಲಸಿಕೆಯಾಗಲಿದೆ. ಮಗುವಿನಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸೋಂಕುಗಳಿಂದ ರಕ್ಷಣೆ ನೀಡುತ್ತದೆ' ಎಂದು ಅಭಿಪ್ರಾಯಪಟ್ಟರು.

ಅರಿವಿನ ಕೊರತೆ: 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್–5) ಪ್ರಕಾರ, ರಾಜ್ಯದಲ್ಲಿ ಶೇ 41.1ರಷ್ಟು ತಾಯಂದಿರು ಮಾತ್ರ ಮಗು ಜನಿಸಿದ ಒಂದು ಗಂಟೆಯೊಳಗೆ ಎದೆ ಹಾಲು ಉಣಿಸಲು ಪ್ರಾರಂಭಿಸುತ್ತಿದ್ದಾರೆ. ಮೊದಲ ಆರು ತಿಂಗಳು ಎದೆಹಾಲು ನೀಡುವ ತಾಯಂದಿರ ಪ್ರಮಾಣ ಶೇ 63.7 ರಷ್ಟಿದೆ. ಅರಿವಿನ ಕೊರತೆಯೇ ಇದಕ್ಕೆ ಕಾರಣ' ಎಂದು ಡಾ. ಸಹನಾ ಬೇಸರ ವ್ಯಕ್ತಪಡಿಸಿದರು.

ಸಮಾರೋಪ ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ, ಸ್ಥಾನಿಕ ವೈದ್ಯಾಧಿಕಾರಿ ಡಾ. ಸಂತೋಷ್, ಮಕ್ಕಳ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಎನ್. ರೆಡ್ಡಿ ಪಾಲ್ಗೊಂಡಿದ್ದರು.



ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಜಂಬೂ ದ್ವೀಪ ಸಿದ್ದರಾಜು ಮತ್ತು ಪದಾಧಿಕಾರಿಗಳು ಒಳ ಮಿಸಲಾತಿ ಜಾರಿ ಮಾಡಬೇಕು ಎಂದು ಮುಖ್ಯಮಂತ್ರಿ ಮತ್ತು ಸಚಿವರಿಗೆ ಗುರುವಾರ ಹೂವು ನೀಡಿ ಆಗ್ರಹಿಸಿದರು

ಅನ್ಯ ಉದ್ದೇಶಕ್ಕೆ ಪರಿಶಿಷ್ಟರ ಹಣ: ಪ್ರತಿಭಟನೆ 21ಕ್ಕೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾದ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡುತ್ತಿರುವುದನ್ನು ಖಂಡಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಇದೇ 21ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, 'ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ–2013 (ಎಸ್‌ಸಿಎಸ್‌ಪಿ ಟಿಎಸ್‌ಪಿ) ಕಾಯ್ದೆಯನ್ನು ಪರಿಶಿಷ್ಟರ ಕಲ್ಯಾಣಕ್ಕೆ ಜಾರಿ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಇದು ಸಹಕಾರಿಯಾಗಿದೆ. ಈ ಕಾಯ್ದೆಯ ಸೆಕ್ಷನ್ 7ಸಿ ಅನ್ನು ಕೂಡಲೇ ರದ್ದುಗೊಳಿಸುವ ಮೂಲಕ, ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಾದ ಹಣವು ವಿವಿಧ ಇಲಾಖೆಗಳ ಮೂಲಕ ಅನ್ಯ ಯೋಜನೆಗಳಿಗೆ ಬಳಕೆಯಾಗುವುದನ್ನು ತಡೆಯಬೇಕು' ಎಂದು ಆಗ್ರಹಿಸಿದರು.

'2024–25 ಹಾಗೂ 2025–26ನೇ ಸಾಲಿಗೆ 'ಗ್ಯಾರಂಟಿ' ಸೇರಿ ವಿವಿಧ ಯೋಜನೆಗಳಿಗೆ ಎಸ್‌ಸಿಎಸ್‌ಪಿ ಟಿಎಸ್‌ಪಿ ಹಣ ಬಳಸಿ ಪರಿಶಿಷ್ಟರ ಅಭಿವೃದ್ಧಿಯ ಅವಕಾಶ ತಪ್ಪಿಸುತ್ತಿರುವುದು ಖಂಡನೀಯ' ಎಂದರು.

ಅಕ್ರಮ ಗಣಿಗಾರಿಕೆ: ಸರ್ಕಾರಕ್ಕೆ ನೋಟಿಸ್

ಬರಗೇನಹಳ್ಳಿ ವ್ಯಾಪ್ತಿಯಲ್ಲಿ ಬಂಡೆಗಳ ಸ್ಫೋಟ-ಕ್ರಷರ್ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ, ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ವ್ಯಾಪ್ತಿಗೆ ಒಳಪಟ್ಟ ಬರಗೇನಹಳ್ಳಿ ಸುತ್ತಮುತ್ತಲ ಕಂದಾಯ ಭೂಮಿಯಲ್ಲಿ ನಡೆಯುತ್ತಿರುವ ಕಾನೂನುಬಾಹಿರ, ಬಂಡೆಗಳ ಸ್ಫೋಟ ಮತ್ತು ಕ್ರಷರ್ ಚಟವಟಿಕೆಗಳನ್ನು ಸ್ಥಗಿತಗೊಳಿಸಲು ಆದೇಶಿಸಬೇಕು' ಎಂಬ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆ ಬರಗೇನಹಳ್ಳಿಯ ಕಾಯಂ ನಿವಾಸಿಗಳು ಮತ್ತು ಕೃಷಿಕರೂ ಆದ ರವಿಕುಮಾರ್, ಕುಮಾರಸ್ವಾಮಿ, ಪಿ.ಶಶಾಂಕ, ಬಿ.ಎಚ್.ಸತೀಶ್ ಮತ್ತು ಜಯಣ್ಣ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಶಿವಪ್ರಕಾಶ್, 'ಬರಗೇನಹಳ್ಳಿ ವ್ಯಾಪ್ತಿಯ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಲಯದಲ್ಲಿ ಹೊರ್ಟೈಝುನ್ ಇಂಡಸ್ಟ್ರಿಯಲ್ ಹೈ ಪಾರ್ಕ್ ಮತ್ತು ಎಂಬೆಸಿ ಇಂಡಸ್ಟ್ರಿಯಲ್ ಹೈ ಪಾರ್ಕ್ ಕಂಪನಿ ವತಿಯಿಂದ ಕಾನೂನು ಬಾಹಿರವಾಗಿ ಬಂಡೆಗಳ ಬ್ಲಾಸ್ಟಿಂಗ್ (ಸ್ಫೋಟ), ಡ್ರಿಲ್ಲಿಂಗ್



(ಕೊರೆಯುವುದು) ಮತ್ತು ಕ್ರಷರ್ (ಕಲ್ಲು ಪುಡಿ ಮಾಡುವುದು) ಕಾಮಗಾರಿ ನಡೆಸಲಾಗುತ್ತಿದೆ' ಎಂದು ಆರೋಪಿಸಿದರು.

'ಈ ಚಟುವಟಿಕೆ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶಕ್ಕೆ ಒಳಪಡುವ ಸ್ಥಳೀಯ ಪರಿಸರ, ಗ್ರಾಮಸ್ಥರು ಮತ್ತು ಸಕಲ ಜೀವಸಂಕುಲಕ್ಕೆ ಅಪಾಯ ತಂದೊಡ್ಡಿದೆ. ಗೋಮಾಳ ಪ್ರದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ಕಾಮಗಾರಿಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ, ಈ ಕಾನೂನುಬಾಹಿರ ಚಟುವಟಿಕೆಗಳನ್ನು ಕೂಡಲೇ ಸ್ಥಗಿತಗೊಳಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕ-ಜಂಟಿ ನಿರ್ದೇಶಕ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ, ಕೆಐಎಡಿಬಿ ಕಾರ್ಯಕಾರಿ ಸದಸ್ಯ, ನೆಲಮಂಗಲ ತಹಶೀಲ್ದಾರ್, ಮುಂಬೈನ ದಿ ಹೊರ್ಟೈಝುನ್ ಇಂಡಸ್ಟ್ರಿಯಲ್ ಹೈ ಪಾರ್ಕ್ (ಟಿಎನ್) ಪ್ರೈವೇಟ್ ಲಿಮಿಟೆಡ್ ಕಂಪನಿ, ಮೆಸರ್ಸ್ ಎಂಬೆಸಿ ಇಂಡಸ್ಟ್ರಿಯಲ್ ಪಾರ್ಕ್ ಹೊಸೂರು (ಟಿಎನ್) ಪ್ರೈವೇಟ್ ಲಿಮಿಟೆಡ್ ಕಂಪನಿ ಮತ್ತು ನೆಲಮಂಗಲ ತಾಲ್ಲೂಕಿನ ಡಾಬಸ್‌ಪೇಟೆ ಪೊಲೀಸ್ ಠಾಣಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಅಕ್ಟೋಬರ್ 29ಕ್ಕೆ ಮುಂದೂಡಲಾಗಿದೆ.

ಅರ್ಜಿದಾರರ ಆರೋಪಗಳೇನು?

'ಹೊರ್ಟೈಝುನ್ ಇಂಡಸ್ಟ್ರಿಯಲ್ ಪಾರ್ಕ್ ಕಂಪನಿಯು, ಬರಗೇನಹಳ್ಳಿಯ ವ್ಯಾಪ್ತಿಯ ಸರಿಸುಮಾರು 125 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ನಡೆಸುತ್ತಿದೆ. ಈ ಕಂಪನಿಗೆ ಸಂಬಂಧಿಸಿದಂತೆ ಸುಮಾರು 20 ಎಕರೆಯಲ್ಲಿ ಬೃಹತ್ ಆಕಾರದ ಬಂಡೆಗಳು ಇವೆ. ಇಲ್ಲಿನ ಒಂದು ಬೃಹತ್ ಬಂಡೆಕಲ್ಲು ಸರ್ಕಾರದ ಸಂಪತ್ತಿಗೆ ಸೇರಿರುತ್ತದೆ. ಆದರೆ, ಕಂಪನಿಯವರು ಈ ಬಂಡೆಯ ಬ್ಲಾಸ್ಟಿಂಗ್ ಮತ್ತು ಡ್ರಿಲ್ಲಿಂಗ್ ನಡೆಸುತ್ತಿದ್ದಾರೆ. ಸಕ್ಷಮ ಪ್ರಾಧಿಕಾರಗಳಿಂದ ಯಾವುದೇ ಅನುಮತಿ ಪಡೆಯದೆ ಮತ್ತು ನಿರಾಕ್ಷೇಪಣೆ ಪತ್ರ ಪಡೆಯದೆ ಮೊಬೈಲ್ (ಸಂಚಾರಿ) ಕ್ರಷರ್ ಘಟಕವನ್ನು ಸ್ಥಾಪಿಸಲಾಗಿದೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

'ಕಂದಾಯ ಭೂಮಿಯ ವಲಯದಲ್ಲಿ ನಡೆಯುತ್ತಿರುವ ಈ ಚಟವಟಿಕೆಗಳಿಂದ ಬರಗೇನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಜಲಧಾರೆ, ರಾಜಕಾಲುವೆ, ನಾಲೆಗಳು ಹಾಗೂ ಗೋಮಾಳ ಜಮೀನುಗಳ ಫಲವತ್ತತೆ ನಶಿಸಿ ಹೋಗುತ್ತಿದೆ. ಸುತ್ತೆಲ್ಲಾ ತೀವ್ರತಮ ವಾಯು ಮಾಲಿನ್ಯ ಆವರಿಸಿದೆ. ಜಾನುವಾರುಗಳ ಮೇವಿಗೆ ತತ್ವಾರ ಬಂದೊದಗಿದೆ. ಆದ್ದರಿಂದ ಕೂಡಲೇ, ಮೆಸರ್ಸ್ ಎಂಬೆಸಿ ಇಂಡಸ್ಟ್ರಿಯಲ್ ಪಾರ್ಕ್ ಹೊಸೂರು (ಟಿಎನ್) ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು. ಇಲ್ಲಿನ ಕೃಷಿ ಪ್ರದೇಶ, ಜನ-ಜಾನುವಾರುಗಳ ಸಂರಕ್ಷಣೆಗೆ ನಿರ್ದೇಶಿಸಬೇಕು' ಎಂದು ಕೋರಲಾಗಿದೆ.

ಹಾಸನಕ್ಕೆ ರಾಜಣ್ಣ ಬದಲು ಕೃಷ್ಣ ಬೈರೇಗೌಡ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಅವರ ಬದಲಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಆಗಸ್ಟ್ 15ರ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಧ್ವಜಾರೋಹಣದ ಹೊಣೆ ವಹಿಸಲಾಗಿದೆ.

ಆಗಸ್ಟ್ 15 ಸ್ವಾತಂತ್ರ್ಯೋತ್ಸವ ದಿನಾಚರಣೆಯ ಭಾಗವಾಗಿ ನಡೆಯಲಿರುವ ಧ್ವಜಾರೋಹಣದ ಸಂಬಂಧ ಸರ್ಕಾರವು ಆದೇಶ ಹೊರಡಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿನ ಧ್ವಜಾರೋಹಣದ ಜವಾಬ್ದಾರಿಯನ್ನು ಪೌರಾಡಳಿತ ಸಚಿವ ರಹೀಂ ಖಾನ್ ಅವರಿಗೆ ನೀಡಲಾಗಿದೆ.

ಈ ಬೆಳವಣಿಗೆಯ ಬೆನ್ನಲ್ಲೇ, ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಅರಸೀಕೆರೆಯ ಕಾಂಗ್ರೆಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು, 'ಹಾಸನ ಜಿಲ್ಲೆಯ ನೂತನ ಉಸ್ತುವಾರಿ ಸಚಿವರಾಗಿರುವ ಕೃಷ್ಣಬೈರೇಗೌಡ ಅವರಿಗೆ ಶುಭಾಶಯ' ಎಂದಿದ್ದಾರೆ.

ಗ್ರಾಮ ಸಭೆ, ವಾರ್ಡ್‌ಸಭೆ ತಂತ್ರಾಂಶದಲ್ಲಿ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳು ನಡೆಸುವ ತಿಂಗಳ ಸಭೆ, ಗ್ರಾಮ ಸಭೆ, ವಾರ್ಡ್‌ಸಭೆಗಳು ಕೂಡ 'ಪಂಚತಂತ್ರ' ತಂತ್ರಾಂಶದಲ್ಲಿ ದಾಖಲಾಗಬೇಕು. ಅದಕ್ಕೆ ಬೇಕಾದ ವೇದಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹಾದೇವನ್ ಹೇಳಿದರು.

5ನೇ ಹಣಕಾಸು ಆಯೋಗದ ನಿವೃತ್ತ ಸಮಾಲೋಚಕ ಎಂ.ಕೆ. ಕೆಂಪೇಗೌಡ ಅವರ ಕೃತಿ 'ಗ್ರಾಮ ಸುರಾಜ್ಯ' ಇಂಗ್ಲಿಷ್ ಅವತರಣಿಕೆ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೆ, ಇನ್ನೂ ಅನೇಕ ಕೆಲಸಗಳು ಆಗಬೇಕಿವೆ. ಗ್ರಾಮ ಪಂಚಾಯಿತಿಗಳಲ್ಲಿ 82 ಸೇವೆಗಳನ್ನು ನೀಡಲಾಗುತ್ತಿದೆ. ಇನ್ನೂ 36 ಸೇವೆಗಳು ಸದ್ಯದಲ್ಲಿಯೇ ಸೇರ್ಪಡೆಗೊಳ್ಳಲಿವೆ. ಈ ವರ್ಷದ ಅಂತ್ಯಕ್ಕೆ 150 ಸೇವೆಗಳನ್ನು ಒದಗಿಸುವುದು ನಮ್ಮ ಗುರಿ' ಎಂದು ಹೇಳಿದರು.



ವಿಸ್ಮಯ ಬುಕ್ ಹೌಸ್ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌.ಎಂ. ವಿಜಯಾನಂದ್ ಹಾಗೂ ಉಮಾ ಮಹಾದೇವನ್ ಚರ್ಚೆಯಲ್ಲಿ ತೊಡಗಿದ್ದರು. ಸಿ. ನಾರಾಯಣಸ್ವಾಮಿ ಹಾಗೂ ವಿ.ವೈ. ಘೋರ್ಪಡೆ ಹಾಜರಿದ್ದರು ಪ್ರಜಾವಾಣಿ ಚಿತ್ರ

'ಚುನಾವಣೆ ವಿಳಂಬ ಸಂವಿಧಾನ ಬಾಹಿರ'

'ಪಂಚಾಯತ್‌ರಾಜ್ ಕಾಯ್ದೆ ಪ್ರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವುದು, ನಡೆಸದಿರುವುದು ಸಂವಿಧಾನ ಬಾಹಿರ. ಆದರೂ ಕೆಲವರು ಬದ್ಧತೆಯನ್ನು ಮರೆತು ರಾಜಕೀಯಕ್ಕಾಗಿ ಕಾಯ್ದೆಯನ್ನು ದುರುಪಯೋಗಪಡಿಸಿಕೊಳ್ಳು ತ್ತಿದ್ದಾರೆ' ಎಂದು 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಆರೋಪಿಸಿದರು.

ಚುನಾವಣಾ ಆಯೋಗವು ಈ ಬಗ್ಗೆ ಚಿಂತನೆ ನಡೆಸಿ ನಿಗದಿತ ಕಾಲಕ್ಕೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳ ಬೇಕು. ಅದಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡಬೇಕು ಎಂದು ಆಗ್ರಹಿಸಿದರು.

ಪಂಚಾಯತ್‌ರಾಜ್ ಇಲಾಖೆ ಇತರ ಇಲಾಖೆಗಳೊಂದಿಗೆ ಸಂವಹನ ಸಾಧಿಸಿ ಕೆಲಸ ಮಾಡಬೇಕಿದೆ. ಅದಕ್ಕಾಗಿ ಈಗಾಗಲೇ ಆರೋಗ್ಯ, ಕೃಷಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ತೋಟಗಾರಿಕೆ ಸೇರಿದಂತೆ 11 ಇಲಾಖೆಗಳನ್ನು ಸೇರಿಸಿ ನೀಲನಕ್ಷೆ ಮಾಡಲಾಗಿದೆ ಎಂದರು.

ಗ್ರಾಮ ಪಂಚಾಯಿತಿಗಳು ಸಕ್ರಿಯವಾಗಿ ಕೆಲಸ ಮಾಡಿದರೆ ಬಾಲ್ಯ ವಿವಾಹ ಸಹಿತ ಅನೇಕ ಸಾಮಾಜಿಕ ಪಿಡುಗುಗಳನ್ನು ದೂರ ಮಾಡಿ, ಗ್ರಾಮಗಳ ಅಭಿವೃದ್ಧಿ ಮಾಡಬಹುದು. ನಾಡ ಕಚೇರಿ, ತಾಲ್ಲೂಕು ಕಚೇರಿಗಳಿಗೆ ಜನರ ಹೋಗುವ ಅಗತ್ಯವಿಲ್ಲ, ಗ್ರಾಮದಲ್ಲೇ ಕೆಲಸಗಳಾಗುವಂತೆ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕೃತಿ ಕುರಿತು ಕೇರಳ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್‌.ಎಂ. ವಿಜಯಾನಂದ್ ಮಾತನಾಡಿದರು. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಸಿ.ನಾಗಣ್ಣ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ್ ಹೆಗಡೆ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ತಜ್ಞ ಸದಸ್ಯ ಡಿ.ಆರ್. ಪಾಟೀಲ, ಕರ್ನಾಟಕ ರಾಜ್ಯ ಪಂಚಾಯತ್ ಪರಿಷತ್ ಅಧ್ಯಕ್ಷ ವಿ.ವೈ. ಘೋರ್ಪಡೆ ಉಪಸ್ಥಿತರಿದ್ದರು.

ಬೆಳಗಾವಿ-ಬೆಂಗಳೂರು: ವಂದೇ ಭಾರತ್

ಇದೇ 10ರಂದು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ-ಬೆಂಗಳೂರು ನಡುವೆ ಆಗಸ್ಟ್ 11ರಿಂದ ಸಂಚರಿಸಲಿರುವ ಹೊಸ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಆ.10ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ.

ಉತ್ತರ ಕರ್ನಾಟಕ ಮತ್ತು ರಾಜ್ಯ ರಾಜಧಾನಿಯ ನಡುವಿನ ಸಂಪರ್ಕವನ್ನು ಹೆಚ್ಚಿಸುವ ಉದ್ದೇಶದಿಂದ ನೈರುತ್ಯ ರೈಲ್ವೆಯು ವಂದೇ ಭಾರತ್ ಅರೆ-ಹೈಸ್ಪೀಡ್ ರೈಲನ್ನು ಪರಿಚಯಿಸುತ್ತಿದೆ. ಬುಧವಾರ ಹೊರತುಪಡಿಸಿ ವಾರದ ಆರು ದಿನಗಳಲ್ಲಿ ಪ್ರತಿದಿನ ಬೆಳಿಗ್ಗೆ 5.20ಕ್ಕೆ ಬೆಳಗಾವಿಯಿಂದ ಹೊರಡಲಿದೆ. ಮಧ್ಯಾಹ್ನ 1.50ಕ್ಕೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣಕ್ಕೆ ತಲುಪಲಿದೆ. ಮಧ್ಯಾಹ್ನ 2.20ಕ್ಕೆ ಕೆಎಸ್‌ಆರ್ ಬೆಂಗಳೂರಿನಿಂದ ವಾಪಸ್ ಹೊರಡಲಿದ್ದು, ರಾತ್ರಿ 10.40ಕ್ಕೆ ಬೆಳಗಾವಿ ತಲುಪಲಿದೆ.

ಬೆಳಗಾವಿಯಿಂದ ಬರುವಾಗ ಬೆಳಿಗ್ಗೆ 7.08ಕ್ಕೆ ಧಾರವಾಡ, 7.30ಕ್ಕೆ ಎಸ್‌ಎಸ್‌ಎಸ್ ಹುಬ್ಬಳ್ಳಿ, 8.35ಕ್ಕೆ ಎಸ್‌ಎಂಎಂ ಹಾವೇರಿ, ಬೆಳಿಗ್ಗೆ 9.25ಕ್ಕೆ ದಾವಣಗೆರೆ, ಮಧ್ಯಾಹ್ನ 12.15ಕ್ಕೆ ತುಮಕೂರು, ಮಧ್ಯಾಹ್ನ 1.03ಕ್ಕೆ ಯಶವಂತಪುರ ರೈಲು ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ. ಬೆಂಗಳೂರಿನಿಂದ ಹೊರಡುವ ರೈಲು ಮಧ್ಯಾಹ್ನ 2.28ಕ್ಕೆ ಯಶವಂತಪುರ 3.03ಕ್ಕೆ ತುಮಕೂರು, ಸಂಜೆ 5.48ಕ್ಕೆ ದಾವಣಗೆರೆ, ಸಂಜೆ 6.48ಕ್ಕೆ ಎಸ್‌ಎಂಎಂ ಹಾವೇರಿ, ರಾತ್ರಿ 8ಕ್ಕೆ ಎಸ್‌ಎಸ್‌ಎಸ್ ಹುಬ್ಬಳ್ಳಿ ಹಾಗೂ ರಾತ್ರಿ 8.25ಕ್ಕೆ ಧಾರವಾಡದಲ್ಲಿ ನಿಲುಗಡೆ ಹೊಂದಲಿದೆ.

ವಂದೇ ಭಾರತ್ ರೈಲು 8 ಬೋಗಿಗಳನ್ನು ಒಳಗೊಂಡಿದೆ. ಇದರಲ್ಲಿ ನಾಲ್ಕು ಮೋಟರ್ ಕಾರ್, 1 ಟ್ರೈಲಿಂಗ್ ಕಾರ್, ಒಂದು ಎಕ್ಸಿಕ್ಯುಟಿವ್ ಕ್ಲಾಸ್/ಟ್ರೈಲಿಂಗ್ ಕಾರ್ ಮತ್ತು 2 ಡ್ರೈವಿಂಗ್ ಟ್ರೈಲರ್ ಕಾರ್‌ಗಳನ್ನು ಹೊಂದಿದೆ. ಟಿಕೆಟ್ ಕಾಯ್ದಿರಿಸಲು ಮತ್ತು ಇತರ ವಿಚಾರಣೆಗಳಿಗಾಗಿ, ಪ್ರಯಾಣಿಕರು ಭಾರತೀಯ ರೈಲ್ವೆಯ ಅಧಿಕೃತ ವೆಬ್‌ಸೈಟ್‌ಗೆ (https://indianrailways.gov.in) ಭೇಟಿ ನೀಡಬಹುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ದರಪಟ್ಟಿ (₹ ಗಳಲ್ಲಿ)

ಎಲ್ಲಿಂದ-ಎಲ್ಲಿಗೆ	ಚೇರ್‌ಕಾರ್ (ಸಿಸಿ)	ಎಕ್ಸಿಕ್ಯೂಟಿವ್ ಚೇರ್‌ಕಾರ್ (ಇಸಿ)
ಬೆಂಗಳೂರು-ಬೆಳಗಾವಿ	1264	2535
ಬೆಂಗಳೂರು-ಧಾರವಾಡ	1049	2098
ಬೆಂಗಳೂರು-ಹುಬ್ಬಳ್ಳಿ	1090	2034
ಬೆಂಗಳೂರು-ಹಾವೇರಿ	907	1810
ಬೆಂಗಳೂರು-ದಾವಣಗೆರೆ	800	1590
ಬೆಂಗಳೂರು-ತುಮಕೂರು	403	788
ಬೆಂಗಳೂರು-ಯಶವಂತಪುರ	344	670
ಬೆಳಗಾವಿ-ಧಾರವಾಡ	449	894
ಬೆಳಗಾವಿ-ಹುಬ್ಬಳ್ಳಿ	487	973
ಬೆಳಗಾವಿ-ಹಾವೇರಿ	616	1230
ಬೆಳಗಾವಿ-ದಾವಣಗೆರೆ	739	1468
ಬೆಳಗಾವಿ-ತುಮಕೂರು	768	2347
ಬೆಳಗಾವಿ-ಯಶವಂತಪುರ	1264	2508
ಬೆಳಗಾವಿ-ಬೆಂಗಳೂರು	1264	2535

ಉದ್ಘಾಟನೆ ದಿನ ಬೆಳಗಾವಿಗೆ ಸಂಚಾರ



ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿರುವ ಬೆಳಗಾವಿ–ಬೆಂಗಳೂರು–ಬೆಳಗಾವಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

ಆಗಸ್ಟ್ 10ರಂದು ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ ಬಳಿಕ ಬೆಳಿಗ್ಗೆ 11.15ಕ್ಕೆ ಕೆಎಸ್‌ಆರ್ ಬೆಂಗಳೂರಿನಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ಹೊರಡಲಿದೆ. ರಾತ್ರಿ 8ಕ್ಕೆ ಬೆಳಗಾವಿಗೆ ತಲುಪಲಿದೆ.

'ಪ್ರತಿ ಮೆಟ್ರೊ ನಿಲ್ದಾಣದಲ್ಲೂ ಪ್ರಧಾನಿಗೆ ಸ್ವಾಗತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದ ಉದ್ಘಾಟನೆಗೆ ಆ.10ರಂದು ಬೆಂಗಳೂರಿಗೆ ಬರುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರತಿ ಮೆಟ್ರೊ ನಿಲ್ದಾಣಗಳಲ್ಲೂ ಬಿಜೆಪಿ ಕಾರ್ಯಕರ್ತರು ಸ್ವಾಗತಿಸಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಹಳದಿ ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರದಿಂದ ಎಂಟು ಲಕ್ಷ ಜನರಿಗೆ ಅನುಕೂಲ ಆಗಲಿದೆ. ಮೆಟ್ರೊ ಕಾಮಗಾರಿಯ ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರ ಶ್ರಮವಿದೆ. ಬೆಂಗಳೂರಿನಲ್ಲಿ ಅಂದು ಹಬ್ಬದ ವಾತಾವರಣ ಇರುತ್ತದೆ ಎಂದರು.

ಮೇಖ್ರಿ ವೃತ್ತ, ಚಾಲುಕ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್ ಎಂಡ್ ವೃತ್ತ, ರಾಗಿಗುಡ್ಡ, ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ಎಲ್ಲ ನಿಲ್ದಾಣಗಳಲ್ಲೂ ಬಿಜೆಪಿ ಕಾರ್ಯಕರ್ತರು ಪ್ರಧಾನಿ ಅವರಿಗೆ ಸ್ವಾಗತ ಕೋರುತ್ತಾರೆ ಎಂದು ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಮೆಟ್ರೊ ಸಂಪರ್ಕ ಜಾಲ ಸುಮಾರು 100 ಕಿ.ಮೀ ತಲುಪಲು ನರೇಂದ್ರ ಮೋದಿ ಅವರು ಬೆಂಗಳೂರಿನ ಮೂಲಸೌಕರ್ಯಕ್ಕೆ ಕೊಟ್ಟ ಆದ್ಯತೆಯೇ ಕಾರಣ. 2014ರಲ್ಲಿ ಮೋದಿಯವರು ಪ್ರಧಾನಿ ಆಗುವುದಕ್ಕೆ ಮೊದಲು ಬೆಂಗಳೂರಿನ ಮೆಟ್ರೊ ಸಂಪರ್ಕ ಜಾಲ 7.5 ಕಿಮೀ. ಇತ್ತು. ದೆಹಲಿ ನಂತರ ಅತಿ ಹೆಚ್ಚು ಸಂಪರ್ಕ ಇರುವ, ವಿಸ್ತರಣೆ ಆಗುತ್ತಿರುವ ಮೆಟ್ರೊ ಬೆಂಗಳೂರು ಎಂದು ವಿವರ ನೀಡಿದರು.

ಪ್ರಧಾನಿ ಸಾಗುವ ಮಾರ್ಗ

ಪ್ರಧಾನಿ ನರೇಂದ್ರ ಮೋದಿ ಅವರು ಮೇಖ್ರಿ ವೃತ್ತದ ಬಳಿ ಇರುವ ವಾಯುಪಡೆಯ ತರಬೇತಿ ಕೇಂದ್ರದ ಹೆಲಿ ಪ್ಯಾಡ್‌ಗೆ ಬಂದಿಳಿಯುವರು. ಅಲ್ಲಿಂದ, ಚಾಲುಕ್ಯ ವೃತ್ತ ಮೂಲಕ ಸಂಗೊಳ್ಳಿ ರಾಯಣ್ಣ ನಿಲ್ದಾಣ ತಲುಪುವರು. ಅಲ್ಲಿ ಬೆಂಗಳೂರು– ಬೆಳಗಾವಿ ನಡುವಿನ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರುವರು.

ನಂತರ ಜಯನಗರ ಸೌತ್ ಎಂಡ್ ವೃತ್ತದ ಮೂಲಕ ರಾಗಿಗುಡ್ಡ ತಲುಪುವರು. ಎಲೆಕ್ಟ್ರಾನಿಕ್ ಸಿಟಿ ಮೆಟ್ರೊ ನಿಲ್ದಾಣಕ್ಕೆ ಭೇಟಿ ನೀಡುವರು.

ಪ್ರಧಾನಿ ಬೆಂಗಳೂರು ಭೇಟಿಯ ಕಾರಣ ರಾಹುಲ್ ವಿರುದ್ಧ ಬಿಜೆಪಿ ಆ.8ರಂದು ಹಮ್ಮಿಕೊಂಡಿದ್ದ ಪ್ರತಿಭಟನೆ ರದ್ದು ಮಾಡಲಾಗಿದೆ. ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಸಿದ್ಧತೆ ನಡೆಸಲಾಗಿದೆ.
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ

ನಗರದಲ್ಲಿ ಇಂದು

ಬುಕ್ ಬ್ರಹ್ಮ ಸಾಹಿತ್ಯ ಉತ್ಸವ: ವಿವಿಧ ಸಾಹಿತ್ಯ ಗೋಷ್ಠಿಗಳು ಹಾಗೂ ಸಂವಾದ, ಸಾಂಸ್ಕೃತಿಕ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ಆಯೋಜನೆ: ಬುಕ್ ಬ್ರಹ್ಮ ಸಂಸ್ಥೆ, ಸ್ಥಳ: ಸೇಂಟ್ ಜಾನ್ಸ್ ಸಭಾಂಗಣ, ಕೋರಮಂಗಲ, ಬೆಳಿಗ್ಗೆ 10ರಿಂದ

ವಿಚಾರ ಸಂಕಿರಣ: 'ಎಸ್‌ಸಿ/ಎಸ್‌ಟಿ ದಲಿತರ ಜ್ವಲಂತ ಸಮಸ್ಯೆಗಳು: ಮೀಸಲಾತಿ ಏರಿಕೆ ರದ್ದು', 'ಪಿಟಿಸಿಎಲ್ ಕಾಯ್ದೆ ವಿರುದ್ಧ ಕೋರ್ಟ್ ತೀರ್ಪುಗಳು ಮತ್ತು ಪರಿಹಾರಗಳು' ಶೀರ್ಷಿಕೆಯಡಿ ವಿಚಾರ ಸಂಕಿರಣ ಹಾಗೂ ಭೀಮ ಅಭಿನಂದನಾ ಸಮಾರಂಭ, ಉದ್ಘಾಟನೆ: ರಾಮಲಿಂಗಾರೆಡ್ಡಿ, ವಿಷಯ ಮಂಡನೆ: ಡಿ.ಜಿ.ಸಾಗರ್, ಶ್ರೀಧರ್ ಕಲಿವೀರ, ಅಧ್ಯಕ್ಷತೆ: ಅಣ್ಣಯ್ಯ, ಆಯೋಜನೆ: ದಲಿತ ಸಂಘರ್ಷ ಸಮಿತಿ–ಕರ್ನಾಟಕ ರಾಜ್ಯ ಕೇಂದ್ರ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

ಯುವ ಸಂತೆ: ಉದ್ಘಾಟನೆ: ಎಸ್.ಜಿ. ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಭುವನೇಶ್ವರಿ, ವಾಸು ದೀಕ್ಷಿತ್, ಸಜೂ ಭಾಸ್ಕರನ್, ಎಚ್.ಆರ್. ಜಯರಾಂ, ಸವಿತಾ ಸುರೇಶ್‌ಬಾಬು, ಆಯೋಜನೆ ಹಾಗೂ ಸ್ಥಳ: ಗ್ರೀನ್ ಪಾತ್ ಆರ್ಗ್ಯಾನಿಕ್ ರೆಸ್ಟೋರೆಂಟ್, ಮಲ್ಲೇಶ್ವರ, ಸಂಜೆ 4

ವಚನ ಶ್ರಾವಣ: ವಚನ ವಾಚನ: ಐಶ್ವರ್ಯ, ಮಹೇಶ್, ವಚನ ಗಾಯನ: ಗೀತಾ ಬಣಕಾರ್, ವಚನ ಚಿಂತನ: ವಿದ್ಯಾಶ್ರೀ ಹರಕುಡೆ, ಅತಿಥಿಗಳು: ಮಧು ಶಿವಕುಮಾರ್, ರಾಜಾಗುರುಪ್ರಸಾದ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಜಾನಕಿ–ಲಕ್ಷ್ಮೀನಾರಾಯಣ ಅವರ ಮನೆಯಂಗಳ. #417, 5ನೇ ಮುಖ್ಯರಸ್ತೆ, 10ನೇ ತಿರುವು, ಭವಾನಿನಗರ, ಮಲ್ಲತ್ತಹಳ್ಳಿ, ಸಂಜೆ 4.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚನ್ನಮ್ಮ, ರಾಯಣ್ಣ ಇತಿಹಾಸ ಅನಾವರಣ

ಲಾಲ್‌ಬಾಗ್‌ನಲ್ಲಿ 218ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಚಾಲನೆ • ಆಗಸ್ಟ್ 18ರವರೆಗೆ ನಡೆಯಲಿರುವ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಸ್ಯಕಾಶಿ' ಲಾಲ್‌ಬಾಗ್‌ನ ಗಾಜಿನ ಮನೆಯೊಳಗೆ ಬಣ್ಣ ಬಣ್ಣದ ಹೂವುಗಳಲ್ಲಿ ಅರಳಿದ ಕಿತ್ತೂರು ಕೋಟೆ, ಅದರ ಮೇಲೆ ಕಿತ್ತೂರು ಸಂಸ್ಥಾನದ ಲಾಂಛನ, ನೂರಾರು ಪುಷ್ಪಗಳ ಮಧ್ಯೆ ಕಿತ್ತೂರು ರಾಣಿ ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗಳು ನೋಡಗರ ಕಣ್ಮನ ಸೆಳೆಯುತ್ತಿವೆ.

ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ 'ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ವಿಷಯ ಆಧಾರಿತ 218ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು. ಪ್ರದರ್ಶನವು ಆಗಸ್ಟ್ 7ರಿಂದ 18ರ ವರೆಗೆ ನಡೆಯಲಿದೆ.

ಗಾಜಿನ ಮನೆಯ ಪ್ರವೇಶ ದ್ವಾರದ ಭಾಗದಲ್ಲಿ ಎಕ್ಸಾಟಿಕ್ ಆರ್ಕಿಡ್ಸ್ ಜಾತಿಯ ಪೆಲನಾಪ್ಸಿಸ್, ಡೆಂಡ್ರೊಬಿಯಂ, ವಾಂಡಾ, ಮೊಕಾರಾ, ಕ್ಯಾಟ್ಲಿಲಿಯಾ, ಆನ್ಸಿಡಿಯಂ ಹಾಗೂ ಕ್ಯಾಲಾಲಿಲ್ಲಿ, ವೈವಿಧ್ಯಮಯ ಜೆರೇನಿಯಂ ಜಾತಿಯ 1.75 ಲಕ್ಷಕ್ಕೂ ಹೆಚ್ಚಿನ ಹೂವು ಮತ್ತು ಎಲೆ ಜಾತಿಯ ಗಿಡಗಳನ್ನು ಪ್ರದರ್ಶಿಸಲಾಗಿದೆ. ಇದರ ಮುಂಭಾಗದಲ್ಲಿ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಪುತ್ಥಳಿಗಳು ರಾರಾಜಿಸುತ್ತಿವೆ.

ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಕಾರ್ಯಕ್ಷೇತ್ರವಾಗಿದ್ದ ಕಿತ್ತೂರು ಕೋಟೆ ಮಾದರಿಯು ಪುಷ್ಪಗಳಲ್ಲಿ ಅನಾವರಣಗೊಂಡಿದೆ. ಇದು 18 ಅಡಿ ಎತ್ತರ, 34 ಅಡಿ ಸುತ್ತಳತೆಯನ್ನು ಹೊಂದಿದೆ. ಒಂದು ಬಾರಿಗೆ ಹಸಿರು, ಬಿಳಿ, ಕಂದು ಹಾಗೂ ಗುಲಾಬಿ ವರ್ಣದ 1.5 ಲಕ್ಷ ಡಚ್ ಗುಲಾಬಿ ಹೂವು, 1.5 ಲಕ್ಷ ಹೈಬ್ರಿಡ್ ಸೇವಂತಿಗೆ ಹಾಗೂ 30 ಸಾವಿರ ಕೋಲ್ಕತ್ತ ಸೇವಂತಿಗೆ ಹೂವುಗಳನ್ನು ಬಳಸಿಕೊಂಡು ಈ ಪರಿಕಲ್ಪನೆ ಸಿದ್ಧಪಡಿಸಲಾಗಿದೆ. ಒಟ್ಟಾರೆ ಈ ಮಾದರಿಗೆ 6.6 ಲಕ್ಷ ಹೂವುಗಳನ್ನು ಬಳಸಿಕೊಳ್ಳಲಾಗುತ್ತದೆ. ಇದು ಫಲಪುಷ್ಪ ಪ್ರದರ್ಶನದ ಆಕರ್ಷಣೆ ಆಗಿದೆ. ಕೋಟೆ ಮಾದರಿ ನಾಲ್ಕು ಮೂಲೆಗಳಲ್ಲಿ ಮಲ್ಲಸರ್ಜ, ರಾಜಗುರು, ಅಮಟೂರು ಬಾಳಪ್ಪ ಮತ್ತು ಸರದಾರ ಗುರುಸಿದ್ಧಪ್ಪ ಅವರ ಪ್ರತಿಮೆಗಳು ನೋಡುಗರನ್ನು ಸೆಳೆಯುತ್ತಿವೆ.

ಗಾಜಿನ ಮನೆಯ ಬಲಬದಿಯಲ್ಲಿ 12 ಅಡಿ ಎತ್ತರದ ಕೋಟೆ ವಿನ್ಯಾಸದ ವರ್ಟಿಕಲ್ ಗಾರ್ಡನ್ ಮಾದರಿ ರೂಪಿಸಲಾಗಿದೆ. ಈ ಕೋಟೆಯ ಮೇಲೆ 10 ಅಡಿ ಎತ್ತರದಲ್ಲಿ ಭಾರತದ ರಾಷ್ಟ್ರ ಲಾಂಛನ ತಲೆ ಎತ್ತಿದೆ. ಇದಕ್ಕೆ ವಿವಿಧ ವರ್ಣದ ಆಕ್ಸಿಕಾರ್ಡಿಯಂ ಗೋಲ್ಡ್, ಗ್ರೀನ್, ಬ್ರಾಂಜ್, ಸಿಂಗೋನಿಯಂ ರೆಡ್, ಕ್ಲೋರೋಫೈಟಮ್, ಸೇವಂತಿಗೆ, ಫರ್ನ್ಸ್, ಗುಲಾಬಿ ಸೇರಿದಂತೆ ಒಟ್ಟು 1.75 ಲಕ್ಷಕ್ಕೂ ಹೆಚ್ಚು ಆಕರ್ಷಕ ಗಿಡಗಳನ್ನು ಬಳಸಿಕೊಂಡು ಸಿಂಗಾರ ಮಾಡಲಾಗಿದೆ. ಇದರ ಮೇಲೆ ಪುಷ್ಪಾಲಂಕೃತ ಅಶೋಕ ಸ್ತಂಭ ಗಮನ ಸೆಳೆಯುತ್ತಿದೆ.

ಗಾಜಿನ ಮನೆಯ ಹಿಂಭಾಗದಲ್ಲಿ ರಾಣಿ ಅಬ್ಬಕ್ಕ ದೇವಿ, ಚೆನ್ನಾ ಭೈರಾದೇವಿ, ಬೆಳವಾಡಿ ಮಲ್ಲಮ್ಮ, ಕೆಳದಿ ಚನ್ನಮ್ಮ, ವೀರಮ್ಮಾಜಿ, ಒನಕೆ ಓಬವ್ವನವರ ಪ್ರತಿಮೆಗಳು ರಾರಾಜಿಸುತ್ತಿವೆ. ಈ ಹೋರಾಟಗಾರ್ತಿಯರ ಬಗ್ಗೆ ಚಿತ್ರ ಮಾಹಿತಿಯನ್ನು ಪ್ರದರ್ಶಿಸಲಾಗಿದೆ. ಮೊದಲ ದಿನ ವಯಸ್ಕರು, ಮಕ್ಕಳು ಸೇರಿ 14,317 ಮಂದಿ ಫಲಪುಷ್ಪ ಪ್ರದರ್ಶನ ವೀಕ್ಷಿಸಿದ್ದಾರೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ರಾಯಣ್ಣ ಹುತಾತ್ಮರಾಗುವ ಸನ್ನಿವೇಶದ ಮರುಸೃಷ್ಟಿ
- ಫಲಪುಷ್ಪ ಪ್ರದರ್ಶನಕ್ಕೆ 105 ವಿಧದ ಹೂವುಗಳ ಬಳಕೆ
- ಪ್ರದರ್ಶನಕ್ಕೆ ಸುಮಾರು 36 ಲಕ್ಷಕ್ಕೂ ಹೆಚ್ಚು ಹೂವುಗಳ ಬಳಕೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗಮನ ಸೆಳೆಯುತ್ತಿರುವ ಐಕ್ಯ ಸ್ಮಾರಕದ ಮಾದರಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ಅವರ ಐಕ್ಯ ಸ್ಮಾರಕದ ಮಾದರಿಯ ಕೇಂದ್ರ ಗೋಪುರವನ್ನು ಹೂವುಗಳಲ್ಲಿ ಮರು ಸೃಷ್ಟಿಸಲಾಗಿದೆ. ಈ ಗೋಪುರವು ಕಂಬಗಳಿಂದ ಕೂಡಿದ್ದು, 8 ಅಡಿ ಅಗಲ ಹಾಗೂ 13 ಅಡಿ ಎತ್ತರದ ಆಕರ್ಷಕ ಪುಷ್ಪ ಕಮಾನುಗಳನ್ನು ಹೊಂದಿದೆ. ಈ ಪುಷ್ಪ ಮಾದರಿಗೆ ಒಂದು ಬಾರಿಗೆ 50 ಸಾವಿರ ಗುಲಾಬಿ ಹೂವುಗಳು, 2.40 ಲಕ್ಷ ಸೇವಂತಿಗೆ, 12 ಸಾವಿರಕ್ಕೂ ಹೆಚ್ಚು ಗ್ರೀನ್ ಪೋಲಿಯೇಜ್‌ಗಳನ್ನು ಬಳಸಿಕೊಳ್ಳಲಾಗಿದೆ. ಇದು ಸಾರ್ವಜನಿಕರ ಕಣ್ಮನ ಸೆಳೆಯುತ್ತಿದ್ದು, ಇದರ ಮುಂಭಾಗದಲ್ಲಿ ಸಾರ್ವಜನಿಕರು ಫೋಟೊ ತೆಗೆಸಿಕೊಳ್ಳುತ್ತಿದ್ದರು.



ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ಶಾಲಾ ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸಿದರು ಚಿತ್ರಗಳು: ರಂಜು ಪಿ.



ಬೆಂಗಳೂರಿಗೆ ಹಲವು ಬಾರಿ ಭೇಟಿ ನೀಡಿದ್ದೇನೆ. ಲಾಲ್‌ಬಾಗ್‌ನ ಫಲಪುಷ್ಪ ಪ್ರದರ್ಶನಕ್ಕೆ ಮೊದಲ ಬಾರಿ ಭೇಟಿ ನೀಡುತ್ತಿದ್ದೇನೆ. ಇಲ್ಲಿ ಭಾರತೀಯ ಹಾಗೂ ಬೆಂಗಳೂರಿನ ಸಂಸ್ಕೃತಿಯನ್ನು ನೋಡಬಹುದು
ಕೇಟ್, ಆಸ್ಟ್ರೇಲಿಯಾ



ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಬಗ್ಗೆ ಹೆಚ್ಚು ಮಾಹಿತಿ ಇಲ್ಲ. ವೈವಿಧ್ಯಮಯ ಪುಷ್ಪಗಳನ್ನು ಒಂದೆಡೆ ನೋಡುತ್ತಿರುವುದು ಖುಷಿ ನೀಡಿದೆ
ಜೆಮ್ಮಿ, ಆಸ್ಟ್ರೇಲಿಯಾ

ಚನ್ನಮ್ಮನ ಜಯಂತಿ ಪ್ರಾರಂಭಿಸಿದ್ದು ನಾನೇ: ಸಿ.ಎಂ ಸಿದ್ದರಾಮಯ್ಯ

'ನಾನು ಮೊದಲ ಸಲ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರದ ವತಿಯಿಂದಲೇ ಕಿತ್ತೂರು ರಾಣಿ ಚನ್ನಮ್ಮ ಅವರ ಜಯಂತಿ ಆಚರಿಸುವುದಕ್ಕೆ ಚಾಲನೆ ನೀಡಲಾಗಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಫಲಪುಷ್ಪ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, 'ಸಂಗೊಳ್ಳಿ ರಾಯಣ್ಣನವರ ಗಲ್ಲಿಗೇರಿಸಿದ ನಂದಗಡ ಹಾಗೂ ಅವರ ಜನ್ಮಸ್ಥಳ ಸಂಗೊಳ್ಳಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರನ್ನು ಸ್ಮರಿಸಿಕೊಳ್ಳಬೇಕು. ಈ ಫಲಪುಷ್ಪ ಪ್ರದರ್ಶನದ ಮೂಲಕ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸುತ್ತಿರುವುದು ಶ್ಲಾಘನೀಯ' ಎಂದು ಹೇಳಿದರು.

ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಡಾ.ಎಂ.ಸಿ.ಸುಧಾಕರ್, ಶಾಸಕ ಉದಯ್ ಬಿ.ಗರುಡಾಚಾರ್, ಹರಿಹರ ಪಂಚಮಸಾಲಿ ವೀರಶೈವ ಲಿಂಗಾಯಿತ ಪೀಠದ ವಚನಾನಂದ ಸ್ವಾಮೀಜಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ನಿರ್ದೇಶಕ ರಮೇಶ್ ಡಿ.ಎಸ್. ಉಪಸ್ಥಿತರಿದ್ದರು

ಪುಷ್ಪಗಳಲ್ಲಿ ಅರಳಿದ ಕಿತ್ತೂರು ರಾಣಿ ಚನ್ನಮ್ಮನ ಐಕ್ಯ ಸ್ಮಾರಕ



ಹೈಕೋರ್ಟ್ ಆದೇಶಕ್ಕೆ ಮನ್ನಣೆ ನೀಡಿದ ಸಾರಿಗೆ ನಿಗಮಗಳ ಕಾರ್ಮಿಕರು

ನೌಕರರ ಮುಷ್ಕರ: ಪಿಐಎಲ್ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರೆ ನೀಡಲಾಗಿದ್ದ ಮುಷ್ಕರವನ್ನು ಹೈಕೋರ್ಟ್ ಆದೇಶಕ್ಕೆ ಮನ್ನಣೆ ನೀಡಿ ಹಿಂಪಡೆಯಲಾಗಿದೆ' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ.

'ಮುಷ್ಕರದಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ' ಎಂದು ಆರೋಪಿಸಿ ನಗರದ ಜೆ.ಸುನಿಲ್ ಸೇರಿದಂತೆ ಐವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರತಿವಾದಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪರ ಹಿರಿಯ ವಕೀಲ ಕೆ.ಬಿ.ನಾರಾಯಣ ಸ್ವಾಮಿ, ಹೈಕೋರ್ಟ್ ಆದೇಶಕ್ಕೆ ತಲೆಬಾಗಿ ಮುಷ್ಕರ ಹಿಂಪಡೆದಿರುವ ಬಗ್ಗೆ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಅರ್ಜಿದಾರರ ಉದ್ದೇಶ ಈಡೇರಿದೆ. ಹಾಗಾಗಿ, ವಿಚಾರಣೆ ಮುಂದುವರಿಸುವುದು ವ್ಯರ್ಥ. ಆದಾಗ್ಯೂ, ಸಂಧಾನ ಮುಂದುವರಿಸಿ' ಎಂದು ನಾರಾಯಣ ಸ್ವಾಮಿ ಅವರಿಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು. ಅರ್ಜಿದಾರರ ಪರ ವಕೀಲ ದೀಕ್ಷಾ ಅಮೃತೇಶ್ ಹಾಜರಿದ್ದರು.

ಹಾಜರಾತಿ ಮಾನದಂಡ: ಅರ್ಜಿ ವಿಚಾರಣೆಗೆ ನಕಾರ

'ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದುಕೊಳ್ಳುವುದಕ್ಕೆ ವಿಶ್ವವಿದ್ಯಾಲಯಗಳು ನಿಗದಿಪಡಿಸುವ ಹಾಜರಾತಿ ಮಿತಿಯ ಮಾನದಂಡದ ಪುನರಾವಲೋಕನಕ್ಕೆ ಉನ್ನತ ಮಟ್ಟದ ಸಮಿತಿ ರಚಿಸಲು ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯ ವಿಚಾರಣೆಗೆ ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಬೆಂಗಳೂರಿನ ಭರತ್ ರಾಜ್ ರೆಡ್ಡಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, 'ಶೈಕ್ಷಣಿಕ ನೀತಿ ರೂಪಿಸುವ ವಿಚಾರದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುವುದಿಲ್ಲ. ಮುಖ್ಯವಾಗಿ ಈ ರೀತಿಯ ಸಾಮಾನ್ಯ ಆಕ್ಷೇಪಣೆಗಳ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಒಂದು ವೇಳೆ ಸಮಸ್ಯೆ ಎದುರಿಸುತ್ತಿರುವ ವಿದ್ಯಾರ್ಥಿಗಳೇನಾದರೂ ನ್ಯಾಯಾಲಯದ ಮೆಟ್ಟಿಲೇರಿದರೆ ಆಗ ಪರಿಗಣಿಸಬಹುದು' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿತು.

ಶೋಕಾಸ್ ನೋಟಿಸ್ ರದ್ದು ಮಾಡಲು ಆಗ್ರಹ

ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ ಎಂಬ ಕಾರಣಕ್ಕೆ ಸಾರಿಗೆ ನಿಗಮಗಳು 30,000 ನೌಕರರಿಗೆ ನೀಡಿರುವ ಆಪಾದನಾ ಪತ್ರ ಮತ್ತು ಕಾರಣ ಕೇಳಿರುವ ನೋಟಿಸ್‌ಗಳನ್ನು ರದ್ದು ಮಾಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ. ನೌಕರರಿಗೆ ನೋಟಿಸ್ ನೀಡುವ ಉತ್ಸಾಹ ತೋರುತ್ತಿರುವ ಆಡಳಿತ ವರ್ಗ, ನೌಕರರ ಬೇಡಿಕೆಗಳನ್ನು ಇತ್ಯರ್ಥಪಡಿಸಲು ತೋರಿಸಿದ್ದರೆ ಮುಷ್ಕರ ಮಾಡುವ ಸನ್ನಿವೇಶ ಬರುತ್ತಿರಲಿಲ್ಲ ಎಂದು ಸಮಿತಿಯ ಪದಾಧಿಕಾರಿಗಳು ಟೀಕಿಸಿದ್ದಾರೆ.

ವಿಧಾನಸಭೆಯ ಅಧಿವೇಶನ ಮುಗಿದ ಬಳಿಕ ಸಭೆ ಕರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸುವುದರಿಂದ ಮುಂದಿನ ರಾಜಿ ಸಂಧಾನ ಸಭೆ ಆ.28ರಂದು ನಿಗದಿಯಾಗಿದೆ ಎಂದು ತಿಳಿಸಿದ್ದಾರೆ.

ಹಬ್ಬದ ಸಮಯದಲ್ಲಿ ವಿಶೇಷ ರೈಲುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಮತ್ತು ಗಣೇಶ ಚತುರ್ಥಿಯ ಪ್ರಯುಕ್ತ ಯಶವಂತಪುರದಿಂದ ಮಡಗಾಂವ್, ಎಸ್‌ಎಂವಿಟಿಯಿಂದ ಬೆಳಗಾವಿಗೆ ವಿಶೇಷ ರೈಲುಗಳ ಸಂಚಾರ ಆರಂಭಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಯಶವಂತಪುರ–ಮಡಗಾಂವ್–ಯಶವಂತಪುರ ವಿಶೇಷ ಎಕ್ಸ್‌ಪ್ರೆಸ್ ರೈಲು ಆ.14ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಡಲಿದೆ. ಆ.15ರಂದು ಸಂಜೆ 6.50ಕ್ಕೆ ಮಡಗಾಂವ್ ತಲುಪಲಿದೆ. ಆ.17ರಂದು ರಾತ್ರಿ 10.15ಕ್ಕೆ ಮಡಗಾಂವ್‌ನಿಂದ ಹೊರಟು ಮರು ದಿನ ಸಂಜೆ 4.30ಕ್ಕೆ ಯಶವಂತಪುರ ತಲುಪಲಿದೆ.

ಚಿಕ್ಕಬಾಣಾವರ, ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟ್ವಾಳ, ಸುರತ್ಕಲ್, ಉಡುಪಿ, ಕುಂದಾಪುರ, ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್, ಅಂಕೋಲಾ ಮತ್ತು ಕಾರವಾರ ನಿಲ್ದಾಣಗಳಲ್ಲಿ ಈ ರೈಲು ನಿಲುಗಡೆ ಹೊಂದಲಿದೆ.

ಎಸ್‌ಎಂವಿಟಿ ಬೆಂಗಳೂರು–ಬೆಳಗಾವಿ–ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಆಗಸ್ಟ್ 22ರಂದು ಸಂಜೆ 7ಕ್ಕೆ ಎಸ್‌ಎಂವಿಟಿಯಿಂದ ಹೊರಡಲಿದೆ. ಮರು ದಿನ ಬೆಳಿಗ್ಗೆ 7.30ಕ್ಕೆ ಬೆಳಗಾವಿ ತಲುಪಲಿದೆ. ಆ.23ರಂದು ಸಂಜೆ 5.30ಕ್ಕೆ ಬೆಳಗಾವಿಯಿಂದ ಹೊರಟು, ಮರುದಿನ ಬೆಳಿಗ್ಗೆ 5ಕ್ಕೆ ಎಸ್‌ಎಂವಿಟಿ ತಲುಪಲಿದೆ.

ಇನ್ನೊಂದು ರೈಲು ಆ. 26ರಂದು ಸಂಜೆ 7ಕ್ಕೆ ಎಸ್‌ಎಂವಿಟಿಯಿಂದ ಹೊರಟು ಮರುದಿನ ಬೆಳಿಗ್ಗೆ 8.25ಕ್ಕೆ ಬೆಳಗಾವಿ ತಲುಪಲಿದೆ. ಬೆಳಗಾವಿಯಿಂದ ಆ.27ರಂದು ಸಂಜೆ 5.30ಕ್ಕೆ ಹೊರಟು, ಮರುದಿನ ಬೆಳಿಗ್ಗೆ 5ಕ್ಕೆ ಎಸ್‌ಎಂವಿಟಿ ತಲುಪಲಿದೆ.

ಈ ರೈಲುಗಳು ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಎಸ್‌ಎಂಎಂ ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆಯೋಜನೆ

'ಟ್ರಾನ್ಸ್ ಎಎಕ್ಸ್' ಶೃಂಗ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾದ 'ಟ್ರಾನ್ಸ್ ಎಎಕ್ಸ್' ಶೃಂಗವು ಹೃದಯ ಶಸ್ತ್ರಚಿಕಿತ್ಸೆ 'ಟ್ರಾನ್ಸ್ ಆಕ್ಸಿಲರಿ' ವಿಧಾನದ ಅಳವಡಿಕೆಯ ಮಹತ್ವ ಸಾರಿತು.

ಇತ್ತೀಚಿಗೆ ನಡೆದ ಈ ಶೃಂಗದಲ್ಲಿ ಕನಿಷ್ಠ ಗಾಯದ ಮೂಲಕ ಹೃದಯ ಶಸ್ತ್ರಚಿಕಿತ್ಸೆ ನಡೆಸುವ ವಿಧಾನದ ಬಗ್ಗೆ ವಿವರಿಸಲಾಯಿತು. 350ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಶೃಂಗದಲ್ಲಿ ಪಾಲ್ಗೊಂಡಿದ್ದರು. ನೂರಕ್ಕೂ ಅಧಿಕ ಮಂದಿ ಆನ್‌ಲೈನ್ ವೇದಿಕೆ ನೆರವಿನಿಂದ ಭಾಗವಹಿಸಿದ್ದರು.

'ಟ್ರಾನ್ಸ್ ಆಕ್ಸಿಲರಿ ವಿಧಾನದಲ್ಲಿ ಕಂಕುಳಿನ ಜಾಗದ ಮೂಲಕ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಎದೆಯ ಮಧ್ಯ ಭಾಗದಲ್ಲಿರುವ ಎಲುಬನ್ನು ಕತ್ತರಿಸದೆ ಶಸ್ತ್ರಚಿಕಿತ್ಸೆ ನಡೆಸಲು ಈ ವಿಧಾನದಿಂದ ಸಾಧ್ಯ' ಎಂದು ಸಂಸ್ಥೆಯ ವೈದ್ಯಕೀಯ ತಜ್ಞರು ಶೃಂಗದಲ್ಲಿ ವಿವರಿಸಿದರು.

'ಈ ವಿಧಾನದ ಶಸ್ತ್ರಚಿಕಿತ್ಸೆಯಲ್ಲಿ ವ್ಯಕ್ತಿ ತ್ವರಿತವಾಗಿ ಚೇತರಿಸಿಕೊಳ್ಳುತ್ತಾನೆ. ನೋವು ಕೂಡ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ' ಎಂದು ತಿಳಿಸಿದ ಸಂಸ್ಥೆಯ ಡಾ. ರಾಜೇಶ್ ಕಿಶನ್ ರಾವ್, ಸಂಸ್ಥೆಯಲ್ಲಿ ಟ್ರಾನ್ಸ್ ಆಕ್ಸಿಲರಿ ವಿಧಾನದಲ್ಲಿ ನಡೆಸಲಾದ 500ಕ್ಕೂ ಅಧಿಕ ಶಸ್ತ್ರಚಿಕಿತ್ಸೆಯ ಅನುಭವ ಹಂಚಿಕೊಂಡರು.

ಸಂಸ್ಥೆಯ ನಿರ್ದೇಶಕ ಪ್ರೊ.ಕೆ.ಎಸ್. ರವೀಂದ್ರನಾಥ್, ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಿಸಿನ್, ಇಲಾಖೆ ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್, ಶೃಂಗದ ಸಂಘಟನಾ ಕಾರ್ಯದರ್ಶಿ ಡಾ. ಶಿಲ್ಪಾ ಸುರೇಶ್ ಪಾಲ್ಗೊಂಡಿದ್ದರು.



ಶೃಂಗದ ಉದ್ಘಾಟನಾ ಸಮಾರಂಭದಲ್ಲಿ ಪ್ರೊ.ಕೆ.ಎಸ್. ರವೀಂದ್ರನಾಥ್, ಮೊಹಮ್ಮದ್ ಮೊಹಿಸಿನ್, ಡಾ.ಬಿ.ಎಲ್. ಸುಜಾತಾ ರಾಥೋಡ್ ಹಾಗೂ ವಿದೇಶಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು

ಸ್ವಾತಂತ್ರ್ಯ ಉದ್ಯಾನದ ಸುತ್ತ ದಟ್ಟಣೆ ಸಾಧ್ಯತೆ

ಮತಗಳ್ಳತನದ ಆರೋಪ, ಕಾಂಗ್ರೆಸ್‌ನಿಂದ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಹದೇವಪುರ ಮತ್ತು ರಾಜಾಜಿನಗರದಲ್ಲಿ ಮತಗಳ್ಳತನ ನಡೆದಿದೆ ಎಂದು ಆರೋಪಿಸಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆಗಸ್ಟ್ 8ರಂದು ಕಾಂಗ್ರೆಸ್ ಪ್ರತಿಭಟನೆ ಹಮ್ಮಿಕೊಂಡಿದೆ.

ಪ್ರತಿಭಟನೆಗೆ ಅಪಾರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೇರುವ ನಿರೀಕ್ಷೆಯಿದ್ದು ಸ್ವಾತಂತ್ರ್ಯ ಉದ್ಯಾನ, ವಿಧಾನಸೌಧದ ಸುತ್ತಮುತ್ತಲ ರಸ್ತೆಗಳು, ಚಾಲುಕ್ಯ ವೃತ್ತ, ಅರಮನೆ ರಸ್ತೆ, ನೃಪತುಂಗ ರಸ್ತೆ, ಮೈಸೂರು ಬ್ಯಾಂಕ್ ವೃತ್ತ ಹಾಗೂ ಮೆಜೆಸ್ಟಿಕ್ ಆಸುಪಾಸಿನಲ್ಲಿ ವಾಹನ ಚಾಲಕರು ಹಾಗೂ ದ್ವಿಚಕ್ರ ವಾಹನಗಳ ಸವಾರರಿಗೆ ಶುಕ್ರವಾರ ದಿನವಿಡೀ ದಟ್ಟಣೆಯ ಬಿಸಿ ತಟ್ಟುವ ಸಾಧ್ಯತೆಯಿದೆ.

ಪ್ರತಿಭಟನೆ ಹಿನ್ನೆಲೆಯಲ್ಲಿ ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಶೇಷಾದ್ರಿ ರಸ್ತೆ, ಸ್ವಾತಂತ್ರ್ಯ ಉದ್ಯಾನ ಸೇರಿದಂತೆ ಹಲವು ಕಡೆ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಸಂಚಾರ ನಿರ್ಬಂಧ: ಶಾಂತಲಾ ಜಂಕ್ಷನ್, ಆನಂದ ರಾವ್ ಮೇಲ್ಸೇತುವೆ, ಜೆಡಿಎಸ್ ಹಳೇ ಕಚೇರಿ ಕ್ರಾಸ್, ಶೇಷಾದ್ರಿ ರಸ್ತೆಯಿಂದ ಸ್ವಾತಂತ್ರ್ಯ ಉದ್ಯಾನದ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಅಲ್ಲದೇ ಮೈಸೂರು ಬ್ಯಾಂಕ್ ಕಡೆಯಿಂದ ಚಾಲುಕ್ಯ ವೃತ್ತದ ಕಡೆಗೆ ಹಾಗೂ ಚಾಲುಕ್ಯ ವೃತ್ತದಿಂದ ಮೈಸೂರು ಬ್ಯಾಂಕ್ ಕಡೆಗೆ, ಕಾಳಿದಾಸ ರಸ್ತೆಯ ಕನಕದಾಸ ಜಂಕ್ಷನ್ ಕಡೆಯಿಂದ ಸ್ವಾತಂತ್ರ್ಯ ಉದ್ಯಾನ ಕಡೆಗೆ, ಮೌರ್ಯ, ಸುಬ್ಬಣ್ಣ ಜಂಕ್ಷನ್‌ನಿಂದ ಸ್ವಾತಂತ್ರ್ಯ ಉದ್ಯಾನ ಕಡೆಗೆ ವಾಹನ ಸಂಚಾರ ನಿರ್ಬಂಧ ಮಾಡಲಾಗಿದೆ.

ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ: ಲುಲು ಮಾಲ್, ಕೆಎಫ್‌ಎಂ, ರಾಜೀವ್ ಗಾಂಧಿ ವೃತ್ತ, ಮಂತ್ರಿ ಮಾಲ್, ಸ್ವಸ್ತಿಕ್ ವೃತ್ತ, ಶೇಷಾದ್ರಿಪುರ, ನೆಹರೂ ವೃತ್ತ, ರೇಸ್ ಕೋರ್ಸ್ ಮೇಲ್ಸೇತುವೆ, ರೇಸ್ ಕೋರ್ಸ್ ರಸ್ತೆಯ ಮೂಲಕ ವಾಹನಗಳು ಸಂಚರಿಸಬಹುದು.

ಕೆ.ಜಿ. ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆ.ಜಿ. ಜಂಕ್ಷನ್, ಎಲೈಟ್, ಟಿ.ಬಿ. ರಸ್ತೆ, ಕೆಎಂಎಫ್, ರಾಜೀವ್ ಗಾಂಧಿ ವೃತ್ತ, ಸ್ವಸ್ತಿಕ್, ನೆಹರೂ ವೃತ್ತ, ರೇಸ್ ಕೋರ್ಸ್ ಮೇಲ್ಸೇತುವೆ ರಸ್ತೆಯ ಮೂಲಕ ಸಂಚರಿಸಬಹುದಾಗಿದೆ. ಚಾಲುಕ್ಯ ವೃತ್ತ, ಎಲ್‌ಆರ್‌ಡಿ, ರಾಜಭವನ ರಸ್ತೆ, ಇನ್‌ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದ ಮೂಲಕ ವಾಹನಗಳು ತೆರಳಬಹುದು. ಸುಬ್ಬಣ್ಣ ಜಂಕ್ಷನ್‌ನಿಂದ ಬಲಕ್ಕೆ ತಿರುವು ಪಡೆದು, ಆನಂದ್ ರಾವ್ ವೃತ್ತದ ಕಡೆಗೆ ಸಂಚರಿಸಬಹುದಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಹೆಚ್ಚಿನ ಪೊಲೀಸರ ನಿಯೋಜನೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೇರುವ ನಿರೀಕ್ಷೆಯಿದ್ದು, ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನಗರದ ವಿವಿಧ ಉಪ ವಿಭಾಗಗಳ ಪೊಲೀಸರನ್ನು ಬಂದೋಬಸ್ತ್ ಕರ್ತವ್ಯಕ್ಕೆ ಕರೆಸಿಕೊಳ್ಳಲಾಗಿದೆ. ರ್‍ಯಾಲಿಗೆ ಅವಕಾಶ ಇರುವುದಿಲ್ಲ. ಕೆಎಸ್‌ಆರ್‌ಪಿ ಹಾಗೂ ಅಗ್ನಿಶಾಮಕ ದಳದ ವಾಹನಗಳನ್ನೂ ಸ್ಥಳದಲ್ಲಿ ನಿಯೋಜಿಸಲಾಗುವುದು. ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಭದ್ರತೆ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಹನ ನಿಲುಗಡೆ ನಿಷೇಧ

ಬೆಳಿಗ್ಗೆ 10.30ರಿಂದ 11.30ರವರೆಗೆ ಹಾಗೂ ಮಧ್ಯಾಹ್ನ 3.30ರಿಂದ ಸಂಜೆ 4.30ರ ವರೆಗೆ ಹಳೇ ವಿಮಾನ ನಿಲ್ದಾಣ ರಸ್ತೆ, ಎಂ.ಜಿ.ರಸ್ತೆ, ಕಬ್ಬನ್ ರಸ್ತೆಯ ಎರಡೂ ಬದಿಯಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ. ಅತಿಗಣ್ಯ ವ್ಯಕ್ತಿಗಳು ಈ ಮಾರ್ಗದಲ್ಲಿ ಸಂಚರಿಸುವ ಕಾರಣಕ್ಕೆ ಆ ಸಮಯದಲ್ಲಿ ವಾಹನಗಳ ನಿಲುಗಡೆಯನ್ನು ನಿರ್ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ರಜತ್‌ಗೆ ಕೊಲೆ ಬೆದರಿಕೆ: ಪೊಲೀಸರಿಗೆ ದೂರು


ರಜತ್ ಕಿಶನ್

ಬೆಂಗಳೂರು: ಕಿಡಿಗೇಡಿಗಳಿಂದ ಕೊಲೆ ಬೆದರಿಕೆಯ ಸಂದೇಶಗಳು ಬರುತ್ತಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೋರಿ ಬಿಗ್‌ಬಾಸ್ ಮಾಜಿ ಸ್ಪರ್ಧಿ ರಜತ್ ಕಿಶನ್ ಅವರು ಗುರುವಾರ ರಾತ್ರಿ ಪೊಲೀಸರಿಗೆ ದೂರು ನೀಡಿದರು.

ದೂರಿನ ಪ್ರತಿಯನ್ನು ಪಶ್ಚಿಮ ವಿಭಾಗದ ಸೆನ್ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದು ತನಿಖೆ ನಡೆಸುವಂತೆ ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಸೌಜನ್ಯಾ ಅವರ ಮನೆಗೆ ಬುಧವಾರ ರಜತ್ ಕಿಶನ್ ಭೇಟಿ ನೀಡಿದ್ದರು. ಸೌಜನ್ಯಾ ಅವರ ತಾಯಿಯನ್ನು ಭೇಟಿ ಮಾಡಿ ಹೊರಗೆ ಬರುವಾಗ ಗುಂಪು ಘರ್ಷಣೆ ನಡೆದಿತ್ತು. ಯೂಟ್ಯೂಬ್ ಚಾನೆಲ್‌ಗಳ ಮೂವರ ಮೇಲೆ ಹಲ್ಲೆ ನಡೆದಿತ್ತು. ಆ ಸಂದರ್ಭದಲ್ಲಿ ರಜತ್ ಅವರು ಸ್ಥಳದಲ್ಲೇ ಇದ್ದರು.

‘ನನ್ನ ಪತ್ನಿಯ ವಾಟ್ಸ್‌ಆ್ಯಪ್ ಸಂಖ್ಯೆಗೆ ಬೆದರಿಕೆ ಕರೆಗಳು ಬರುತ್ತಿವೆ. ಪೊಲೀಸರು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ’ ಎಂದು ರಜತ್ ತಿಳಿಸಿದರು.

ಭಯ ಹುಟ್ಟಿಸುವ ವಿಡಿಯೊ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಖ್ಯಾತ ರೌಡಿ ವಿಲ್ಸನ್ ಗಾರ್ಡನ್ ನಾಗನ ಅಭಿಮಾನಿಗಳೆಂದು ಇನ್‌ಸ್ಟಾಗ್ರಾಂ ಖಾತೆ ತೆರೆದು, ಭಯದ ವಾತಾವರಣ ಸೃಷ್ಟಿಸುತ್ತಿದ್ದ ಆರೋಪಿಗಳ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಖಾತೆ ತೆರೆದು ಬಿಲ್ಡಪ್ ಫೋಟೊ, ವಿಡಿಯೊ ಹಾಕಿದ್ದರು. ಪೊಲೀಸ್ ಕಾನ್‌ಸ್ಟೆಬಲ್ ಸಾಮಾಜಿಕ ಜಾಲತಾಣಗಳನ್ನು ಪರಿಶೀಲನೆ ನಡೆಸುತ್ತಿದ್ದ ವೇಳೆ ಈ ರೀತಿಯ ವಿಡಿಯೊಗಳು ಹಾಗೂ ಫೋಟೊಗಳು ಪತ್ತೆ ಆಗಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

ಕಳ್ಳನಿಗೆ ಆಶ್ರಯ: ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ


ಬಾಂಬೆ ಸಲೀಂ

ಬೆಂಗಳೂರು: ಕುಖ್ಯಾತ ಕಳ್ಳ ಬಾಂಬೆ ಸಲೀಂಗೆ ತನ್ನ ಮನೆಯಲ್ಲಿ ಆಶ್ರಯ ನೀಡಿದ್ದ ಕಾನ್‌ಸ್ಟೆಬಲ್‌ವೊಬ್ಬರನ್ನು ಗುರುವಾರ ಅಮಾನತು ಮಾಡಲಾಗಿದೆ.

ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಎಚ್.ಆರ್.ಸೋನಾರ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಪೂರ್ವ ವಿಭಾಗದ ಡಿಸಿಪಿ ದೇವರಾಜು ಆದೇಶ ಹೊರಡಿಸಿದ್ದಾರೆ.

ಆಡುಗೋಡಿಯ ಪೊಲೀಸ್ ವಸತಿ ಸಮುಚ್ಚಯದಲ್ಲಿ ಕಾನ್‌ಸ್ಟೆಬಲ್ ಸೋನಾರ ಅವರು ನೆಲಸಿದ್ದರು. ಆ ಮನೆಯಲ್ಲಿ ಕೆಲವು ತಿಂಗಳು ವಾಸವಿದ್ದ ಸಲೀಂ ಎಂಬಾತ, ಸೋನಾರ ಅವರ ಪೊಲೀಸ್ ಸಮವಸ್ತ್ರ ಧರಿಸಿ ತನ್ನ ಪತ್ನಿಗೆ ವಿಡಿಯೊ ಕರೆ ಮಾಡುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

‘ಕಳ್ಳನಾದರೂ ಪೊಲೀಸರ ಮನೆಯಲ್ಲಿದ್ದೇನೆ. ಅವರದ್ದೇ ಸಮವಸ್ತ್ರ ಧರಿಸಿದ್ದೇನೆ ನೋಡು’ ಎಂದು ಪತ್ನಿಗೆ ವಿಡಿಯೊ ಕರೆ ಮಾಡಿ ತಿಳಿಸಿದ್ದ. ವಿಡಿಯೊ ಕರೆ ಮಾಡಿದ್ದ ವೇಳೆ ಸ್ಕ್ರೀನ್‌ಶಾಟ್ ಸಹ ತೆಗೆದುಕೊಂಡಿದ್ದ ಎಂದು ಪೊಲೀಸರು ಹೇಳಿದರು.

ಡಿಫೆನ್ಸ್ ಕಾಲೊನಿಯಲ್ಲಿ ವಾಸವಿದ್ದ ವೈದ್ಯರೊಬ್ಬರ ಮನೆಯಲ್ಲಿ ಜೂನ್ 22 ರಂದು ಚಿನ್ನಾಭರಣ ಕಳ್ಳತನ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಇಂದಿರಾನಗರ ಠಾಣೆಯ ಪೊಲೀಸರು ಆರೋಪಿ ಬಾಂಬೆ ಸಲೀಂನನ್ನು ಬಂಧಿಸಿದ್ದರು. ಆರೋಪಿ ಕದ್ದಿದ್ದ ಸುಮಾರು ₹15 ಲಕ್ಷ ಮೌಲ್ಯದ ಆಭರಣ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದರು.

ಮೊಬೈಲ್ ಪರಿಶೀಲನೆ ವೇಳೆ ಬಯಲು: ಜಪ್ತಿ ಮಾಡಿಕೊಂಡ ಮೊಬೈಲ್ ಅನ್ನು ಇಂದಿರಾನಗರ ಠಾಣೆಯ ಪೊಲೀಸರು ಪರಿಶೀಲನೆ ನಡೆಸುವಾಗ ಆರೋಪಿ ಪೊಲೀಸ್ ಸಮವಸ್ತ್ರ ಧರಿಸಿದ್ದ ಫೋಟೊಗಳು ಪತ್ತೆ ಆಗಿದ್ದವು. ಜತೆಗೆ, ಅವನು ಧರಿಸಿದ್ದ ಸಮವಸ್ತ್ರದಲ್ಲಿ ನಂಬರ್‌ಪ್ಲೇಟ್‌ನಲ್ಲಿ ಎಚ್.ಆರ್. ಸೋನಾರ ಹೆಸರಿತ್ತು. ಈ ಕುರಿತು ಹೆಚ್ಚಿನ ವಿಚಾರಣೆ ನಡೆಸಿದಾಗ ‘ಕೆಲವು ತಿಂಗಳ ಹಿಂದೆ ಕಾನ್‌ಸ್ಟೆಬಲ್ ಸೋನಾರ ಮನೆಯಲ್ಲಿ ವಾಸವಿದ್ದಾಗ ಪೊಲೀಸ್ ಸಮವಸ್ತ್ರ ಧರಿಸಿ ಪತ್ನಿಗೆ ಕರೆ ಮಾಡಿದ್ದೆ’ಎಂದು ಹೇಳಿಕೆ ನೀಡಿದ್ದ ಎಂಬುದು ಗೊತ್ತಾಗಿದೆ.

‘ಕರ್ತವ್ಯದಲ್ಲಿ ದುರ್ನಡತೆ ಹಾಗೂ ಶಿಸ್ತು ಉಲ್ಲಂಘಿಸಿದ್ದ ಕಾನ್‌ಸ್ಟೆಬಲ್ ಸೋನಾರ ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ’ ಎಂದು ಡಿಸಿಪಿ ದೇವರಾಜು ಸ್ಪಷ್ಟಪಡಿಸಿದರು.

ಮೈಸೂರಿನ ಸಲೀಂ ಮುಂಬೈಯಲ್ಲಿ ವಾಸ: ಬೆಂಗಳೂರು ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮನೆಗಳಿಗೆ ಕನ್ನ ಹಾಕುವುದರಲ್ಲಿ ಸಲೀಂ ಅಲಿಯಾಸ್ ಬಾಂಬೆ ಸಲೀಂ ಕುಖ್ಯಾತನಾಗಿದ್ದ. ಈತನ ವಿರುದ್ಧ 50ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕೆಲವು ತಿಂಗಳ ಹಿಂದೆ ಗೋವಿಂದಪುರ ಠಾಣೆ ಪೊಲೀಸರು ಸಲೀಂನನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಹೊರ ಬಂದ ಬಳಿಕವೂ ಕಳ್ಳತನ ಮಾಡುತ್ತಿದ್ದ.

ಮೈಸೂರು ಜಿಲ್ಲೆಯ ಹುಣಸೂರು ಮೂಲದ ಸಲೀಂ, ಮುಂಬೈಯಲ್ಲಿ ಪತ್ನಿ ಜತೆಗೆ ನೆಲಸಿದ್ದ. ಹೀಗಾಗಿಯೇ, ಬಾಂಬೆ ಸಲೀಂ ಎಂಬ ಅಡ್ಡ ಹೆಸರು ಬಂದಿತ್ತು ಎಂದು ಪೊಲೀಸರು ಹೇಳಿದರು.

ಬ್ಲೂ ಕಾರ್ನರ್ ನೋಟಿಸ್: ಕೇಂದ್ರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ


ಬಿಕ್ಲು ಶಿವ

ಬೆಂಗಳೂರು: ರೌಡಿಶೀಟರ್ ಶಿವಪ್ರಸಾದ್ ಅಲಿಯಾಸ್ ಬಿಕ್ಲು ಶಿವ ಅವರ ಕೊಲೆ ಪ್ರಕರಣದ ತನಿಖೆ ಆರಂಭಿಸಿರುವ ಸಿಐಡಿ ಪೊಲೀಸರು, ಪ್ರಕರಣದ ಪ್ರಮುಖ ಆರೋಪಿ ಜಗದೀಶ್ ಬಂಧನಕ್ಕೆ ಬಲೆಬೀಸಿದ್ದಾರೆ.

‘ಇದುವರೆಗೆ ನಡೆದ ತನಿಖೆಯಿಂದ ಒಂದನೇ ಆರೋಪಿ ಜಗದೀಶ್ ವಿದೇಶದಲ್ಲಿ ತಲೆಮರೆಸಿಕೊಂಡಿದ್ದಾನೆ ಎಂಬುದು ಗೊತ್ತಾಗಿದೆ. ಆರೋಪಿ ಪತ್ತೆಗಾಗಿ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲು ಸಿಐಡಿ ಪೊಲೀಸರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಐಡಿ ಎಡಿಜಿಪಿ ಬಿ.ಕೆ.ಸಿಂಗ್ ಅವರ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ. ದೇಶದಲ್ಲಿ ಆರೋಪಿ ತಲೆಮರೆಸಿಕೊಂಡಿರುವ ಬಗ್ಗೆ ಸುಳಿವು ದೊರಕಿಲ್ಲ. ಹೀಗಾಗಿ ಬ್ಲೂ ಕಾರ್ನರ್ ನೋಟಿಸ್ ಹೊರಡಿಸುವಂತೆ ಸಿಬಿಐಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಸಿಐಡಿ ಮೂಲಗಳು ಹೇಳಿವೆ.

‘ಬ್ಲೂ ಕಾರ್ನರ್ ನೋಟಿಸ್ ಹೊರಡಿಸಿದ ಬಳಿಕ ಆರೋಪಿಯ ಭಾವಚಿತ್ರ ಹಾಗೂ ಪ್ರಕರಣದ ವಿವರ ಸಮೇತ ಎಲ್ಲಾ ದೇಶಗಳಿಗೆ ಮಾಹಿತಿ ರವಾನೆ ಆಗಲಿದೆ. ಈ ಕ್ರಮದಿಂದ ಆರೋಪಿ ಜಗದೀಶ್ ಯಾವ ದೇಶದಲ್ಲಿ ಇದ್ದಾನೆ ಎಂಬುದು ಗೊತ್ತಾಗಲಿದೆ. ಜಗದೀಶ್ ದುಬೈನಲ್ಲಿ ತಲೆಮರೆಸಿಕೊಂಡಿದ್ದಾನೆ ಎಂಬ ಸುಳಿವು ಲಭಿಸಿದೆ’ ಎಂದು ಮೂಲಗಳು ತಿಳಿಸಿವೆ.

ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಜಗದೀಶ್ ವಿರುದ್ಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿತ್ತು. ಕೆಲವು ವರ್ಷಗಳ ಹಿಂದೆ ಆತನನ್ನು ರೌಡಿಪಟ್ಟಿಯಿಂದ ಕೈ ಬಿಡಲಾಗಿತ್ತು. ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಜಗದೀಶ್ ಪ್ರಮುಖ ಆರೋಪಿಯಾಗಿದ್ದಾನೆ.

ಜುಲೈ 15ರಂದು ಬಿಕ್ಲು ಶಿವ ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಶಿವ ಅವರ ತಾಯಿ ವಿಜಯಲಕ್ಷ್ಮಿ ಅವರು ನೀಡಿದ ದೂರು ಆಧರಿಸಿ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಸೇರಿದಂತೆ ಐವರ ವಿರುದ್ಧ ಭಾರತಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬೈರತಿ ಬಸವರಾಜ್ ಅವರನ್ನು ಭಾರತಿನಗರ ಠಾಣೆಯ ಪೊಲೀಸರು ಎರಡು ಬಾರಿ ವಿಚಾರಣೆ ನಡೆಸಿದ್ದರು. 15 ಆರೋಪಿಗಳನ್ನು ಬಂಧಿಸಿದ್ದರು. ಅದಾದ ಮೇಲೆ ಪ್ರಕರಣವನ್ನು ಸಿಐಡಿ ತನಿಖೆಗೆ ಸರ್ಕಾರ ವಹಿಸಿತ್ತು.

ಆರೋಪಿಗಳಾದ ಕಿರಣ್, ಮದನ್, ಸ್ಯಾಮ್ಯುಯಲ್, ಪ್ರದೀಪ್, ವಿಮಲ್, ಅನಿಲ್, ಕೋಲಾರ ಜಿಲ್ಲೆ ಮಾಲೂರಿನ ಅವಿನಾಶ್ ದೀನಹಳ್ಳಿ, ಸುದರ್ಶನ್, ಮುರುಗೇಶ್ ಹಾಗೂ ನರಸಿಂಹ ಸೇರಿದಂತೆ 16 ಮಂದಿಯನ್ನು ಬಂಧಿಸಲಾಗಿದೆ. ಜಗದೀಶ್ ತಲೆಮರೆಸಿಕೊಂಡಿದ್ದಾನೆ. ಆತನ ಬಂಧನಕ್ಕೆ ಪ್ರಕ್ರಿಯೆಗಳು ಆರಂಭಗೊಂಡಿವೆ ಎಂದು ಸಿಐಡಿ ಪೊಲೀಸರು ಹೇಳಿದರು.

ಅಮೃತಹಳ್ಳಿ: ಸೂಟ್‌ಕೇಸ್‌ನಲ್ಲಿ ₹30 ಲಕ್ಷ ನಗದು ಪತ್ತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜಂಕ್ಷನ್‌ನಲ್ಲಿ ಬುಧವಾರ ರಾತ್ರಿ ಅನುಮಾನಾಸ್ಪದವಾಗಿ ಪತ್ತೆಯಾದ ಸೂಟ್‌ಕೇಸ್‌ವೊಂದರಲ್ಲಿ ಲಕ್ಷಾಂತರ ರೂಪಾಯಿ ನಗದು ಪತ್ತೆಯಾಗಿದೆ.

ಸೂಟ್‌ಕೇಸ್ ಗಮನಿಸಿದ್ದ ಸ್ಥಳೀಯರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಪರಿಶೀಲನೆ ನಡೆಸಿದಾಗ ಅದರಲ್ಲಿ ನಗದು ಇರುವುದು ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಬಸ್ ಆಂಧ್ರಪ್ರದೇಶದಿಂದ ನಗರಕ್ಕೆ ಬರುತ್ತಿತ್ತು. ಅದರಲ್ಲಿ ಪ್ರಯಾಣಿಸಿದ್ದ ವ್ಯಕ್ತಿಯೊಬ್ಬರು ಹಣವನ್ನು ತಂದಿದ್ದರು. ಅಮೃತಹಳ್ಳಿ ಜಂಕ್ಷನ್ ಬಳಿ ಕೆಲವರು ಬಸ್‌ನಿಂದ ಇಳಿದಿದ್ದರು. ಅವರು ತಮ್ಮ ಸೂಟ್‌ಕೇಸ್ ಇಳಿಸಿಕೊಳ್ಳುವ ಭರದಲ್ಲಿ ನಗದು ತುಂಬಿದ್ದ ಸೂಟ್‌ಕೇಸ್ ಸಹ ಇಳಿಸಿಕೊಂಡಿದ್ದರು. ಸೂಟ್‌ಕೇಸ್ ತಮ್ಮದಲ್ಲ ಎಂಬುದು ಗೊತ್ತಾದಾಗ ರಸ್ತೆ ಬದಿಯಲ್ಲೇ ಬಿಟ್ಟು ಹೋಗಿದ್ದರು ಎನ್ನಲಾಗಿದೆ.

'ಮೆಜೆಸ್ಟಿಕ್‌ನಲ್ಲಿ ಇಳಿದಾಗ ತನ್ನ ಸೂಟ್‌ಕೇಸ್ ನಾಪತ್ತೆ ಆಗಿರುವುದು ಆ ವ್ಯಕ್ತಿಯ ಗಮನಕ್ಕೆ ಬಂದಿತ್ತು. ತಕ್ಷಣವೇ ಬಸ್ ಕ್ಲೀನರ್‌ಗೆ ಮಾಹಿತಿ ನೀಡಿದ್ದರು. ಕ್ಲೀನರ್ ಜತೆಗೆ ಅಮೃತಹಳ್ಳಿ ಠಾಣೆಗೆ ಬಂದು ನಗದು ತುಂಬಿದ್ದ ಸೂಟ್‌ಕೇಸ್ ತೆಗೆದುಕೊಂಡು ಹೋಗಿದ್ದಾರೆ. ಬ್ಯಾಂಕ್‌ನಿಂದ ಹಣ ಡ್ರಾ ಮಾಡಿದ್ದಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಸಲ್ಲಿಸಿದರು. ದಾಖಲೆ ನೀಡಿದ ಬಳಿಕ ಹಣ ವಾಪಸ್ ನೀಡಲಾಗಿದೆ. ಮದುವೆ ಸಮಾರಂಭದ ಖರ್ಚಿಗೆ ಆಂಧ್ರಪ್ರದೇಶದಿಂದ ಹಣ ತಂದಿದ್ದಾಗಿ ಆ ವ್ಯಕ್ತಿ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'2 ಲಕ್ಷ ಉದ್ಯೋಗ: ನೂತನ ಜವಳಿ ನೀತಿ'

ಐವರು ಕೈ ಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಿದ್ಧ ಉಡುಪು ನೀತಿ: ₹3,322 ಕೋಟಿ ಬಂಡವಾಳ ಹೂಡಿಕೆ
- ಜವಳಿ ನೀತಿ ಅನುಷ್ಠಾನಕ್ಕಾಗಿ ₹793.66 ಕೋಟಿ ಅನುದಾನ

ಬೆಂಗಳೂರು: ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು ಎರಡು ಲಕ್ಷ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ ನೂತನ ಜವಳಿ ನೀತಿ ರೂಪಿಸಲಾಗುತ್ತಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ನಗರದಲ್ಲಿ ಗುರುವಾರ ಆಯೋಜಿಸಿದ್ದ 11ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವರ ಗೈರಿನಲ್ಲಿ ಅವರ ಸಿದ್ಧ ಭಾಷಣವನ್ನು ಕಾವೇರಿ ಹ್ಯಾಂಡ್ ಲೂಮ್ಸ್ ಅಧ್ಯಕ್ಷ ಜೆ.ಬಿ.ಗಣೇಶ ಓದಿದರು.

ಜವಳಿ ಕ್ಷೇತ್ರ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಜನೆಗೆ ಉದ್ಯಮಿ ಸ್ನೇಹಿ ಜವಳಿ ಮತ್ತು ಸಿದ್ಧ ಉಡುಪು ನೀತಿ–2025-30 ರೂಪಿಸಲಾಗುವುದು. ಜವಳಿ ಮತ್ತು ಸಿದ್ಧ ಉಡುಪು ನೀತಿ– 2019-24ರ ಅಡಿ ರಾಜ್ಯದಲ್ಲಿ ಒಟ್ಟು ₹3,322 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಸುಮಾರು 83 ಸಾವಿರ ಉದ್ಯೋಗ ಸೃಷ್ಟಿಯಾಗಿದೆ. ಶೇಕಡ 70 ಕ್ಕಿಂತಲೂ ಅಧಿಕ ಮಹಿಳೆಯರಿಗೆ ಉದ್ಯೋಗಾವಕಾಶ ಸಿಕ್ಕಿದೆ ಎಂದರು.

ಪ್ರಸ್ತುತ ಜವಳಿ ನೀತಿ ಅನುಷ್ಠಾನಕ್ಕಾಗಿ ಅನುದಾನದ ರೂಪದಲ್ಲಿ ಒಟ್ಟು ₹793.66 ಕೋಟಿ ಬಿಡುಗಡೆ ಮಾಡಿದ್ದು, 311 ಸಣ್ಣ, ಮಧ್ಯಮ ಘಟಕಗಳಿಗೆ ಹಾಗೂ ಎರಡು ಬೃಹತ್ ಯೋಜನೆಗಳಿಗೆ ಅನುದಾನ ನೀಡಲಾಗಿದೆ ಎಂದು ವಿವರಿಸಿದರು.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಮಾತನಾಡಿ, 'ನೇಕಾರಿಕೆ ವೃತ್ತಿಯನ್ನು ಸರ್ಕಾರ ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ಶೋ ರೂಂಗಳ ಸಂಖ್ಯೆ 54ರಿಂದ 8ಕ್ಕೆ ಇಳಿದಿದೆ. ನೇಕಾರರ ನೋವು ಸರ್ಕಾರಕ್ಕೆ ಅರ್ಥ ಆಗಬೇಕು. ನೇಕಾರ ಅಭಿವೃದ್ಧಿ ನಿಗಮಕ್ಕೆ ಅನುದಾನ ನೀಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿತ್ತು. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ, ಜವಳಿ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ, ಮುಖಂಡರಾದ ಕೆ.ಟಿ ರಾಜು, ದೇವದಾಸ್, ರವಿ ಕಲಬುರ್ಗಿ, ಶಿವಲಿಂಗ ಸ್ವಾಮೀಜಿ ಹಾಜರಿದ್ದರು.

ಬಹುಮಾನ ಪುರಸ್ಕೃತರು: ಐವರು ಕೈಮಗ್ಗ ನೇಕಾರರಿಗೆ ಸ್ಮರಣಿಕೆಯೊಂದಿಗೆ, ನಗದು ಬಹುಮಾನ ನೀಡಿ ಗೌರವಿಸಲಾಯಿತು. ರೇಷ್ಮೆ ವಿಭಾಗ; ವೈ.ಎನ್. ಹೊಸಕೋಟೆಯ ಎಂ.ವಿ. ಪ್ರಕಾಶ್ (ಪ್ರಥಮ), ಚಿತ್ರದುರ್ಗದ ಸುರೇಶ್ ಡಿ.ಎಸ್. (ದ್ವಿತೀಯ) ಹತ್ತಿ ವಿಭಾಗ: ಗಜೇಂದ್ರಗಡದ ತೇಜಪ್ಪ ಚಿನ್ನೂರ (ಪ್ರಥಮ), ಬಾಗಲಕೋಟೆಯ ಕಮತಗಿಯ ಲಕ್ಷ್ಮಣ ಕಕ್ಕಣ್ಣವರ (ದ್ವಿತೀಯ) ಉಣ್ಣೆ ವಿಭಾಗ: ಕೊಂಡ್ಲಹಳ್ಳಿಯ ಕೆ.ಎಂ. ಬಜ್ಜಪ್ಪ (ಪ್ರಥಮ)



ನಗರದಲ್ಲಿ ನಡೆದ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಲಕ್ಷ್ಮಣ ಕಕ್ಕಣ್ಣವರ, ತೇಜಪ್ಪ ಚಿನ್ನೂರ, ಎಂ. ವಿ. ಪ್ರಕಾಶ್, ಡಿ.ಎಸ್ ಸುರೇಶ ಮತ್ತು ಕೆ.ಎಂ.ಬಜ್ಜಪ್ಪ ಅವರಿಗೆ ರಾಜ್ಯ ಮಟ್ಟದ ಕೈಮಗ್ಗ ನೇಕಾರರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಿಜ್ವಾನ್ ಅರ್ಷದ್, ಶಿವಲಿಂಗ ಸ್ವಾಮೀಜಿ, ಎಂ.ಡಿ. ಲಕ್ಷ್ಮಿ ನಾರಾಯಣ ಮತ್ತು ಇತರರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಏರ್‌ಪೋರ್ಟ್‌ನಲ್ಲಿ ಶೋರೂಂ

ರಾಜ್ಯದ ಕೈಮಗ್ಗ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡ್ ಮಾಡುವ ಅಗತ್ಯವಿದ್ದು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆ ಆರಂಭಿಸಲಾಗುವುದು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬದಲಾದ ಕಾಲಕ್ಕೆ ಅನುಗುಣವಾಗಿ ಸಾಂಪ್ರದಾಯಿಕ ಕೈಮಗ್ಗ ಉತ್ಪನ್ನಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರ್ಯಾಂಡ್ ಮಾಡಬೇಕಾದರೆ ಕೆಲ ಸುಧಾರಣೆ ಮಾಡಬೇಕಾಗುತ್ತದೆ ಎಂದರು.

ನೇಕಾರರ ಸಮ್ಮಾನ್ ಯೋಜನೆಯಡಿ 2024-25ನೇ ಸಾಲಿನಲ್ಲಿ 30,789 ಕೈಮಗ್ಗ ನೇಕಾರರಿಗೆ ತಲಾ ₹5 ಸಾವಿರ ಪರಿಹಾರಧನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಲಾಗಿದೆ. ಸರ್ಕಾರದಿಂದ ₹3 ಲಕ್ಷದಿಂದ ₹30 ಲಕ್ಷದವರೆಗೆ ಸಾಲ ಸೌಲಭ್ಯ ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಚುಟುಕು ಸುದ್ದಿ

ಬನಶಂಕರಿ– ಸರ್ಜಾಪುರ ಹೊಸ ಮಾರ್ಗಕ್ಕೆ ಎಸಿ ಬಸ್



ಬೆಂಗಳೂರು: ಬನಶಂಕರಿ ಟಿಟಿಎಂಸಿಯಿಂದ ಸರ್ಜಾಪುರ ಬಸ್ ನಿಲ್ದಾಣಕ್ಕೆ ಹೊಸ ಮಾರ್ಗದಲ್ಲಿ ಆರು ಹವಾನಿಯಂತ್ರಿತ ಬಸ್‌ಗಳ ಸಂಚಾರವನ್ನು ಗುರುವಾರ ಬಿಎಂಟಿಸಿ ಆರಂಭಿಸಿದೆ.

ಬನಶಂಕರಿಯಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್, ಅಗರ, ದೊಡ್ಡಕನ್ನಲ್ಲಿ, ಕೊಡತಿ ಗೇಟ್, ದೊಮ್ಮಸಂದ್ರ ಮಾರ್ಗವಾಗಿ ಸರ್ಜಾಪುರ ಬಸ್ ನಿಲ್ದಾಣಕ್ಕೆ ಬಸ್ ತಲುಪಲಿದೆ. ಎರಡೂ ಕಡೆಯಿಂದ ತಲಾ 21 ಟ್ರಿಪ್ ಇರಲಿವೆ.

ರೋಟರಿ: ಮೊಬೈಲ್ ವಾಹನ ಹಸ್ತಾಂತರ 10ಕ್ಕೆ

ಬೆಂಗಳೂರು: ರೋಟರಿ ಕಬ್ಬನ್ ಪಾರ್ಕ್ ಟ್ರಸ್ಟ್ ವತಿಯಿಂದ ಬೆಂಗಳೂರು ಗ್ಯಾಸ್ಟ್ರೊ ಸೆಂಟರ್‌ಗೆ (ಬಿಜಿಸಿ) 'ವೆಲ್‌ನೆಸ್ ಆನ್ ವೀಲ್ಸ್' ಮೊಬೈಲ್ ವಾಹನವನ್ನು ಹಸ್ತಾಂತರಿಸಲಾಗುತ್ತಿದ್ದು, ಇದೇ 10ರಂದು ಬೆಳಿಗ್ಗೆ 9 ಗಂಟೆಗೆ ಬನಶಂಕರಿ ರಸ್ತೆಯಲ್ಲಿರುವ ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯಲ್ಲಿ ಈ ವಾಹನ ಹಸ್ತಾಂತರ ಕಾರ್ಯಕ್ರಮ ಆಯೋಜಿಸಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೋಟರಿ ಕಬ್ಬನ್ ಪಾರ್ಕ್‌ನ ಅಧ್ಯಕ್ಷೆ ಆರ್.ಟಿ.ಎನ್. ಸಂಗೀತಾ ಐ.ಆರ್., 'ಉದರ ಸಂಬಂಧಿ ಅನಾರೋಗ್ಯ ಸಮಸ್ಯೆಗಳ ಪತ್ತೆಗೆ ಈ ವಾಹನ ನೆರವಾಗಲಿದೆ. ಅಗತ್ಯ ವೈದ್ಯಕೀಯ ಸಿಬ್ಬಂದಿ ಈ ವಾಹನದಲ್ಲಿ ಇರಲಿದ್ದು, ರಾಜ್ಯದಾದ್ಯಂತ ಸೇವೆ ಒದಗಿಸಲಿದೆ. ಆರಂಭಿಕ ಹಂತದಲ್ಲಿಯೇ ಸಮಸ್ಯೆ ಪತ್ತೆ ಮಾಡಲು ಸಹಕಾರಿಯಾಗಲಿದೆ' ಎಂದು ಹೇಳಿದರು.

'ವಾಹನ ಹಸ್ತಾಂತರ ಕಾರ್ಯಕ್ರಮದಲ್ಲಿ 'ಜೀರ್ಣಾಂಗ ವ್ಯವಸ್ಥೆಯ ಆರೈಕೆಯ ಮಹತ್ವ' ಎನ್ನುವ ವಿಷಯದ ಬಗ್ಗೆ ಉಪನ್ಯಾಸವನ್ನೂ ಹಮ್ಮಿಕೊಳ್ಳಲಾಗಿದೆ. ತಜ್ಞ ವೈದ್ಯರಾದ ಡಾ. ಯೋಗಾನಂದ ರೆಡ್ಡಿ ಅವರು ಉಪನ್ಯಾಸ ನೀಡಲಿದ್ದಾರೆ' ಎಂದರು.

ಐಐಎಂಬಿಯಲ್ಲಿ ಪಿಇವಿಸಿ ಕೇಂದ್ರ

ಬೆಂಗಳೂರು: ನಗರದ ಐಐಎಂಬಿಯಲ್ಲಿ 'ಟೋನಿ ಜೇಮ್ಸ್ ಸೆಂಟರ್ ಫಾರ್ ಪ್ರೈವೇಟ್ ಇಕ್ವಿಟಿ ಹಾಗೂ ವೆಂಚರ್ ಕ್ಯಾಪಿಟಲ್ ' ಉದ್ಘಾಟಿಸಲಾಯಿತು. ಇದನ್ನು ದೇಶದ ಪ್ರೈವೇಟ್ ಇಕ್ವಿಟಿ (ಪಿಇ), ವೆಂಚರ್ ಕ್ಯಾಪಿಟಲ್ ಹಾಗೂ ಹಣಕಾಸು ಸೇವೆ ಕ್ಷೇತ್ರದ ಪ್ರಭಾವಿ ವ್ಯಕ್ತಿಗಳು ಸ್ಥಾಪಿಸಿದ್ದು, ಸಂಶೋಧನೆ, ನಾವಿನ್ಯತೆಗೆ ಮೀಸಲಿರುವ ದೇಶದ ಮೊದಲ ಕೇಂದ್ರವಾಗಿದೆ.

ಈ ಕೇಂದ್ರ ಸ್ಥಾಪನೆ ಕುರಿತು ಐಐಎಂಬಿ ಹಾಗೂ ಯಾಲಿ ಕ್ಯಾಪಿಟಲ್‌ನ ಸಹ-ಸಂಸ್ಥಾಪಕ ಮ್ಯಾಥ್ಯೂ ಸಿರಿಯಾಕ್ ನಡುವೆ 2024ರ ಆಗಸ್ಟ್ 24 ರಂದು ಒಪ್ಪಂದ ನಡೆದಿತ್ತು. ಐಐಎಂಬಿಯ ಹಳೆಯ ವಿದ್ಯಾರ್ಥಿಗಳ ಕೊಡುಗೆ ಇದಾಗಿದ್ದು, ಸಿರಿಯಾಕ್ ಅವರಿಗೆ ಸ್ಫೂರ್ತಿ ನೀಡಿದ ಪ್ರಮುಖ ಹಣಕಾಸು ಕ್ಷೇತ್ರದ ಅಧ್ಯಾಪಕರ ಹೆಸರನ್ನು ಇಡಲಾಗುವುದು. ಪಿಜಿಪಿ ಹಾಗೂ ಡಾಕ್ಟರಲ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ ಕಲ್ಪಿಸಲಾಗಿದೆ.

ಅಲುಮ್ನಿ ರಿಲೇಶನ್ ಮತ್ತು ಡೆವಲಪ್‌ಮೆಂಟ್ ವಿಭಾಗದ ಡೀನ್ ಸೌರವ್ ಮುಖರ್ಜಿ ಡೀನ್, ಪ್ರಾಧ್ಯಾಪಕ ದಿನೇಶ್ ಕುಮಾರ್, ಮ್ಯಾಥ್ಯೂ ಸಿರಿಯಾಕ್ ಹಾಜರಿದ್ದರು

ಧರ್ಮಸ್ಥಳ ಘರ್ಷಣೆ: ಆರೋಪಿಗಳ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದಲ್ಲಿ ಎಸ್‌ಐಟಿ ತನಿಖೆ ವೇಳೆ ಸ್ವತಂತ್ರ ಪತ್ರಕರ್ತರು ಹಾಗೂ ಯೂಟ್ಯೂಬರ್‌ಗಳ ಮೇಲೆ ನಡೆದ ದಾಳಿ ಖಂಡನೀಯ ಎಂದು ಪ್ರಗತಿಪರರು ಹಾಗೂ ಹೋರಾಟಗಾರರು ತಿಳಿಸಿದ್ದಾರೆ.

ಸಮಾನ ಮನಸ್ಕರಾದ ಕೆ.ಮರುಳಸಿದ್ದಪ್ಪ, ಆರ್.ಕೆ. ಹುಡಗಿ, ಪ್ರಭು ಖಾನಾಪುರೆ, ಮೀನಾಕ್ಷಿ ಬಾಳಿ, ಕೆ.ನೀಲಾ, ಕಾಶಿನಾಥ ಅಂಬಲಗಿ, ಅರ್ಜುನ ಭದ್ರೆ, ವಿಮಲಾ ಕೆ.ಎಸ್, ಗುರುರಾಜ ಹಗರೆ, ಲವಿತ್ರ ವಸ್ತ್ರದ, ಸುಜಾತಾ, ಸರ್ವೇಶ, ಟಿ. ಧನರಾಜ, ಮಹಾಂತೇಶ ಕಲಬುರಗಿ, ಅಕ್ಷತಾ ಹುಂಚದಕಟ್ಟೆ, ಅರುಣ್ ಜೋಳದಕೂಡ್ಲಿಗಿ ಸಹಿತ ಹಲವರು ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ಘಟನೆಗೆ ಕಾರಣರಾದವರು ಮತ್ತು ಪ್ರಚೋದನೆ ಮಾಡಿದವರನ್ನು ತಕ್ಷಣವೇ ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ ಅವರು ಒತ್ತಾಯಿಸಿದ್ದಾರೆ.

'ದಶಕಗಳಿಂದ ನಡೆದ ಅತ್ಯಾಚಾರ, ದೌರ್ಜನ್ಯ, ಕೊಲೆ, ಸುಲಿಗೆಗಳಿಂದ ಜನರು ತತ್ತರಿಸಿ ಹೋಗಿದ್ದಾರೆ. ಸಾಕ್ಷಿ ಫಿರ್ಯಾದುದಾರರೊಬ್ಬರ ಹೇಳಿಕೆಯ ಮೇಲೆ ಉತ್ಖನನ ನಡೆಯುತ್ತಿದೆ. ಸತ್ಯ ಹೊರಬರುವ ಭಯದಿಂದ ಮಾಧ್ಯಮದವರ ಮೇಲೆ ಹಲ್ಲೆ, ದೌರ್ಜನ್ಯದಂತಹ ಕೃತ್ಯಗಳಿಗೆ ಮುಂದಾಗಿರುವುದರಲ್ಲಿ ಅನುಮಾನವೇ ಇಲ್ಲ. ನ್ಯಾಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಬದುಕುವ ಹಕ್ಕು ಮತ್ತು ಅತ್ಯಾಚಾರ, ದೌರ್ಜನ್ಯ, ಕೊಲೆಗೆ ಒಳಗಾದವರ ಪರ ನಿಲ್ಲಬೇಕಾದದ್ದು ಮನುಷ್ಯರಾದವರ ಕರ್ತವ್ಯ' ಎಂದು ತಿಳಿಸಿದ್ದಾರೆ.

ಹಲ್ಲೆ: ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಒತ್ತಾಯ

ಬೆಂಗಳೂರು: ಧರ್ಮಸ್ಥಳದಲ್ಲಿ ಯೂಟ್ಯೂಬ್ ಚಾನೆಲ್ ಹಾಗೂ ಖಾಸಗಿ ಸುದ್ದಿ ವಾಹಿನಿಯ ವರದಿಗಾರರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಆಗ್ರಹಿಸಿದ್ದಾರೆ.

ಈ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಅವರಿಗೆ ಪತ್ರ ಬರೆದಿರುವ ಅವರು, 'ಕುಡ್ಲ ರ್‍ಯಾಂಪೇಜ್' ಯೂಟ್ಯೂಬ್ ಚಾನೆಲ್‌ನ ಅಜಯ್ ಅಂಚನ್, ಯುನೈಟೆಡ್ ಮೀಡಿಯಾದ ಅಭಿಷೇಕ್, ಸಂಚಾರಿ ಸ್ಟುಡಿಯೊದ ವಿಜಯ್, ಕ್ಯಾಮೆರಾಮನ್ ಸುಹಾನ್ ಅವರ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆದ ಹಲ್ಲೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

2012ರಲ್ಲಿ ನಡೆದ ಸೌಜನ್ಯಾ ಹತ್ಯೆಗೆ ಸಂಬಂಧಿಸಿದಂತೆ ಸೆಲೆಬ್ರಿಟಿಯೊಬ್ಬರ ಸಂದರ್ಶನಕ್ಕಾಗಿ ವರದಿಗಾರರು ಧರ್ಮಸ್ಥಳ ಗ್ರಾಮದ ಪಾಂಗಳ ರಸ್ತೆಯ ಬಳಿ ನಿಂತಿದ್ದರು. ಅಲ್ಲಿಗೆ ಬಂದ 25 ಜನರ ಗುಂಪು, ಹರ್ಷೇಂದ್ರ ಕುಮಾರ್ ಅವರ ವಿರುದ್ಧ ಪ್ರಚಾರ ಮಾಡಲಾಗುತ್ತಿದೆ ಎಂದು ಆರೋಪಿಸಿ ವರದಿಗಾರರ ಮೇಲೆ ಹಲ್ಲೆ ನಡೆಸಿದೆ. ದುಬಾರಿ ಕ್ಯಾಮೆರಾಗಳಿಗೆ ಹಾನಿ ಮಾಡಲಾಗಿದೆ ಮತ್ತು ಮೆಮೊರಿ ಕಾರ್ಡ್ ಅನ್ನು ಕಿತ್ತುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದಾರೆ.

ಆರೋಪಿಗಳನ್ನು ತಕ್ಷಣ ಬಂಧಿಸಬೇಕು. ಈ ದಾಳಿಗೆ ಪ್ರಚೋದನೆ ನೀಡಿರುವ ಹಾಗೂ ಆರ್ಥಿಕ ನೆರವು ನೀಡಿರುವ ಅನುಮಾನ ಇದೆ. ಹಾಗಾಗಿ ಸ್ವತಂತ್ರ ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ರಾಜಕೀಯ ಅರ್ಥ ಮಾಡಿಕೊಳ್ಳಿ: ಚಿಂತಕ ಶಿವಸುಂದರ್

ಬೆಂಗಳೂರು: 'ಧರ್ಮ ಹಾಗೂ ಧರ್ಮಸ್ಥಳದ ಹಿಂದಿರುವ ರಾಜಕೀಯವನ್ನು ಪ್ರಜಾಪ್ರಭುತ್ವವನ್ನು ರಕ್ಷಿಸುವವರು ಅರ್ಥ ಮಾಡಿಕೊಳ್ಳಬೇಕು' ಎಂದು ಚಿಂತಕ ಶಿವಸುಂದರ್ ಹೇಳಿದರು.

ಸಮಾನ ಮನಸ್ಕಾರ ವೇದಿಕೆ ಗುರುವಾರ ಆಯೋಜಿಸಿದ್ದ 'ಧರ್ಮಸ್ಥಳದಲ್ಲಿ ಯೂಟ್ಯೂಬರ್ಸ್ ಹಾಗೂ ಪತ್ರಕರ್ತರ ಮೇಲಿನ ಹಲ್ಲೆಯ ಖಂಡನಾ ಸಭೆ'ಯಲ್ಲಿ ಅವರು ಮಾತನಾಡಿದರು.

'ಮನುಸ್ಮೃತಿಯಲ್ಲಿ ಧರ್ಮವನ್ನು ಯಾರು ರಕ್ಷಿಸುತ್ತಾರೋ, ಅಂತಹವರನ್ನು ಧರ್ಮ ರಕ್ಷಿಸುತ್ತದೆ ಎಂದಿತ್ತು. ಆದರೆ, ಈಗ ಧರ್ಮಸ್ಥಳವನ್ನು ಯಾರು ರಕ್ಷಿಸುತ್ತಾರೋ, ಅಂತಹವರನ್ನು ಧರ್ಮಸ್ಥಳ ರಕ್ಷಿಸುತ್ತದೆ ಎಂಬಂತಾಗಿದೆ' ಎಂದರು.

'ಸಾಮಾಜಿಕ ಮಾಧ್ಯಮಗಳಲ್ಲಿ ಕರ್ನಾಟಕದ ಯೂಟ್ಯೂಬರ್ಸ್‌ಗಳು ಹಾಗೂ ಸ್ವತಂತ್ರ ಪತ್ರಿಕೋದ್ಯಮಿಗಳು ಅತ್ಯಂತ ಗಹನವಾದ ಹಾಗೂ ಗಂಭೀರವಾದ ಚರ್ಚೆಗಳನ್ನು ಮಾಡುತ್ತಿದ್ದಾರೆ. ನಾವು ಹೋರಾಟ ಮಾಡುತ್ತಿರುವ ಸಂದರ್ಭ ಬಹಳ ಗಂಭೀರವಾಗಿದೆ. ಸರ್ಕಾರವನ್ನು ವಿಮರ್ಶಿಸಿದರೆ, ದೇಶವನ್ನೇ ವಿಮರ್ಶೆ ಮಾಡಿದಂತೆ ಎಂದು ಭಾವಿಸುವ ನ್ಯಾಯಮೂರ್ತಿಗಳಿದ್ದಾರೆ. ಆಡಳಿತಾಧಿಕಾರಿಯನ್ನು ವಿಮರ್ಶಿಸಿದರೆ, ದೇವರನ್ನೇ ಬೈಯುತ್ತಿದ್ದಾರೆ ಎಂದು ಜನರನ್ನು ಎತ್ತಿಕಟ್ಟುವವರು ಇದ್ದಾರೆ' ಎಂದು ಹೇಳಿದರು.

ವೇದವಲ್ಲಿ, ಪದ್ಮಲತಾ, ಸೌಜನ್ಯ ಪ್ರಕರಣಗಳಲ್ಲಿ ಆಸ್ತಿ, ಅಧಿಕಾರ, ಸಂಪತ್ತಿನ ಜತೆಗೆ ವೈರುಧ್ಯವಿರುವ ಒಂದು ಮೇಲ್ವರ್ಗಕ್ಕೆ ಸಂಬಂಧ ಇರುವ ಆರೋಪವಿದೆ. ಈಗ ಧರ್ಮಸ್ಥಳದ ವ್ಯಾಪ್ತಿಯಲ್ಲಿ ಅನೇಕ ಅಸ್ತಿಪಂಜರಗಳು ಸಿಗುತ್ತಿವೆ. ಈ ಬಗ್ಗೆ ಸಂಪೂರ್ಣ ತನಿಖೆ ಆಗಬೇಕು' ಎಂದು ಒತ್ತಾಯಿಸಿದರು. ಪತ್ರಕರ್ತ ಡಿ. ಉಮಾಪತಿ, ಹೈಕೋರ್ಟ್‌ನ ಹಿರಿಯ ವಕೀಲ ಎಸ್. ಬಾಲನ್. ಲೇಖಕಿ ರೇಣುಕಾ ನಿಡಗುಂದಿ, ವಿಚಾರವಾದಿ ಮುರಳಿಕೃಷ್ಣ, ಸಾಮಾಜಿಕ ಹೋರಾಟಗಾರ ಮಲ್ಲು ಕುಂಬಾರ್ ಇದ್ದರು.



ಕಾಂಗ್ರೆಸ್ ಮುಖಂಡ ಜಯರಾಮ್ ಅವರು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರಿಗೆ ಹುಟ್ಟು ಹಬ್ಬದ ಶುಭಾಶಯ ಕೋರಿದರು. ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಸುನೀಲ್ ಪ್ರಕಾಶ್, ಸರ್ಜಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಂಜುನಾಥ್ ಸರ್ಜಾ, ಉದ್ಯಮಿ ವಿರೂಪಾಕ್ಷ, ಗುತ್ತಿಗೆದಾರ ಚಿದಾನಂದ್ ಉಪಸ್ಥಿತರಿದ್ದರು.

ಬೆಂಗಳೂರು– ಟೆಲ್ ಅವೀವ್ ನಡುವೆ ವಿಮಾನ: ನೆತನ್ಯಾಹು

ಜೆರುಸಲೇಂ (ಪಿಟಿಐ): ಬೆಂಗಳೂರು ಮತ್ತು ಟೆಲ್ ಅವೀವ್ ನಡುವೆ ವಿಮಾನ ಸಂಪರ್ಕ ಹೊಂದಲು ಇಸ್ರೇಲ್ ಉತ್ಸುಕವಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದರು.

'ಇದು ಕೇವಲ ಆರು ಗಂಟೆಗಳ ಪ್ರಯಾಣವಾಗಲಿದೆ' ಎಂದು ಅವರು ಭಾರತದ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು. 'ಶೀಘ್ರದಲ್ಲಿಯೇ ಭಾರತಕ್ಕೆ ಭೇಟಿ ನೀಡಲು ನಾನು ಬಯಸುತ್ತೇನೆ' ಎಂದೂ ಅವರು ತಿಳಿಸಿದರು.

ಭಾರತ– ಅಮೆರಿಕ ದೇಶಗಳು ಸುಂಕ ಸಮಸ್ಯೆಯನ್ನು ಪರಿಹರಿಸಲು ಸಾಮಾನ್ಯ ನೆಲೆಯನ್ನು ಕಂಡುಕೊಳ್ಳಬೇಕು ಎಂದು ಅವರು ಪ್ರತಿಕ್ರಿಯಿಸಿದರು.

'ಗಾಜಾವನ್ನು ವಶಪಡಿಸಿಕೊಳ್ಳಲು ಇಸ್ರೇಲ್ ಬಯಸುವುದಿಲ್ಲ. ಹಮಾಸ್ ಅನ್ನು ನಾಶಪಡಿಸುವುದು ನಮ್ಮ ಏಕೈಕ ಗುರಿ. ಬಳಿಕ ಗಾಜಾಪಟ್ಟಿಯನ್ನು ತಾತ್ಕಾಲಿಕ ಸರ್ಕಾರಕ್ಕೆ ಹಸ್ತಾಂತರಿಸುತ್ತೇವೆ. ಈ ಯುದ್ಧವನ್ನು ಆದಷ್ಟು ಬೇಗ ಅಂತ್ಯಗೊಳಿಸುತ್ತೇವೆ' ಎಂದು ಅವರು ಉತ್ತರಿಸಿದರು.

ಕಮಲ್ ವಿರುದ್ಧ ದೂರು ವಾಪಸ್

ಪ್ರಜಾವಾಣಿ ವಾರ್ತೆ

ಕನಕಪುರ: ಕನ್ನಡ ಹುಟ್ಟಿದ್ದು ತಮಿಳು ಭಾಷೆಯಿಂದ ಎಂದು ಹೇಳಿದ್ದ ಬಹುಭಾಷಾ ನಟ ಕಮಲ್ ಹಾಸನ್ ವಿರುದ್ಧ ಕನಕಪುರ ಜೆಎಂಎಫ್ ನ್ಯಾಯಾಲಯದಲ್ಲಿ ಜೂನ್ 30 ರಂದು ದಾಖಲಿಸಲಾಗಿದ್ದ ಖಾಸಗಿ ಕ್ರಿಮಿನಲ್ ದೂರನ್ನು (ಪಿಸಿಆರ್) ಹಿಂಪಡೆದಿರುವುದಾಗಿ ದೂರುದಾರ ಹೇಳಿದ್ದಾರೆ.

'ರೋಹಿತ್ ವೇಮುಲ ಮಸೂದೆ'-ಪ್ರಸ್ತಾವನೆ ಮುಂದೂಡಿಕೆ

17 ಮಸೂದೆಗಳಿಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು, ದೇವದಾಸಿ ಪದ್ಧತಿ ನಿರ್ಮೂಲನೆ, ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ ಸೇರಿ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಲು ಉದ್ದೇಶಿಸಿರುವ 17 ಮಸೂದೆಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

'ರೋಹಿತ್ ವೇಮುಲ ಮಸೂದೆ' ಬಗ್ಗೆ ಇನ್ನಷ್ಟು ಚರ್ಚೆ ನಡೆಯಬೇಕಾಗಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.

ಅಲ್ಲದೇ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರಚನೆ, ಆಯುಕ್ತರ ನೇಮಕಾತಿ ಹಾಗೂ ಅಧಿಕಾರ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಅವಕಾಶ ನೀಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2024 ಕ್ಕೆ ತಿದ್ದುಪಡಿ ಮಾಡಲಾಗಿದೆ. ಆಯುಕ್ತಾಲಯ ರಚನೆಯಿಂದ ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಿಯಂತ್ರಣ ಆಯುಕ್ತಾಲಯದ ವ್ಯಾಪ್ತಿಗೆ ಒಳಪಡಲಿದೆ.

ಪ್ರಮುಖ ಮಸೂದೆಗಳು:

- ಕರ್ನಾಟಕ ದೇವದಾಸಿ ಪದ್ಧತಿ (ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ 2025
- ಕರ್ನಾಟಕ ಅಪರಾಧ ಮುಕ್ತಗೊಳಿಸುವಿಕೆ (ಉಪಬಂಧಗಳ ತಿದ್ದುಪಡಿ)ಮಸೂದೆ 2025
- ನೋಂದಣಿ(ಕರ್ನಾಟಕ ತಿದ್ದುಪಡಿ)ಮಸೂದೆ, 2025
- ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಅನುಕೂಲತೆ ಮತ್ತು ನಿಯಂತ್ರಣಾ)(ತಿದ್ದುಪಡಿ) ಮಸೂದೆ 2025
- ಕರ್ನಾಟಕ ಪುರಸಭೆಗಳ ಹಾಗೂ ಇತರೆ ಕಾನೂನುಗಳ(ತಿದ್ದುಪಡಿ) ಮಸೂದೆ 2025
- ಕರ್ನಾಟಕ ಬಂದರು(ಲ್ಯಾಂಡಿಂಗ್ ಮತ್ತು ಶಿಪ್ಪಿಂಗ್ ಫೀಸ್) (ತಿದ್ದುಪಡಿ) ಮಸೂದೆ 2025
- ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಮಸೂದೆ 2025
- ಕರ್ನಾಟಕ ಭೂ ಸುಧಾರಣೆಗಳು ಮತ್ತು ಇತರೆ ಕಾನೂನು(ತಿದ್ದುಪಡಿ) ಮಸೂದೆ 2025
- ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ಮಸೂದೆ 2025
- ಗ್ರೇಟರ್ ಬೆಂಗಳೂರು ಆಡಳಿತ(ತಿದ್ದುಪಡಿ) ಮಸೂದೆ 2025
- ಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ (ತಿದ್ದುಪಡಿ) ಮಸೂದೆ 2025
- ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ)ಮಸೂದೆ 2025
- ಕರ್ನಾಟಕ ಅಂತರ್ಜಲ(ಅಭಿವೃದ್ಧಿ, ನಿರ್ವಹಣೆ, ನಿಯಂತ್ರಣ) (ತಿದ್ದುಪಡಿ) ಮಸೂದೆ–2025

ಬಿಡಿಎ ಕನಸಿನ ನಿವೇಶನ ನಿಮ್ಮದಾಗಿಸಿಕೊಳ್ಳಲು ಸದಾವಕಾಶ

ಬಿಡ್ ಮಾಡಿ!!

ಇ-ಹರಾಜು ಪ್ರಕಟಣೆ



ಇ-ಹರಾಜನ್ನು ಆರಂಭಿಸುವ ದಿನಾಂಕ: 11-08-2025

ಪ್ರತಿ ಚ.ಮೀ.ಗೆ ರೂ. 500/– ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ವಸತಿ ಹಾಗೂ ವಾಣಿಜ್ಯ ಮೂಲೆ / ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984 ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು.

ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 25–08–2025, ಸಂಜೆ 5.00 ಗಂಟೆಗೆ

ಇ–ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 1 ರಿಂದ 41): 28–08–2025 ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 29–08–2025 ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಬನಶಂಕರಿ 6ನೇ ಹಂತ 4ನೇ ಬ್ಲಾಕ್, ಲಿಂಗಧೀರನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ–ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
1	1803	12.00	18.00	216.00
2	1802	12.00	18.00	216.00
3	1800	12.00	18.00	216.00
4	439	18.00	(8.70+7.00)/2	141.30
5	306	(12.00+11.00)/2	18.00	207.00
6	1501	(7.00+7.50)/2	18.00	130.50
7	509	(8.70+8.50)/2	12.00	103.20
8	1953	(7.00+6.80)/2	12.00	82.80

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಬನಶಂಕರಿ 6ನೇ ಹಂತ 3ನೇ ಬ್ಲಾಕ್, ಹೆಮ್ಮಿಗೆಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
9	2061	(16.00+4.50)/2	12.00	123.00
10	1860	(16.00+4.90)/2	12.00	125.40
11	1794	(9.00+18.00)/2	12.00	162.00
12	1731	12.00	8.20	98.40

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 74,100/– ಸಂಪರ್ಕಿಸಿ: 9591964603

ಬನಶಂಕರಿ 6ನೇ ಹಂತ 2ನೇ ಬ್ಲಾಕ್, ತುರಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
13	383	12.00	18.00	216.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,500/– ಸಂಪರ್ಕಿಸಿ: 9591964603

ಬನಶಂಕರಿ 6ನೇ ಹಂತ 1ನೇ ಬ್ಲಾಕ್, ತುರಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
14	270	15.20	12.00	182.40
15	266	(12.00+15.50)/2	18.00	247.50

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 68,700/– ಸಂಪರ್ಕಿಸಿ: 9591964603

ಕುಮಾರಸ್ವಾಮಿ 1ನೇ ಬ್ಲಾಕ್, ಗೋವಿನಾಯಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
16	93	(5.40+1.80)/2	9.20	33.12
17	54	(7.70+2.20)/2	9.00	44.55
18	10	(7.2+11.30)/2	9.00	83.25
19	1206/A	12.8	(6.70+3.00)/2	62.08

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,27,500/– ಸಂಪರ್ಕಿಸಿ: 9591964603

ಬಿಟಿಎಂ 6ನೇ ಹಂತ 1ನೇ ಬ್ಲಾಕ್, ಹುಳಿಮಾವು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
20	7	12.19	16.5	201.14
21	10	12.19	18.28	222.83
22	25	12.19	13.3	162.13
23	52	(11.00+9.00)/2	12.19	123.12

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 90,000/– ಸಂಪರ್ಕಿಸಿ: 8310525317

ಅಂಜನಾಪುರ ಟೌನ್‌ಶಿಪ್ 1ನೇ ಬ್ಲಾಕ್, ಅಂಜನಾಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
24	593	(9.00+3.70)/2	12.00	76.20
25	620	(12.50+6.50)/2	12.00	114.00
26	684	(8.00+2.50)/2	12.00	63.00
27	711	(7.50+3.10)/2	12.00	63.60

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 64,000/– ಸಂಪರ್ಕಿಸಿ: 8310525317

ಬನಶಂಕರಿ 6ನೇ ಹಂತ 11ನೇ ಬ್ಲಾಕ್, ಗಣಕಲ್ಲು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
28	275	18.00	(7.00+11.00)/2	162.00
29	844	24.00	19.00	456.00
30	850	24.00	14.00	336.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,02,000/– ಸಂಪರ್ಕಿಸಿ: 9591964603

ಮುಂದುವರೆದ ಅಂಜನಾಪುರ 10ನೇ ಬ್ಲಾಕ್, ಕೆಂಭತ್ತಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
31	674	9.00	6.00	54.00
32	675	9.00	6.00	54.00
33	676	9.00	6.00	54.00
34	1140	18.00	12.00	216.00
35	1141	18.00	12.00	216.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73,200/– ಸಂಪರ್ಕಿಸಿ: 8310525317

ಬನಶಂಕರಿ 6ನೇ ಹಂತ 11ನೇ ಬ್ಲಾಕ್, ಗಣಕಲ್ಲು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
36	1162	12.00	5.00	60.00
37	1146	12.00	8.00	96.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,02,000/– ಸಂಪರ್ಕಿಸಿ: 9591964603

ಬನಶಂಕರಿ 6ನೇ ಹಂತ 7ನೇ ಬ್ಲಾಕ್, ಸೋಂಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
38	1373	12.00	(15.00+28.00)/2	258.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 62,300/– ಸಂಪರ್ಕಿಸಿ: 9844916955

ಮುಂದುವರೆದ ಅಂಜನಾಪುರ 5ನೇ ಜಿ ಬ್ಲಾಕ್, ಗೊಲ್ಲಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
39	837/K	9.00	(9.50+9.80)/2	86.85
40	837/I	9.00	(9.80+10.00)/2	89.10

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 67,300/– ಸಂಪರ್ಕಿಸಿ: 8310525317

ಮುಂದುವರೆದ ಬನಶಂಕರಿ 4ನೇ ಹೆಚ್ ಬ್ಲಾಕ್, ಗುಬ್ಬಲಾಲ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
41	1463	9.50	12.00	114.00
42	1375	(8.20+9.00)/2	12.00	103.20

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಜೆ.ಪಿ. ನಗರ 9ನೇ ಹಂತ 4ನೇ ಬ್ಲಾಕ್, ಆಲಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
43	96	6.00	9.00	54.00
44	266	6.00	9.00	54.00
45	230	6.00	9.00	54.00
46	186	6.00	9.00	54.00
47	138	6.00	9.00	54.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,22,000/– ಸಂಪರ್ಕಿಸಿ: 8310525317

ಇ–ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 42 ರಿಂದ 82): 29–08–2025 ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 30–08–2025 ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಜ್ಞಾನಭಾರತಿ ವಲಗೇರಹಳ್ಳಿ, ವಲಗೇರಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ–ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
48	765	(9.00+8.70)/2	12.2	107.97
49	764	9.40	12.15	114.21
50	468	9.15	(5.10+5.80)/2	49.86

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/– ಸಂಪರ್ಕಿಸಿ: 8147510380

ಜ್ಞಾನಭಾರತಿ ನಾಗದೇವನಹಳ್ಳಿ, ನಾಗದೇವನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
51	44	5.75	9.14	52.55
52	13	5.75	9.14	52.55

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/– ಸಂಪರ್ಕಿಸಿ: 8147510380

ಚಂದ್ರಲೇಔಟ್ 1ನೇ ಹಂತ 2ನೇ ಬ್ಲಾಕ್ ಗಂಗೊಂಡನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
53	1489	(9.40+9.00)/2	(7.00+6.80)/2	63.48
54	1490	(9.00+8.50)/2	(6.80+6.00)/2	56.00
55	1644/A	11.8	9.60	113.28

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,35,000/– ಸಂಪರ್ಕಿಸಿ: 8147510380

ಮುಂದುವರೆದ ಸರ್. ಎಂ. ವಿಶ್ವೇಶ್ವರಯ್ಯ ಲೇಔಟ್ 7ನೇ ಬ್ಲಾಕ್, ಗಿಡ್ಡದಕೋನೆನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
56	1160/1	12.00	(7.30+7.70)/2	90.00
57	1155	(11.70+13.80)/2	(16.0+8.0)/2	153.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 72,000/– ಸಂಪರ್ಕಿಸಿ: 8147510380

ನಾಗರಭಾವಿ 2ನೇ ಹಂತ 5ನೇ ಬ್ಲಾಕ್ ಮಾಳಗಾಳ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
58	165	(5.40+3.70)/2	11.8	53.69
59	180	12.1	(2.60+9.80)/2	75.02
60	164	12.1	(3.80+10.40)/2	85.91

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,31,500/– ಸಂಪರ್ಕಿಸಿ: 6362956998

ನಾಗರಭಾವಿ 2ನೇ ಹಂತ 3ನೇ ಬ್ಲಾಕ್ ಮಾಳಗಾಳ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
61	14	18.3	(19.60+4.10)/2	216.86
62	126	12.2	(15.30+8.00)/2	142.13

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,31,500/– ಸಂಪರ್ಕಿಸಿ: 6362956998

ಹೆಚ್‌ಬಿಆರ್ 1ನೇ ಹಂತ 3ನೇ ಬ್ಲಾಕ್, ಕಾಚರಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
63	818	18.28	12.19	222.83
64	814	18.28	12.19	222.83
65	815	18.28	12.19	222.83

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,71,500/– ಸಂಪರ್ಕಿಸಿ: 8722433608

ಅರ್ಕಾವತಿ 19ನೇ ಬ್ಲಾಕ್ ಚಳ್ಳಕೆರೆ, ಚಳ್ಳಕೆರೆ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
66	CH30	(6.60+6.00)/2	9	56.7
67	CH50	4	9	36
68	CH51	(4.20+3.00)/2	12	43.2
69	1166	5.5	9	49.5
70	335	(7.50+7.60)/2	(5.30+5.40)/2	40.39

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75,000/– ಸಂಪರ್ಕಿಸಿ: 7349388238

ಅರ್ಕಾವತಿ 8ನೇ ಬ್ಲಾಕ್ ಶ್ರೀರಾಂಪುರ, ಶ್ರೀರಾಂಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
71	794	(9.30+9.80)/2	12	114.6
72	807	(9.30+9.60)/2	12	113.4

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 63,000/– ಸಂಪರ್ಕಿಸಿ: 7349388238

ಹೆಚ್‌ಬಿಆರ್ 1ನೇ ಹಂತ 3ನೇ ಬ್ಲಾಕ್, ಕಾಚರಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
73	410/B	12.00	18.4	220.8

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,71,500/– ಸಂಪರ್ಕಿಸಿ: 8722433608

ಅರ್ಕಾವತಿ 11ನೇ ಬ್ಲಾಕ್ ರಾಚೇನಹಳ್ಳಿ, ರಾಚೇನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
74	1157	12.00	(7.40+7.60)/2	90
75	1170/A	12.00	(8.10+7.90)/2	96
76	1158	12.00	8.8	105.6
77	1181/A	12.00	7.9	94.8
78	1146	12.00	(7.30+7.50)/2	88.8

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 82,500/– ಸಂಪರ್ಕಿಸಿ: 9980402882

ಹೆಚ್‌ಬಿಆರ್ 1ನೇ ಹಂತ 3ನೇ ಬ್ಲಾಕ್, ಕಾಚರಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
79	814	18.28	12.19	222.83

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,71,500/– ಸಂಪರ್ಕಿಸಿ: 8722433608

ಅರ್ಕಾವತಿ 15ನೇ ಬ್ಲಾಕ್ ಥಣಿಸಂದ್ರ, ಥಣಿಸಂದ್ರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
80	TS666	9	(6.85+6.80)/2	61.42
81	TS620	9	5	45
82	TS619	(11.50+12.00)/2	(11.60+11.80)/2	137.47
83	TS567	7	(9.00+8.50)/2	61.25
84	TS589	8.6	(15.00+14.50)/2	126.85
85	TS590	12.00	(11.20+11.80)/2	138

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 82,500/– ಸಂಪರ್ಕಿಸಿ: 9980402882

ಅಂಜನಾಪುರ ಟೌನ್‌ಶಿಪ್ 6ನೇ ಬ್ಲಾಕ್, ಅಂಜನಾಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
86	137	(9.50+6.00)/2	12.00	93.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 70,700/– ಸಂಪರ್ಕಿಸಿ: 8310525317

ಜೆ.ಪಿ. ನಗರ 9ನೇ ಹಂತ 2ನೇ ಹಂತ, ಆಲಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
87	437	18.28	(13.20+13.00)/2	239.46

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,22,000/– ಸಂಪರ್ಕಿಸಿ: 8310525317

ಇ–ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 83 ರಿಂದ 122): 30–08–2025 ರ ಬೆಳಿಗ್ಗೆ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 01–09–2025 ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಮುಂದುವರೆದ ಅಂಜನಾಪುರ 9ನೇ ಬ್ಲಾಕ್, ಗೊಲ್ಲಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ–ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
88	395	12.00	(19.30+21.00)/2	241.80

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 77,800/– ಸಂಪರ್ಕಿಸಿ: 8310525317

ಮುಂದುವರೆದ ಅಂಜನಾಪುರ 5ನೇ ಜಿ ಬ್ಲಾಕ್, ಗೊಲ್ಲಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
89	792	(14.00+12.50)/2	18.00	238.50

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 67,300/– ಸಂಪರ್ಕಿಸಿ: 8310525317

ಜೆ.ಪಿ. ನಗರ (ಟಿ.ಕೆ. ದೀಪಕ್ ಲೇಔಟ್) 8ನೇ ಹಂತ 1ನೇ ಎ ಬ್ಲಾಕ್, ಕೊತ್ತನೂರು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
90	189	12.19	18.28	222.83

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/– ಸಂಪರ್ಕಿಸಿ: 8310525317

ಬಿಟಿಎಂ 4ನೇ ಹಂತ 2ನೇ ಬ್ಲಾಕ್, ದೇವರ ಚಿಕ್ಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
91	1242	20.50	14.60	299.30
92	1246	21.00	12.20	256.20

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,30,000/– ಸಂಪರ್ಕಿಸಿ: 8310525317

ಬನಶಂಕರಿ 6ನೇ ಹಂತ 11ನೇ ಬ್ಲಾಕ್, ಗಣಕಲ್ಲು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
93	893	(14.00+29.00)/2	24.00	516.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,02,000/– ಸಂಪರ್ಕಿಸಿ: 9591964603

ಬಿಟಿಎಂ 6ನೇ ಹಂತ 1ನೇ ಬ್ಲಾಕ್, ಹುಳಿಮಾವು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
94	176	18.28	(16.50+17.50)/2	310.76
95	268	24.38	12.30	299.87
96	274	24.38	15.24	371.55
97	279	6.00	24.38	146.28
98	314	9.14	10.00	91.40

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 90,000/– ಸಂಪರ್ಕಿಸಿ: 8310525317

ಬಿಟಿಎಂ 4ನೇ ಹಂತ 2ನೇ ಬ್ಲಾಕ್, ದೇವರ ಚಿಕ್ಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
99	952	6.00	12.19	73.14

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,30,000/– ಸಂಪರ್ಕಿಸಿ: 8310525317

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಬಿ ಬ್ಲಾಕ್, ಬಿ.ಎಂ. ಕಾವಲ್

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
100	1060	18.00	(17.00+21.60)/2	347.40
101	865	18.00	(19.00+16.00)/2	315.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಬಿ ಬ್ಲಾಕ್, ಯು.ಎಂ. ಕಾವಲ್

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
102	928	18.00	(15.00+12.00)/2	243.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಬಿ ಬ್ಲಾಕ್, ಬಿ.ಎಂ. ಕಾವಲ್

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
103	915	18.00	(13.50+6.50)/2	180.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಬಿ ಬ್ಲಾಕ್, ಯು.ಎಂ. ಕಾವಲ್

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
104	998	18.00	(10.00+5.00)/2	135.00
105	999	18.00	(16.00+10.00)/2	234.00
106	1063	18.00	(3.00+12.00)/2	135.00
107	1129	24.00	14.30	343.20
108	1186	24.00	12.50	300.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಟಿ ಬ್ಲಾಕ್, ತಲಘಟ್ಟಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
109	395/A	12.00	(9.00+1.50)/2	63.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಮುಂದುವರೆದ ಬನಶಂಕರಿ 6ನೇ ಹಂತ 4ನೇ ಬಿ ಬ್ಲಾಕ್, ಬಿ.ಎಂ. ಕಾವಲ್

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
110	964	18.00	(10.50+10.20)/2	186.30
111	1046	18.00	(18.50+16.50)/2	310.50
112	891	18.00	(11.80+10.90)/2	204.30

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69,300/– ಸಂಪರ್ಕಿಸಿ: 9591964603

ಅಂಜನಾಪುರ ಟೌನ್‌ಶಿಪ್ 8ನೇ ಬ್ಲಾಕ್, ಅಂಜನಾಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
113	1119	(6.00+12.00)/2	12.00	108.00
114	1150	(8.30+3.00)/2	12.00	67.80

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 88,500/– ಸಂಪರ್ಕಿಸಿ: 8310525317

ಜೆ.ಪಿ. ನಗರ 9ನೇ ಹಂತ 4ನೇ ಎ ಬ್ಲಾಕ್, ಕೊತ್ತನೂರು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
115	458	(5.30+3.80)/2	9.60	43.68

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,06,100/– ಸಂಪರ್ಕಿಸಿ: 8310525317

ಅಂಜನಾಪುರ ಟೌನ್‌ಶಿಪ್ 1ನೇ ಬ್ಲಾಕ್, ಅಂಜನಾಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
116	540/D	12.00	9.00	108.00
117	579/N	11.50	9.00	103.50

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 64,000/– ಸಂಪರ್ಕಿಸಿ: 8310525317

ಜೆ.ಪಿ. ನಗರ 8ನೇ ಹಂತ 2ನೇ ಬ್ಲಾಕ್, ಕೊತ್ತನೂರು

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
118	536	12.19	18.28	222.83

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/– ಸಂಪರ್ಕಿಸಿ: 8310525317

ಸರ್. ಎಂ. ವಿಶ್ವೇಶ್ವರಯ್ಯ ಲೇಔಟ್ 4ನೇ ಬ್ಲಾಕ್, ರಾಮಸಂದ್ರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
119	1793/9	15.00	24.00	360.00

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 72,000/– ಸಂಪರ್ಕಿಸಿ: 6362956998

ಅಂಜನಾಪುರ ಟೌನ್‌ಶಿಪ್ 1ನೇ ಬ್ಲಾಕ್, ಅಂಜನಾಪುರ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
120	290/B	(3.80+13.00)/2	12.00	100.80
121	809	12.00	(13.30+4.10)/2	104.40

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 64,000/– ಸಂಪರ್ಕಿಸಿ: 8310525317

ಹೆಚ್‌ಬಿಆರ್ 1ನೇ ಹಂತ 2ನೇ ಬ್ಲಾಕ್, ಕಾಚರಕನಹಳ್ಳಿ

ಕ್ರ. ಸಂ.	ನಿವೇಶನ ಸಂಖ್ಯೆ	ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
122	334	18.28	12.19	222.83

ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,72,000/– ಸಂಪರ್ಕಿಸಿ: 8722433608

ಇ–ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1) ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.

2) ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).

3) ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].

4) ಸಹಿ ಮತ್ತು ಭಾವಚಿತ್ರದ ಗುರುತನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].

5) ಹರಾಜು ಖರೀದಿದಾರರು ಸರಿಯಾದ ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ–ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.

6) **ಅಪ್ರಾಪ್ತ ವಯಸ್ಕರು / ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ / ಹತ್ತಿರದ ಸ್ನೇಹಿತರ ಮೂಲಕ ಇ–ಹರಾಜಿನಲ್ಲಿ ಭಾಗವಹಿಸಬಹುದು. ಇ–ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು / ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**

7) ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.

8) ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತವನ್ನು ರೂ. 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ ಮತ್ತು ಈ ಮೊತ್ತವನ್ನು ಇ–ಹರಾಜಿನ ಶುಲ್ಕದೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಉಲ್ಲೇಖಿಸಿದಂತೆ ಪಾವತಿಸಬೇಕು. ಇ–ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಪಾವತಿಸಿದರೆ ಮರುಪಾವತಿ ಸಮಯದಲ್ಲಿ ಇಎಂಡಿಯ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.

9) ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.

10) ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.

11) ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

12) ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

13) **ಬ್ಯಾಂಕ್‌ನ ಹೆಸರು:– ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560020.**
ಉಳಿತಾಯ ಖಾತೆಯ ಹೆಸರು:– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
ಉಳಿತಾಯ ಖಾತೆ ಸಂಖ್ಯೆ:– 2828101053014 ಐ.ಎಫ್.ಎಸ್.ಸಿ ಕೋಡ್:– CNRB0002828
ಪಾವತಿಯ ವಿಧಾನ:– ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ

14) ಯಶಸ್ವಿ ಬಿಡ್‌ದಾರರಿಗೆ (ಅತಿ ಹೆಚ್ಚು ಬಿಡ್‌ದಾರರು) ಇ–ಹರಾಜಿನ ಮುಕ್ತಾಯ ಸಮಯದಿಂದ 72 ಗಂಟೆಗಳ ಒಳಗೆ (ಬ್ಯಾಂಕ್ ರಜಾದಿನಗಳನ್ನು ಹೊರತುಪಡಿಸಿ) ಒಟ್ಟು ಬೆಲೆಯ 25% ಮೊತ್ತವನ್ನು ರೂ. 4.00 ಲಕ್ಷಗಳ ಇಎಂಡಿ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ಕೆಳಗೆ ತಿಳಿಸಲಾದ ಬಿಡಿಎ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲಹೆ ಪತ್ರಗಳನ್ನು ಇ–ಮೇಲ್ ಮೂಲಕ ಕಳುಹಿಸಲಾಗುತ್ತದೆ; ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿದ್ದಕ್ಕೆ ಪಡೆದ ಚಲನ್ ಅನ್ನು ಲೆಕ್ಕಾಧಿಕಾರಿ ಹಣಕಾಸು ಇಲಾಖೆ ('ಡಿ' ಬ್ಲಾಕ್, 2ನೇ ಮಹಡಿ ಕೊಠಡಿ ಸಂಖ್ಯೆ 308) ಇವರಿಗೆ ಸಲ್ಲಿಸಬೇಕು. ನಿಗದಿತ ಸಮಯದ ಒಳಗೆ 25% ಹಣವನ್ನು ಸಂದಾಯ ಮಾಡಲು ವಿಫಲವಾದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್ಡುದರಾರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ.ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದ್ದು.

15) ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಮೊತ್ತ ರೂ. 4 ಲಕ್ಷಗಳನ್ನು 30 ಕೆಲಸದ ದಿನಗಳಲ್ಲಿ ಅವರ ಖಾತೆಗೆ ಜಮಾ ಮಾಡಲಾಗುವುದು.

16) ಹರಾಜು ಖರೀದಿದಾರರು ಜಂಟಿಯಾಗಿ ನಿವೇಶನಗಳನ್ನು ನೋಂದಾಯಿಸಲು ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಹರಾಜು ಖರೀದಿದಾರರೊಂದಿಗೆ ರಕ್ತಸಂಬಂಧಿಗಳು ಅಂದರೆ ಸಂಗಾತಿ, ಪುತ್ರರು ಅಥವಾ ಅವಿವಾಹಿತ ಹೆಣ್ಣುಮಕ್ಕಳು ಮಾತ್ರ ಜಂಟಿ ನೋಂದಣಿಗೆ ಅರ್ಹರಾಗಿರುತ್ತಾರೆ. ಅರ್ಜಿಯಲ್ಲಿ ಅಂತಹ ವ್ಯಕ್ತಿಯ ಸಂಬಂಧವನ್ನು ಸ್ಪಷ್ಟವಾಗಿ ನಮೂದಿಸಬೇಕು ಮತ್ತು ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು. ನಂತರ ಅಂತಹ ವಿನಂತಿಯನ್ನು ತಿರಸ್ಕರಿಸಲಾಗುತ್ತದೆ.

17) ಬಿಡ್ಡಿಂಗ್ ಸಮಯದಲ್ಲಿ, ಒಂದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದಲ್ಲಿ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.

18) **ಯಶಸ್ವಿ ಬಿಡ್ಡುದಾರರು / ಅತಿ ಹೆಚ್ಚಿನ ಬಿಡ್ಡುದಾರರು ಇ–ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ. 4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

19) ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ. 50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.

20) ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು) ಮೊದಲು ಇ–ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು.
ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):– ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು.

21) ಬಿಡ್ಡುದಾರರು / ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ–ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).

22) ಇ–ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.

23) ಇ–ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 m^2 ನಿವೇಶನದ ವಿಸ್ತೀರ್ಣದ ಮೂಲ ದರ ರೂ. 45,000/m^2 ಆಗಿರುತ್ತದೆ. ಬಿಡ್‌ದಾರರು ರೂ. 45,000x1.1 = ರೂ. 49,500/m^2 ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ. 49,500/– ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.

24) ಪ್ರತಿ ನಿವೇಶನಕ್ಕೆ ಕನಿಷ್ಠ 2 ಬಿಡ್‌ದಾರರುಗಳು ಇರಬೇಕು. ಏಕ ಬಿಡ್‌ದಾರನನ್ನು ತಿರಸ್ಕರಿಸಲಾಗುವುದು.

25) ವೆಬ್‌ಸೈಟ್ ವಿಳಾಸ: **www.kbda.karnataka.gov.in**

26) ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ವೆಬ್‌ಸೈಟ್: **https://kppp.karnataka.gov.in** ಇಲ್ಲಿಗೆ ಲಾಗ್‌ಆನ್ ಆಗಿ ಹೊಸ ಇ–ಹರಾಜು ಬಿಡ್ಡಿಂಗ್ ಬಳಕೆದಾರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್: **080–46010000** ಮತ್ತು **080–68948777** ಸಂಪರ್ಕಿಸುವುದು.

27) ಹರಾಜು ಮಾಡಿದ ನಿವೇಶನಗಳನ್ನು ಯಶಸ್ವಿ ಬಿಡ್‌ದಾರರಿಗೆ ಅವುಗಳು ಇರುವ ಸ್ಥಿತಿಯಲ್ಲಿಯೇ ಹಂಚಿಕೆ ಮಾಡಲಾಗುವುದು. ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಇತ್ಯಾದಿಗಳನ್ನು ಬಿಡ್ ಮಾಡುವ ಮುನ್ನ ಭೌತಿಕವಾಗಿ ಪರಿಶೀಲಿಸತಕ್ಕದ್ದು. ಇ–ಹರಾಜಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಪರ್ಯಾಯ ನಿವೇಶನ ನೀಡಲಾಗುವುದಿಲ್ಲ.

28) ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಮೇಲೆ ನಿರ್ದಿಷ್ಟಪಡಿಸಿರುವ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು.

29) ಇ–ಹರಾಜಿನ ಬಗ್ಗೆ, ಬಿಡ್‌ದಾರರು ಪ್ರಾಧಿಕಾರವನ್ನು ನೇರವಾಗಿ ಸಂಪರ್ಕಿಸಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು.

30) ನಿವೇಶನಗಳ ಜಿಯೊ ಟ್ಯಾಗ್ ಕೇವಲ ಪರಾಮರ್ಶನೆಗೆ ಮಾತ್ರ. ಅದರಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ಆ ಬಗ್ಗೆ ಯಾವುದೇ ಹಕ್ಕನ್ನು ಮಾನ್ಯ ಮಾಡಲಾಗುವುದಿಲ್ಲ.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ–ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ **https://kppp.karnataka.gov.in** ಲಾಗಾನ್ ಆಗಿ
ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ **080–23368435 / 23368036** ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ **080–46010000 / 68948777** ಸಂಪರ್ಕಿಸಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ. ಬೆಂಅಪ್ರಾ/ಅಸ/ಇ–ಹರಾಜು/ಟಿ–06/2025–26, ದಿನಾಂಕ: 01.08.2025

ಸಹಿ/– ಅಭಿಯಂತರ ಸದಸ್ಯರು

ಕಾಲಿವುಡ್‌ಗೆ ಹೆಜ್ಜೆ ಇಟ್ಟ ಗಿರಿಜಾ

‘ಭೀಮ’ ಸಿನಿಮಾದಲ್ಲಿ ಖಡಕ್ ಪೊಲೀಸ್ ಅಧಿಕಾರಿ ‘ಗಿರಿಜಾ’ ಆಗಿ ಮಿಂಚಿದ್ದ ನಟಿ ಪ್ರಿಯಾ ಶಠಮರ್ಷಣ ನಟನೆಯ ‘ಕಸ್ಟಡಿ’ ಇಂದು (ಆ.8) ತೆರೆಕಂಡಿದೆ. ಜೆ.ಜೆ.ಶ್ರೀನಿವಾಸ್ ನಿರ್ದೇಶನದ ಈ ಚಿತ್ರದಲ್ಲಿ ‘ದುರ್ಗಾಪರಮೇಶ್ವರಿ’ಯಾಗಿ ತೆರೆ ಮೇಲೆ ಕಾಣಿಸಿಕೊಳ್ಳುತ್ತಿರುವ ಅವರು ‘ಸಿನಿಮಾ ರಂಜನೆ’ ಜೊತೆ ಮಾತನಾಡಿದ್ದಾರೆ.


ಪ್ರಿಯಾ

• ಅಭಿಲಾಷ್ ಪಿ.ಎಸ್.

• ‘ಭೀಮ’ ಸಿನಿಮಾದ ‘ಗಿರಿಜಾ’ ಪಾತ್ರದ ಪರಿಣಾಮ...

ಈ ಸಿನಿಮಾದ ಬಳಿಕ ಅವಕಾಶಗಳು ಹಲವಾರು ಬಂದರೂ ಒಂದೇ ಮಾದರಿಯಲ್ಲಿನ ಪಾತ್ರಗಳು ಅವುಗಳಲ್ಲಿದ್ದವು. ಈ ಪೈಕಿ ಬಹುತೇಕ ಎಲ್ಲವೂ ಖಡಕ್ ಪೊಲೀಸ್ ಅಧಿಕಾರಿ ಪಾತ್ರಗಳೇ. ‘ಗಿರಿಜಾ’ಳನ್ನು ನೋಡಿ ಪ್ರಭಾವಕ್ಕೊಳಗಾಗಿ ಬರೆದ ಕಥೆ, ಪಾತ್ರಗಳವು. ಇವುಗಳಲ್ಲಿ ಪೊಲೀಸ್ ಠಾಣೆಗಳು, ಪ್ರಕರಣಗಳಷ್ಟೇ ಬದಲಾಗಿದ್ದವು! ಹೀಗಾಗಿ ಹಲವು ಕಥೆಗಳನ್ನು ತಿರಸ್ಕರಿಸಿದ್ದೆ. ಈ ವಿಷಯದಲ್ಲಿ ಬೇಸರವಿದೆ. ಆದರೆ, ಒಂದೇ ರೀತಿಯ ಪಾತ್ರಗಳನ್ನು ಮುಂದುವರಿಸಿದರೆ ಏಕತಾನತೆ ಆಗುತ್ತದೆ ಎನ್ನುವ ಕಾರಣಕ್ಕೆ ಈ ನಿರ್ಧಾರ ಮಾಡಿದ್ದೆ.

‘ಕಸ್ಟಡಿ’ಯ ನಿರ್ದೇಶಕರು ಆರಂಭದಲ್ಲಿ ‘ಪಾಲ್ಗುಣಿ’ ಕಥೆ ತಂದಿದ್ದರು. ಆ ಸಂದರ್ಭದಲ್ಲಿ ಒಪ್ಪಿಗೆ ನೀಡಲು ಸಮಯ ತೆಗೆದುಕೊಂಡಿದ್ದೆ. ಆ ಅವಧಿಯಲ್ಲೇ ಅವರು ಮತ್ತೊಂದು ಕಥೆಯಾಗಿ ‘ಕಸ್ಟಡಿ’ ವಿವರಿಸಿದ್ದರು. ‘ಭೀಮ’ ಬಳಿಕ ಒಪ್ಪಿಕೊಂಡ ಮೊದಲ ಸಿನಿಮಾ ಇದು. ‘ಭೀಮ’ದಲ್ಲಿ ಖಡಕ್ ಪೊಲೀಸ್ ಅಧಿಕಾರಿಯ ಶೇಡ್ ಅಷ್ಟೇ ಇತ್ತು. ‘ಕಸ್ಟಡಿ’ಯ ಕಥೆ ವಿಶೇಷವಾಗಿತ್ತು ಹಾಗೂ ‘ದುರ್ಗಾಪರಮೇಶ್ವರಿ’ ಎಂಬ ಪಾತ್ರದೊಳಗೆ ಹಲವು ಶೇಡ್‌ಗಳು ಇವೆ. ಹೀಗಾಗಿ ಒಪ್ಪಿಕೊಂಡೆ.

• ಯಾರು ಈ ‘ದುರ್ಗಾಪರಮೇಶ್ವರಿ’?

‘ಗಿರಿಜಾ’ಳಂತೆಯೇ ‘ದುರ್ಗಾ-ಪರಮೇಶ್ವರಿ’ಯೂ ಖಡಕ್, ನಿಯತ್ತಿನ ಪೊಲೀಸ್ ಅಧಿಕಾರಿ. ಪ್ರತಿನಿತ್ಯ ಮೊಬೈಲ್ ಕ್ರೈಂ, ಸೈಬರ್ ಕ್ರೈಂನಿಂದ ಸಾವಿರಾರು ಜನರು ಮೋಸ ಹೋಗುತ್ತಿದ್ದಾರೆ. ಇಂತಹ ಒಂದು ಜಾಲದ ಬೆನ್ನತ್ತಿ ಹೋಗುವ ಕಥೆ ಸಿನಿಮಾದಲ್ಲಿದೆ. ಒಂದು ಸರಣಿ ಹತ್ಯೆಯನ್ನು ಭೇದಿಸುವ ದೃಶ್ಯಗಳಿಂದ ಕಥೆ ಆರಂಭವಾಗುತ್ತದೆ. ಸಿನಿಮಾದೊಳಗೆ ಹಲವು ತಿರುವುಗಳು ಇವೆ. ಪ್ರತಿ-ಯೊಬ್ಬರೊಳಗೂ ಹಲವು ಶೇಡ್‌ಗಳು ಇರುತ್ತವೆ. ‘ಗಿರಿಜಾ’ಳಿಗೆ ಒಂದೇ ಶೇಡ್ ಇತ್ತು. ಅವಳ ಸಂಭಾಷಣೆಯೂ ಅಷ್ಟೇ ಖಾರವಾಗಿತ್ತು. ‘ದುರ್ಗಾ-ಪರಮೇಶ್ವರಿ’ಯೂ ಇಷ್ಟೇ ದಕ್ಷ ಅಧಿಕಾರಿ. ಆದರೆ ಬಳಸಿರುವ ಪೊಲೀಸ್ ಭಾಷೆ ಇದರಲ್ಲಿ ಇತಿಮಿತಿಯಲ್ಲಿದೆ.

• ಒಪ್ಪಿಕೊಂಡಿರುವ ಹೊಸ ಸಿನಿಮಾಗಳು...

‘ಕುಂಭಸಂಭವ’ ರಿಲೀಸ್‌ಗೆ ಸಿದ್ಧವಾಗಿದೆ. ಇದರಲ್ಲಿ ಭ್ರೂಣಹತ್ಯೆಗೆ ಸಂಬಂಧಿಸಿದ ಕಥೆಯಿದೆ. ಇದರಲ್ಲೂ ಪೊಲೀಸ್ ಅಧಿಕಾರಿ ಪಾತ್ರ ಮಾಡಿದ್ದೇನೆ. ಶರತ್ ಲೋಹಿತಾಶ್ವ ಅವರ ಜೊತೆಗೆ ‘ಗಾಂಧಿ ಸ್ಕ್ವೇರ್’, ಅಗ್ನಿ ಎಂಬುವವರು ನಿರ್ದೇಶಿಸಿದ ‘ರುಧಿರವನ’ ಸಿನಿಮಾದಲ್ಲೂ ಬಣ್ಣಹಚ್ಚಿದ್ದೇನೆ. ಇದರಲ್ಲಿ ಪೊಲೀಸ್ ಅಧಿಕಾರಿಯಲ್ಲ. ಭಿನ್ನವಾದ ಪಾತ್ರಗಳು ದೊರಕಿವೆ. ಎರಡು ತಮಿಳು ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಇವುಗಳು ಶೂಟಿಂಗ್ ಹಂತದಲ್ಲಿವೆ. ‘ಭೀಮ’ ಸಿನಿಮಾದಲ್ಲಿನ ಪಾತ್ರವನ್ನು ನೋಡಿಯೇ ಈ ಅವಕಾಶಗಳು ಬಂದಿದ್ದವು. ಈ ಸಿನಿಮಾಗಳ ಪೈಕಿ ಒಂದರಲ್ಲಿ ಪೊಲೀಸ್ ಅಧಿಕಾರಿ ಪಾತ್ರವಿದೆ. ಒಂದು ಸಿನಿಮಾ ಚಾಮರಾಜನಗರದಲ್ಲಿ ನಡೆಯುವ ಕಥೆ ಹೊಂದಿದ್ದು, ಇದು ಕನ್ನಡದಲ್ಲೂ ತೆರೆಕಾಣಲಿದೆ.

• ಒಂದೇ ದಿನ ಒಬ್ಬರೇ ನಿರ್ದೇಶಿಸಿದ ಎರಡು ಸಿನಿಮಾಗಳು ಬಿಡುಗಡೆಯಾಗುತ್ತಿವೆ...

ಹೌದು. ಇದೊಂದು ಸಾಹಸವೇ. ಈ ರೀತಿ ರಿಸ್ಕ್ ತೆಗೆದುಕೊಂಡಿರುವುದನ್ನು ನಾನು ನೋಡಿಲ್ಲ. ಒಂದು ಸಿನಿಮಾ ಬಿಡುಗಡೆ ಮಾಡುವ ಹೊತ್ತಿನಲ್ಲೇ ಸಾಕಾಗಿರುತ್ತದೆ. ಹೀಗಿರುವಾಗ ಒಬ್ಬರೇ ನಿರ್ದೇಶಿಸಿದ ಎರಡು ಸಿನಿಮಾಗಳನ್ನು ಒಬ್ಬರೇ ನಿರ್ಮಾಪಕರು ಒಂದೇ ದಿನ ತೆರೆಗೆ ತರುತ್ತಿರುವುದು ವಿಶೇಷ. ಕೆಲವು ಕಲಾವಿದರು ಎರಡೂ ಸಿನಿಮಾಗಳಲ್ಲಿ ನಟಿಸಿದ್ದಾರೆ. ಎರಡೂ ಸಿನಿಮಾಗಳು ಚೆನ್ನಾಗಿ ಆಗಲಿ ಎಂದು ಆಶಿಸಬಲ್ಲೆ ಅಷ್ಟೇ.

• ದುನಿಯಾ ವಿಜಯ್ ಅವರ ಜೊತೆಗೆ ಮತ್ತೆ ಸಿನಿಮಾಗಳು ಇವೆಯೇ?

ನಾನು ‘ಸಿಟಿಲೈಟ್ಸ್’ನಲ್ಲಿ ನಟಿಸಬೇಕಿತ್ತು. ವಿಜಯ್ ಅವರು ಯಾವುದೇ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ಪಾತ್ರಗಳನ್ನು ಬರೆಯುತ್ತಾರೆ, ಆಯ್ಕೆ ಮಾಡುತ್ತಾರೆ. ‘ಗಿರಿಜಾ’ಳ ಪಾತ್ರ ನಿರೀಕ್ಷೆಗೂ ಮೀರಿ ಈ ಮಟ್ಟಕ್ಕೆ ಸದ್ದು ಮಾಡಿದೆ. ನಿರ್ದೇಶಕರಾಗಿ ಆ ಪಾತ್ರದ ಮೇಲೆ ಬಹಳ ನಂಬಿಕೆಯನ್ನು ವಿಜಯ್ ಅವರು ಇಟ್ಟುಕೊಂಡಿದ್ದರು. ‘ಈ ಪಾತ್ರ ನಿಮಗೆ ಬೇರೆಯದೇ ಆಯಾಮ ನೀಡುತ್ತದೆ’ ಎಂದು ಅವರು ಹೇಳಿದ್ದರು. ‘ಗಿರಿಜಾ’ಳ ಪಾತ್ರ ನೋಡಿ ಇಂದು ಹಲವು ಹೆಣ್ಣುಮಕ್ಕಳು ಪೊಲೀಸ್ ಅಧಿಕಾರಿಯಾಗಬೇಕು ಎಂದು ಓದುತ್ತಿದ್ದಾರೆ. ವಿಜಯ್ ಅವರು ಯಾವಾಗಲೂ ಹೊಸತನದಲ್ಲಿ ನಂಬಿಕೆ ಇಟ್ಟವರು. ಹೊಸಬರನ್ನು ತೆರೆಗೆ ತರುವ ಹುಮ್ಮಸ್ಸು ಅವರಲ್ಲಿದೆ. ಏಕತಾನತೆ ಆಗಬಾರದು ಎನ್ನುವ ಕಾರಣಕ್ಕೆ ಹೊಸಬರನ್ನು ಆಯ್ಕೆ ಮಾಡಿಕೊಂಡರು. ಹೆಣ್ಣುಮಕ್ಕಳಿಗಾಗಿಯೇ ಒಂದು ಕಥೆಯನ್ನು ಸಿದ್ಧಪಡಿಸುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ. ನಾನೂ ಅವರ ಕರೆಗಾಗಿ ಕಾಯುತ್ತಿದ್ದೇನೆ. ‘ಭೀಮ’ ಕೊನೆಯಲ್ಲಿ ‘ಸಲಗ’ ಸಿನಿಮಾಗೆ ಸಣ್ಣ ಲಿಂಕ್ ಇದೆ. ‘ಸಲಗ’ ಸೀಕ್ವೆಲ್‌ನಲ್ಲಿ ‘ಗಿರಿಜಾ’ ಮುಂದುವ-ರಿಯುತ್ತಾಳಾ ಎಂದು ನೋಡಬೇಕಿದೆ. ನಾನಂತೂ ಕಾತುರದಿಂದ ಕಾಯುತ್ತಿದ್ದೇನೆ.



ಎರಡು ಸಿನಿಮಾ; ಒಬ್ಬರೇ ನಿರ್ದೇಶಕ–ನಿರ್ಮಾಪಕ!

ಇಂದು (ಆ.8) ನಾಗೇಶ್ ಕುಮಾರ್ ಯು.ಎಸ್ ಮತ್ತು ಜೆ.ಜೆ.ಶ್ರೀನಿವಾಸ್ ನಿರ್ಮಿಸಿ, ಜೆ.ಜೆ.ಶ್ರೀನಿವಾಸ್ ನಿರ್ದೇಶಿಸಿರುವ ‘ಕಸ್ಟಡಿ’ ಹಾಗೂ ‘ಪಾಲ್ಗುಣಿ’ ಎಂಬ ಚಿತ್ರಗಳು ತೆರೆಕಂಡಿವೆ. ‘ಕಸ್ಟಡಿ’ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಾದರೆ, ‘ಪಾಲ್ಗುಣಿ’ ಮಂಡ್ಯದಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿದ ಕಥಾಹಂದರ ಹೊಂದಿರುವ ಚಿತ್ರ. ರೇಖಾಶ್ರೀ ‘ಪಾಲ್ಗುಣಿ’ಯಲ್ಲಿ ಮುಖ್ಯಭೂಮಿಕೆಯಲ್ಲಿದ್ದಾರೆ.

‘ಸೋಹಂ’ ತಂಡದ ಪಯಣ

‘ಸಿನಿಮಾ ಜೊತೆ ಜೊತೆಗೇ ಸಂಗೀತ ಪಯಣದಲ್ಲಿ ಹೊಸ ಹೆಜ್ಜೆ ಇಟ್ಟಿದ್ದೇನೆ. ರಂಗಭೂಮಿಯಿಂದ ಬಂದ ನನಗೆ ಇದು ಹಲವು ವರ್ಷಗಳ ಕನಸು.

ರಂಗಭೂಮಿಯಲ್ಲಿದ್ದಾಗ ಜನಪದ, ರಂಗಗೀತೆಗಳನ್ನು ಹಾಡುತ್ತಿದ್ದೆ. ನಾನು, ನನ್ನ ಪತಿ ಅವಿನಾಶ್ ಸೇರಿಕೊಂಡು ‘ಸೋಹಂ’ ಎನ್ನುವ ಮ್ಯೂಸಿಕ್ ಬ್ಯಾಂಡ್ ಕಟ್ಟಿಕೊಂ-ಡಿದ್ದೇವೆ. ಹುಣ್ಣಿಮೆಯ ದಿನಗಳಂದು ಹಂಪಿ, ದೊಡ್ಡಬಳ್ಳಾಪುರದಲ್ಲಿ ಕಾರ್ಯಕ್ರಮ ನೀಡಿದ್ದು, ಇದು ಮುಂದುವರಿಯಲಿದೆ. ಎಲ್ಲಾ ಜಾನರ್‌ನ ಹಾಡುಗಳನ್ನು ಇಲ್ಲಿ ಹಾಡುತ್ತೇವೆ’ ಎಂದರು ಪ್ರಿಯಾ.


ಸೋನಾಲ್

ಅಂತಿಮ ಘಟ್ಟದಲ್ಲಿ ರೋಲೆಕ್ಸ್ ಚಿತ್ರ

ನಟ ಕೋಮಲ್ ನಟನೆಯ, ವಿ.ಸಿ.ಶ್ರೀನಿವಾಸ್ ನಿರ್ದೇಶನದ ‘ರೋಲೆಕ್ಸ್’ ಸಿನಿಮಾದ ಮಾತಿನ ಭಾಗದ ಚಿತ್ರೀಕರಣ ಹಾಗೂ ಒಂದು ಹಾಡಿನ ಶೂಟಿಂಗ್ ಪೂರ್ಣಗೊಂಡಿದೆ ಎಂದು ಚಿತ್ರತಂಡ ತಿಳಿಸಿದೆ.

ಹಾಸ್ಯ ಹಾಗೂ ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಕೋಮಲ್‌ಗೆ ಜೋಡಿಯಾಗಿ ಸೋನಾಲ್ ಮೊಂತೆರೋ ನಟಿಸಿದ್ದಾರೆ. ಮಧು ಫಿಲಂ ಸರ್ಕ್ಯೂಟ್ಸ್ ಸಂಸ್ಥೆ ಲಾಂಛನದಲ್ಲಿ ಅಂಬಟಿ ಮಧು ಮೋಹನಕೃಷ್ಣ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಈ ಹಿಂದೆ ‘ಬಿಲ್ ಗೇಟ್ಸ್’ ಚಿತ್ರ ನಿರ್ದೇಶಿಸಿದ್ದ ಶ್ರೀನಿವಾಸ್ ಈ ಸಿನಿಮಾ ಮೂಲಕ ಕೋಮಲ್ ಅವರನ್ನು ಭಿನ್ನವಾದ ಒಂದು ಪಾತ್ರದ ಮುಖಾಂತರ ಪ್ರೇಕ್ಷಕರ ಎದುರಿಗೆ ತರಲಿದ್ದಾರೆ. ‘ಎರಡು ಹಾಡುಗಳ ಚಿತ್ರೀಕರಣ ಬಾಕಿಯಿದ್ದು, ಇದು ಮುಕ್ತಾಯವಾದರೆ ‘ರೋಲೆಕ್ಸ್’ ಚಿತ್ರದ ಚಿತ್ರೀಕರಣ ಸಂಪೂರ್ಣವಾಗುತ್ತದೆ’ ಎಂದಿದ್ದಾರೆ ಮೋಹನಕೃಷ್ಣ.

ಅಚ್ಯುತ್ ಕುಮಾರ್, ನವೀನ್ ಡಿ.ಪಡೀಲ್, ಅರುಣ ಬಾಲರಾಜ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ರಾಕೇಶ್ ಸಿ.ತಿಲಕ್ ಛಾಯಾಚಿತ್ರಗ್ರಹಣ, ಅರವಿಂದ್ ರಾಜ್ ಸಂಕಲನವಿದೆ.



ಕೋಮಲ್

ಆ.15ಕ್ಕೆ ಒಟಿಟಿಯಲ್ಲಿ ‘ಜಾನಕಿ...’

ನಟ ಸುರೇಶ್ ಗೋಪಿ ನಟನೆಯ ‘ಜಾನಕಿ vs ಸ್ಟೇಟ್ ಆಫ್ ಕೇರಳ’ ಚಿತ್ರ ಆ.15ರಂದು ಜೀ5ನಲ್ಲಿ ಸ್ಟ್ರೀಮಿಂಗ್ ಆಗಲಿದೆ.

ಪ್ರವೀಣ್ ನಾರಾಯಣನ್ ಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಜೆ.ಫಣೀಂದ್ರ ಕುಮಾರ್ ನಿರ್ಮಿಸಿರುವ ಈ ಚಿತ್ರದಲ್ಲಿ ಸುರೇಶ್ ಗೋಪಿ ವಕೀಲ ‘ಡೇವಿಡ್ ಅಬೆಲ್ ಡೊನೊವನ್’ ಪಾತ್ರದಲ್ಲಿ ಮತ್ತು ನಟಿ ಅನುಪಮಾ ಪರಮೇಶ್ವರನ್ ‘ಜಾನಕಿ’ ಪಾತ್ರದಲ್ಲಿ ನಟಿಸಿದ್ದಾರೆ. ದಿವ್ಯ ಪಿಳ್ಳೈ, ಶ್ರುತಿ ರಾಮಚಂದ್ರನ್, ಅಸ್ಕರ್ ಅಲಿ, ಮಾಧವ್ ಸುರೇಶ್ ಗೋಪಿ ಮತ್ತು ಬೈಜು ಸಂತೋಷ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳ ಭಾಷೆಯಲ್ಲಿ ಚಿತ್ರವನ್ನು ವೀಕ್ಷಿಸಬಹುದಾಗಿದೆ.

ಕೇರಳ ಕಾನೂನು ವ್ಯವಸ್ಥೆಯ ಬಗ್ಗೆ ಸಿನಿಮಾದ ಕಥೆಯಿದೆ. ಜಾನಕಿ ಬಾಳಲ್ಲಿ ಒಂದು ಘಟನೆ ನಡೆಯುತ್ತದೆ, ಆಗ ನ್ಯಾಯಕ್ಕಾಗಿ ಹೋರಾಡುವ ಆಕೆಯ ಕಥೆಯನ್ನು ಕೋರ್ಟ್‌ರೂಮ್ ಡ್ರಾಮಾ ಜಾನರ್‌ನಲ್ಲಿ ಹೇಳಲಾಗಿದೆ. ಈ ಸಿನಿಮಾ ಕಳೆದ ಜುಲೈ 17ರಂದು ತೆರೆಕಂಡಿತ್ತು.


ಸುರೇಶ್ ಗೋಪಿ

‘ಕರಾವಳಿ’ಯ ಮಾವೀರ ರಾಜ್ ಬಿ.ಶೆಟ್ಟಿ



ಗುರುದತ್ ಗಾಣಿಗ ನಿರ್ದೇಶನದ ‘ಕರಾವಳಿ’ ಸಿನಿಮಾ ಬಿಡುಗಡೆಗೂ ಮುನ್ನವೇ ಕುತೂಹಲ ಸೃಷ್ಟಿಸಿದೆ. ಕರಾವಳಿ ಮಣ್ಣಿನ ಮತ್ತೊಂದು ಭಿನ್ನವಾದ ಕಥೆ ಹೊತ್ತ ಈ ಸಿನಿಮಾದಲ್ಲಿ ನಟ ಪ್ರಜ್ವಲ್ ದೇವರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ಪ್ರಜ್ವಲ್ ಸೇರಿದಂತೆ ನಟರಾದ ರಮೇಶ್ ಇಂದಿರಾ, ಮಿತ್ರ ಕೂಡಾ ಈ ಹಿಂದೆಂದೂ ಮಾಡಿರದಂತಹ ಪಾತ್ರಗಳ ಮೂಲಕ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ ನಟ ರಾಜ್ ಬಿ.ಶೆಟ್ಟಿ.

ಸದ್ಯ ‘ಸು ಫ್ರಮ್ ಸೋ’ನ ಕರುಣಾಕರ ಗುರೂಜಿಯಾಗಿ ಮಿಂಚುತ್ತಿರುವ ರಾಜ್ ‘ಕರಾವಳಿ’ಯಲ್ಲಿ ‘ಮಾವೀರ’ನಾಗಿ ಕಾಣಿಸಿಕೊಳ್ಳಲಿದ್ದಾರೆ. ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಒಂದನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ರಾಜ್ ಲುಕ್ ಆಕರ್ಷಕವಾಗಿದೆ. ಎರಡು ಕೋಣಗಳ ಮಧ್ಯೆ ನಿಂತು ದಿಟ್ಟಿಸಿ ನೋಡುತ್ತಿರುವ ರಾಜ್ ಒಂದು ಕೈಯಲ್ಲಿ ಪಂಜು ಹಿಡಿದಿದ್ದಾರೆ. ‘ಮಾವೀರ’ ಕಂಬಳ ಓಡಿಸುವ ಓಟಗಾರನೇ ಅಥವಾ ಕಂಬಳ ನಡೆಸುವ ಕುಟುಂಬದ ಮಹಾವೀರನೇ ಎನ್ನುವುದು ಕುತೂಹಲ ಮೂಡಿಸಿದೆ. ರಾಜ್ ಪಾತ್ರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಚಿತ್ರತಂಡ ಬಿಟ್ಟುಕೊಟ್ಟಿಲ್ಲ. ಈ ಪೋಸ್ಟರ್ ‘ಕರಾವಳಿ’ ಸಿನಿಮಾ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಸಿನಿಪಯಣದಲ್ಲಿ ನಿರಂತರವಾಗಿ ಭಿನ್ನವಾದ ಪಾತ್ರಗಳಿಗೆ ಬಣ್ಣಹಚ್ಚುತ್ತಿದ್ದಾರೆ ರಾಜ್. 2017ರಲ್ಲಿ ‘ಒಂದು ಮೊಟ್ಟೆಯ ಕಥೆ’ ಬಳಿಕ ಅವರು ಹಾಸ್ಯ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದು 2025ರಲ್ಲಿ. ಈ ನಡುವೆ ‘ಗರುಡ ಗಮನ ವೃಷಭ ವಾಹನ’, ‘ಸ್ವಾತಿ ಮುತ್ತಿನ ಮಳೆ ಹನಿಯೇ’, ‘ಟೋಬಿ’, ‘ಚಾರ್ಲಿ’, ‘ರೂಪಾಂತರ’, ‘ಟರ್ಬೊ’ ಹೀಗೆ ಎಲ್ಲಾ ಸಿನಿಮಾಗಳಲ್ಲೂ ಅವರ ಪಾತ್ರ ಒಂದಕ್ಕಿಂತ ಒಂದು ಭಿನ್ನವಾಗಿತ್ತು. ಸದ್ಯ ಅರ್ಜುನ್ ಜನ್ಯ ನಿರ್ದೇಶನದ ‘45’ ಸಿನಿಮಾ ಬಿಡುಗಡೆಗೆ ಎದುರುನೋಡುತ್ತಿರುವ ರಾಜ್, ‘ಕರಾವಳಿ’ಗೆ ಗತ್ತು ತುಂಬಿದ್ದಾರೆ.


ಕಂಬಳದ ಜೊತೆಗೆ ಯಕ್ಷಗಾನ ‘ಕರಾವಳಿ’ ಸಿನಿಮಾದ ಪ್ರಮುಖ ಭಾಗವಾಗಿದೆ. ಗಾಣಿಗ ಫಿಲ್ಮ್ಸ್ ಹಾಗೂ ವಿಕೆ ಫಿಲ್ಮ್ಸ್ ಅಸೋಸಿಯೇಷನ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ಚಿತ್ರದಲ್ಲಿ ಸಂಪದಾ ನಾಯಕಿಯಾಗಿದ್ದಾರೆ. ಮನುಷ್ಯ ಮತ್ತು ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ ಇದಾಗಿದೆ. ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಭಿಮನ್ಯು ಸದಾನಂದನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಶೋಧ ಆರಂಭಿಸಿದ ಪವನ್ ಕುಮಾರ್

ಜೀ5ನಲ್ಲಿ ಪ್ರಸಾರವಾದ ನಟಿ ಖುಷಿ ರವಿ ನಟನೆಯ ‘ಅಯ್ಯನ ಮನೆ’ ವೆಬ್ ಸರಣಿ ಕನ್ನಡದ ವೆಬ್ ಸರಣಿ ಪರಂಪರೆಗೆ ಹೊಸ ತಿರುವು ನೀಡಿತ್ತು. ‘ಅಯ್ಯನ ಮನೆ’ ಯಶಸ್ಸಿನ ಬೆನ್ನಲ್ಲೇ ಜೀ5 ಮತ್ತೊಂದು ಕನ್ನಡದ ವೆಬ್ ಸರಣಿ ಘೋಷಿಸಿದೆ. ‘ಶೋಧ’ ಎಂಬ ಶೀರ್ಷಿಕೆಯ ಈ ಸರಣಿಯನ್ನು ಆ.22ರಿಂದ ವೀಕ್ಷಿಸಬಹು-ದಾಗಿದೆ.

ಈ ವೆಬ್ ಸರಣಿಗೆ ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ಗೌಡ ನೇತೃತ್ವದ ಕೆಆರ್‌ಜಿ ಸ್ಟುಡಿಯೊಸ್ ಬಂಡವಾಳ ಹೂಡಿದೆ. ಕೆಆರ್‌ಜಿ ಸ್ಟುಡಿಯೊಸ್ ನಿರ್ಮಿಸಿ, ಪ್ರಸ್ತುತಪಡಿಸುತ್ತಿರುವ ‘ಶೋಧ’ ವೆಬ್ ಸರಣಿಗೆ ಸುನಿಲ್ ಮೈಸೂರು ನಿರ್ದೇಶನವಿದೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸರಣಿಯಲ್ಲಿ ‘ಮನಸಾರೆ’, ‘ಪಂಚರಂಗಿ’, ‘ಲೈಫು ಇಷ್ಟೇನೆ’, ‘ಯೂಟರ್ನ್’, ‘ಧೂಮಂ’ ಮತ್ತು ‘ಲೂಸಿಯಾ’ ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ನಟ, ನಿರ್ದೇಶಕ ಪವನ್ ಕುಮಾರ್ ಮುಖ್ಯಭೂಮಿಕೆಯಲ್ಲಿದ್ದಾರೆ. ‘ರೋಹಿತ್’ ಅವರ ಪಾತ್ರದ ಹೆಸರು.

‘ಈ ವೆಬ್ ಸರಣಿಯಲ್ಲಿ ನಟಿಸುವುದು ನನಗೆ ಸಂಪೂರ್ಣವಾಗಿ ಹೊಸ ಪ್ರಯಾಣ. ಬರವಣಿಗೆ ಮತ್ತು ನಿರ್ದೇಶನದಿಂದ ಬಂದ ನಂತರ ಕ್ಯಾಮೆರಾ ಮುಂದೆ ಹೆಜ್ಜೆ ಹಾಕಿದ್ದೇನೆ. ಇದು ಹೊಸ ಸವಾಲುಗಳನ್ನು ಮುಂದಿಟ್ಟಿದೆ’ ಎಂದಿದ್ದಾರೆ ಪವನ್.


ಪವನ್ ಕುಮಾರ್

‘ಮುಂದಿನ ಸಿನಿಮಾ ಶರಣ್ ಜೊತೆಗೆ’

ಪೃಥ್ವಿ ಅಂಬಾರ್ ನಟನೆಯ ‘ಕೊತ್ತಲವಾಡಿ’ ಸಿನಿಮಾ ನಿರ್ಮಾಣ ಮಾಡಿದ್ದ ನಟ ಯಶ್ ತಾಯಿ ಪುಷ್ಪ ಅರುಣ್‌ಕುಮಾರ್ ಅವರ ಮುಂದಿನ ಪ್ರಾಜೆಕ್ಟ್‌ನಲ್ಲಿ ನಟ ಶರಣ್ ನಾಯಕರಾಗಿ ನಟಿಸಲಿದ್ದಾರೆ.

‘ಕೊತ್ತಲವಾಡಿ’ ಸಿನಿಮಾದ ಟೀಸರ್ ಬಿಡುಗಡೆ ಸಮಾರಂಭದಲ್ಲೇ ಈ ವಿಷಯವನ್ನು ಪುಷ್ಪ ಅರುಣ್‌ಕುಮಾರ್ ಹೇಳಿದ್ದರು. ಇತ್ತೀಚೆಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿರುವ ಅವರು, ‘ಮೊದಲ ಸಿನಿಮಾದಲ್ಲಿ ಒಂದು ತಂಡ ಸಿದ್ಧವಾಗಿದೆ. ಶರಣ್ ನನಗೆ ಮನೆ ಮಗನಂತೆ. ‘ಕೊತ್ತಲವಾಡಿ’ ಸಿನಿಮಾ ಆರಂಭಕ್ಕೂ ಬಹಳ ಮೊದಲೇ ಶರಣ್ ಮನೆಗೆ ಹೋಗಿದ್ದೆ. ಆವಾಗಲೇ ನಾನು ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಡುವ ಬಗ್ಗೆ ಶರಣ್ ಜೊತೆ ಮಾತನಾಡಿದ್ದೆ’ ಎಂದಿದ್ದಾರೆ.


ಪುಷ್ಪ ಅರುಣ್‌ಕುಮಾರ್

‘ಶರಣ್ ಹಾಸ್ಯಕ್ಕೆ ಹೆಸರಾದವರು. ಸಿನಿಮಾವನ್ನೇ ಪ್ರೀತಿಸುವ ವ್ಯಕ್ತಿ. ಯಶ್ ಕೂಡಾ ಶರಣ್ ಬಗ್ಗೆ ಮಾತನಾಡುತ್ತಿದ್ದ. ಯಶ್ ಜೊತೆಗೆ ಹಲವು ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. ನಾವಿನ್ನೂ ಸಿನಿಮಾದ ಎಬಿಸಿಡಿ ಕಲಿಯುತ್ತಿದ್ದೇವೆ. ಇಂತಹವರಿಗೆ ಸಿನಿಮಾ ಮಾಡಿಕೊಂಡು ನಂತರ ದೊಡ್ಡ ಸಿನಿಮಾಗಳನ್ನು ಮಾಡೋಣ. ಎಲ್ಲರೂ ಯಶ್‌ಗೆ ಸಿನಿಮಾ ಮಾಡುವುದಿಲ್ಲವೇ ಎಂದು ಕೇಳುತ್ತಾರೆ. ಯಶ್‌ಗೆ ಸಿನಿಮಾ ಮಾಡಲು ದುಡ್ಡು ಬೇಕಲ್ಲವೇ? ಸದ್ಯ ಯಶ್ ಅಮ್ಮನಾಗಿ ನನ್ನನ್ನು ಗುರುತಿಸಿದ್ದಾರೆ. ಮಗನಿಂದ ತಾಯಿಗೆ ಹೆಸರು ಬಂದಿರುವುದು ಹೆಮ್ಮೆಯ ವಿಷಯವೇ. ಇದು ತಾಯಿ–ಮಗನ ಸಂಬಂಧ. ಕೆಲಸ ಎಂದು ಬಂದಾಗ ಡ್ರೈವರ್ ಹೆಂಡ್ತಿ ಪುಷ್ಪ ಅರುಣ್‌ಕುಮಾರ್ ಆಗಿ ಗುರುತಿಸಿಕೊಳ್ಳುವುದೇ ನನಗೆ ಇಷ್ಟ. ಡ್ರೈವರ್ ಹೆಂಡ್ತಿಯಾಗಿ ಒಂದು ಸಿನಿಮಾ ಪ್ರೊಡಕ್ಷನ್ ಮಾಡಿದ್ದೇನೆ ಎನ್ನುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ’ ಎಂದಿದ್ದಾರೆ ಪುಷ್ಪ ಅರುಣ್‌ಕುಮಾರ್.

‘ತ್ರಿಕಾರಂ’ ಚಿತ್ರೀಕರಣ ಪೂರ್ಣ

ಹರ್ಷವರ್ಧನ್ ನಟನೆಯ, ದಿಲೀಪ್ ಕುಮಾರ್ ಜೆ.ಆರ್. ನಿರ್ದೇಶನದ ‘ತ್ರಿಕಾರಂ’ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಆರಂಭಿಸಿದೆ.

ಹೊಸಬರೇ ಸೇರಿ ನಿರ್ಮಿಸಿರುವ ಈ ಚಿತ್ರಕ್ಕೆ ‘ಇದು ಸ್ಮಶಾನ ಅಲ್ಲ’ ಎಂಬ ಅಡಿಬರಹವಿದೆ. ಜಿ.ಗಣೇಶ್ ಮೂರ್ತಿ ಅವರು ಸದ್ಗುರು ಸಿನಿ ಪ್ರೊಡಕ್ಷನ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಜೊತೆಗೆ ಖಳನಾಯಕನ ಪಾತ್ರಕ್ಕೂ ಅವರು ಬಣ್ಣಹಚ್ಚಿದ್ದಾರೆ.



‘ಚಿತ್ರವು ಕಾಲ್ಪನಿಕ ಸಾಹಸಭರಿತ ಕಥೆಯನ್ನು ಹೊಂದಿದೆ. ಹೊಸದುರ್ಗದಲ್ಲಿ ಬೃಹತ್ ಸೆಟ್ ಹಾಕಿ, ಅಲ್ಲಿ ಸಿನಿಮಾದ ಮುಖ್ಯವಾದ ದೃಶ್ಯಗಳನ್ನು ಸೆರೆಹಿಡಿಯಲಾಗಿತ್ತು’ ಎಂದರು ದಿಲೀಪ್ ಕುಮಾರ್.

‘ವೀರಂ’, ‘ಶುಗರ್‌ಲೆಸ್’ ಚಿತ್ರಗಳಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದ ಹರ್ಷವರ್ಧನ್ ಈ ಸಿನಿಮಾ ಮೂಲಕ ನಾಯಕನಾಗಿ ಚಿತ್ರರಂಗದಲ್ಲಿ ಹೆಜ್ಜೆ ಇಟ್ಟಿದ್ದಾರೆ. ನಿಶ್ವಿತ ಶೆಟ್ಟಿ ಈ ಚಿತ್ರದ ನಾಯಕಿ. ಉಳಿದಂತೆ ನಾಗೇಂದ್ರ ಅರಸು, ಬಲ ರಾಜವಾಡಿ, ಮಂಜು ಪಾವಗಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿ.ನಾಗೇಂದ್ರಪ್ರಸಾದ್, ಭರ್ಜರಿ ಚೇತನ್, ಚೇತು ಕೇಶವ, ಪ್ರಮೋದ್ ಮರವಂತೆ ಸಾಹಿತ್ಯದ ಗೀತೆಗಳಿಗೆ ವಿವೇಕ್ ಚಕ್ರವರ್ತಿ ಸಂಗೀತ ಸಂಯೋಜಿಸಿದ್ದಾರೆ. ಯಾಸಿನ್ ಹೊನ್ನಾಳಿ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ, ಚಂದ್ರು ಬಂಡೆ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆದಿದೆ.



ಬುಡಾಪೆಸ್ಟ್‌ನಲ್ಲಿ ‘KD’ ಬಿಜಿಎಂ

2025ರ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ ‘KD’ ಸಿನಿಮಾ ಅಕ್ಟೋಬರ್‌ನಲ್ಲಿ ತೆರೆಗೆ ಬರಲು ಸಜ್ಜಾಗುತ್ತಿದೆ. ಚಿತ್ರದ ಬ್ಯಾಗ್ರೌಂಡ್ ಸ್ಕೋರ್ ಕೆಲಸಗಳು ಹಂಗರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಇತ್ತೀಚೆಗೆ ನಡೆದಿದೆ.

ಕಳೆದ ವರ್ಷ ತೆರೆಕಂಡಿದ್ದ ಉಪೇಂದ್ರ ನಟನೆಯ ‘ಯುಐ’ ಸಿನಿಮಾ ತಂಡವೂ ಬುಡಾಪೆಸ್ಟ್‌ನಲ್ಲಿ ಸಂಗೀತವನ್ನು ರೆಕಾರ್ಡ್ ಮಾಡಿತ್ತು. ‘ಸರಿಲೇರು ನೀಕೆವ್ವರು’, ‘ವಿಕ್ರಾಂತ್ ರೋಣ’, ‘ಕೆಜಿಎಫ್-2’ ಮತ್ತು ‘ಸಲಾರ್’ನಂತಹ ಸಿನಿಮಾಗಳು ಈ ಹಿಂದೆ ಬುಡಾಪೆಸ್ಟ್‌ನಲ್ಲಿ ತಮ್ಮ ಸ್ಕೋರ್‌ಗಳನ್ನು ರೆಕಾರ್ಡ್ ಮಾಡಿದ್ದವು. ಇದೀಗ ‘KD’ ತಂಡವೂ ಭರ್ಜರಿಯಾಗಿಯೇ ತಮ್ಮ ಸಿನಿಮಾದ ಸಂಗೀತವನ್ನು ಇಲ್ಲಿ ಸಂಯೋಜಿಸಿದೆ.

‘ಬಿಗ್ ಬ್ಯಾಂಡ್ ತಂಡದೊಂದಿಗೆ ಇಲ್ಲಿ ಕೆಲಸ ನಡೆದಿದೆ. ಭಾರತೀಯ ಸಿನಿಮಾದಲ್ಲೇ ಅತಿ ದೊಡ್ಡ ಆರ್ಕೆಸ್ಟ್ರಾ ಹಾಕಿದ್ದೇವೆ. ಇದು ಕೆವಿಎನ್ ಪ್ರೊಡಕ್ಷನ್ಸ್‌ನಿಂದ ಹಾಗೂ ಪ್ರೇಮ್ ಅವರಿಂದ ಸಾಧ್ಯವಾಯಿತು. ‘KD’ ಬ್ಯಾಗ್ರೌಂಡ್ ಸ್ಕೋರ್ ಬಹಳ ರಿಚ್ ಆಗಿ ಬರಲಿದೆ’ ಎಂದಿದ್ದಾರೆ ಚಿತ್ರದ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ.

‘ಏಕ್ ಲವ್ ಯಾ’ ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಧ್ರುವ ಸರ್ಜಾ, ರೀಷ್ಮಾ ನಾಣಯ್ಯ, ಸಂಜಯ್ ದತ್, ರವಿಚಂದ್ರನ್, ಶಿಲ್ಪಾ ಶೆಟ್ಟಿ, ರಮೇಶ್ ಅರವಿಂದ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ಈ ಸಿನಿಮಾ ನಿರ್ಮಾಣ ಮಾಡಿದೆ. 1970-75ರಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ. ‘KD’ ಅಂದ್ರೆ ಕಾಳಿದಾಸ. ಬೆಂಗಳೂರಿನಲ್ಲಿ 20 ಎಕರೆ ಪ್ರದೇಶದಲ್ಲಿ ಪುರಭವನ, ಕೆ.ಆರ್.ಮಾರ್ಕೆಟ್, ಮೈಸೂರು ಬ್ಯಾಂಕ್, ಧರ್ಮರಾಯ ದೇವಸ್ಥಾನ, ಶಿವಾಜಿ ಟಾಕೀಸ್ ಸೆಟ್ ಹಾಕಿ ಚಿತ್ರದ ಬಹುತೇಕ ಭಾಗ ಚಿತ್ರೀಕರಣಗೊಂಡಿತ್ತು. ಚಿತ್ರಕ್ಕಾಗಿ ಸುಮಾರು 180 ದಿನ ಚಿತ್ರೀಕರಣ ನಡೆಸಿತ್ತು ಚಿತ್ರತಂಡ.

ಕೆ.ಸುಧಾಕರ್ ಹೆಸರು ಬರೆದಿಟ್ಟು ಚಾಲಕ ಆತ್ಮಹತ್ಯೆ

ಸಂಸದ ಸೇರಿ ಮೂವರ ವಿರುದ್ಧ ಪ್ರಕರಣ
ಡಿಸಿ ಕಚೇರಿ ಆವರಣದ ಮರಕ್ಕೆ ನೇಣು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ಕಾರು ಚಾಲಕ ಬಾಬು(33) ಡೆತ್‌ನೋಟ್‌ನಲ್ಲಿ ಸಂಸದ ಡಾ.ಕೆ.ಸುಧಾಕರ್ ಹೆಸರು ಬರೆದಿಟ್ಟು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಮರಕ್ಕೆ ಗುರುವಾರ ನೇಣು ಹಾಕಿಕೊಂಡಿದ್ದಾರೆ.

'ಸಂಸದ ಸುಧಾಕರ್ ಮತ್ತು ಬೆಂಬಲಿಗ ಚಿಕ್ಕಕಾಡಿಗೇನಹಳ್ಳಿಯ ನಾಗೇಶ್ ಎನ್. ಹಾಗೂ ಜಿ. ಪಂ. ಲೆಕ್ಕಶಾಖೆ ಎಸ್‌ಡಿಎ ಮಂಜುನಾಥ್ ಆತ್ಮಹತ್ಯೆಗೆ ಕಾರಣ' ಎಂದು ಮರಣಪತ್ರದಲ್ಲಿ ಬರೆದಿದ್ದಾರೆ.

ಬಾಬು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. 'ಸರ್ಕಾರಿ ಕೆಲಸ ಕೊಡಿಸುವಂತೆ ನಾಗೇಶ್ ಹತ್ತಿರ ಹೋಗಿದ್ದೆ. ಕೆ.ಸುಧಾಕರ್ ತುಂಬಾ ಆತ್ಮೀಯರು ಎಂದು



ಬಾಬು

ಹೇಳಿ, ಲೆಕ್ಕಾಧಿಕಾರಿ ಮಂಜುನಾಥ್ ಬಳಿ ಕರೆದೊಯ್ದಿದ್ದರು. ತನಗೂ ಕೆಲಸ ಕೊಡಿಸಿದ್ದು ಸುಧಾಕರ್ ಎಂದು ಅವರು ಹೇಳಿದ್ದರು' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'2021ರ ಜ.15ರಂದು ನನ್ನನ್ನು ಕರೆಸಿಕೊಂಡ ನಾಗೇಶ್, ಕೆ.ಸುಧಾಕರ್ ಬಳಿ ಮಾತನಾಡಿದ್ದು, ₹40 ಲಕ್ಷ ಕೇಳಿದ್ದಾರೆ ಎಂದು ₹25 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ನನ್ನ ಬಳಿ ₹15 ಲಕ್ಷಕ್ಕೆ ₹10 ಲಕ್ಷ ಸಾಲ ಮಾಡಿ ₹25 ಲಕ್ಷ ಹೊಂದಿಸಿ ಕೊಟ್ಟಿದ್ದೆ. ಎಲ್ಲಾ ಸೇರಿ ₹35 ಲಕ್ಷ ನೀಡಿದ್ದರೂ ಕೆಲಸ ಕೊಡಿಸಲಿಲ್ಲ' ಎಂದು ದೂರಿದ್ದಾರೆ.

ಸಂಸದ ಮೊದಲ ಆರೋಪಿ: ಮೃತನ ಪತ್ನಿ ಶಿಲ್ಪಾ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಸಂಸದ ಸುಧಾಕರ್ ಸೇರಿ ಮೂವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. ಕೆ.ಸುಧಾಕರ್ ಮೊದಲ ಆರೋಪಿ. ನಾಗೇಶ್ ಮತ್ತು ಮಂಜುನಾಥ್ ಕ್ರಮವಾಗಿ ಎರಡು ಮತ್ತು ಮೂರನೇ ಆರೋಪಿಯಾಗಿದ್ದಾರೆ.

'ಯಾವ ತನಿಖೆಯನ್ನಾದರೂ ಮಾಡಲಿ'

'ಪಾರದರ್ಶಕ ಮತ್ತು ನ್ಯಾಯಸಮ್ಮತವಾಗಿ ಯಾವ ರೀತಿಯ ತನಿಖೆಯನ್ನಾದರೂ ಮಾಡಲಿ. ನನ್ನನ್ನೂ ಒಳಗೊಂಡು ಯಾರೇ ತಪ್ಪು ಮಾಡಿದ್ದರೂ ಉಗ್ರ ಶಿಕ್ಷೆ ಕೊಡಿ. ಆದರೆ, ಈ ಆತ್ಮಹತ್ಯೆಯನ್ನು ರಾಜಕೀಯಕ್ಕೆ ದುರ್ಬಳಕೆ ಮಾಡಿಕೊಂಡು ನನಗೆ ಕೆಟ್ಟ ಹೆಸರು ತರುವ ಕೆಲಸ ಮಾಡುತ್ತಿದ್ದಾರೆ' ಎಂದು ಸಂಸದ ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿದ್ದಾರೆ.

'ನನಗೆ ದೊರೆತಿರುವ ಮಾಹಿತಿ ಪ್ರಕಾರ ಮೃತರ ಪತ್ನಿ ದೂರು ನೀಡಲು ಠಾಣೆಗೆ ಹೋದಾಗ ಸ್ಥಳೀಯ ಪಿಎಸ್‌ಐ, ಈ ರೀತಿ ಕೊಟ್ಟರೆ ದೂರು ತೆಗೆದುಕೊಳ್ಳುವುದಿಲ್ಲ. ಸಂಸದ ಸುಧಾಕರ್ ಹೆಸರು ಉಲ್ಲೇಖಿಸಬೇಕು. ಡೆತ್‌ನೋಟ್‌ನಲ್ಲಿ ಇರುವ ರೀತಿ ದೂರು ಕೊಡಬೇಕು ಎಂದು ಹೇಳಿ ಕಳಿಸಿದ್ದಾರೆ' ಎಂದು ಆರೋಪ ಮಾಡಿದ್ದಾರೆ.

'ನನ್ನ ಸಾರ್ವಜನಿಕ ಬದುಕಿನಲ್ಲಿ ಬಾಬು ಎಂಬುವವರನ್ನು ನೋಡಿಲ್ಲ. ಭೇಟಿ ಮಾಡಿಲ್ಲ. ಸಚಿವ, ಶಾಸಕನಾಗಿದ್ದ ವೇಳೆ ನೂರಾರು ಯುವಕರಿಗೆ ಖಾಸಗಿ ಮತ್ತು ಸರ್ಕಾರದ ಮಟ್ಟದಲ್ಲಿ ಸಹಕಾರ ನೀಡಿ ಉದ್ಯೋಗ ದೊರಕಿಸಿಕೊಟ್ಟಿದ್ದೇನೆ. ಈ ವ್ಯಕ್ತಿ ನನ್ನ ಹೆಸರು ಏಕೆ ಉಲ್ಲೇಖ ಮಾಡಿದ್ದಾರೊ ಗೊತ್ತಿಲ್ಲ' ಎಂದಿದ್ದಾರೆ.

4ರಂದೇ ಡೆತ್‌ನೋಟ್ ಸಿದ್ಧ

ಮೃತ ಬಾಬು ಆಗಸ್ಟ್ 4ರಂದೇ ಡೆತ್‌ನೋಟ್ ಬರೆದಿದ್ದಾರೆ. ಈ ವಿಚಾರವನ್ನು ಅವರ ಪತ್ನಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಕಚೇರಿಯಲ್ಲಿ ನನ್ನ ಪತಿ ಜೊತೆ ಕೆಲಸ ಮಾಡುತ್ತಿರುವ ಮಹಿಳಾ ಸಿಬ್ಬಂದಿ ಆ.4ರಂದು ರಾತ್ರಿ 9ಕ್ಕೆ ನನ್ನ ಪತಿ ಬರೆದಿರುವ ಡೆತ್‌ನೋಟ್ ಅನ್ನು ಫೋಟೊ ತೆಗೆದು ನನಗೆ ಕಳುಹಿಸಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್–ಬಿಜೆಪಿ ಜಟಾಪಟಿ

ಕೆ.ಸುಧಾಕರ್ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ನಗರದ ಶಿಡ್ಲಘಟ್ಟ ವೃತ್ತದಲ್ಲಿ ಪ್ರತಿಭಟಿಸಿದರು. 'ನನ್ನ ಪತಿ ಆತ್ಮಹತ್ಯೆಯಲ್ಲಿ ಕೆ.ಸುಧಾಕರ್ ಪಾತ್ರವಿಲ್ಲ ಎಂದು ಮೃತರ ಪತ್ನಿ ದೂರು ನೀಡಲು ಮುಂದಾಗಿದ್ದರು. ಕಾಂಗ್ರೆಸ್‌ನವರ ಒತ್ತಡದಿಂದ ಪ್ರಕರಣದಲ್ಲಿ ಸುಧಾಕರ್ ಹೆಸರು ಸೇರಿಸಲಾಗಿದೆ' ಎಂದು ಬಿಜೆಪಿ ಮುಖಂಡರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಸುಧಾಕರ್ ಹೆಸರು ಕೈಬಿಡದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಸಂಸದ ಸುಧಾಕರ್ ವಿರುದ್ಧ ಸಚಿವ ಸುಧಾಕರ್ ಆಕ್ರೋಶ

ಬೆಂಗಳೂರು: 'ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಯ ಕಾರು ಚಾಲಕ ಬಾಬು ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ ಸಂಸದ ಡಾ. ಕೆ. ಸುಧಾಕರ್ ಹೆಸರು ಪ್ರಸ್ತಾಪವಾಗಿದ್ದು, ಈ ವಿಷಯವನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಪರಿಶಿಷ್ಟ ಜಾತಿಯ ಯುವಕನಿಗೆ ಆದ ಅನ್ಯಾಯವನ್ನು ನಾವು ಸಹಿಸುವುದಿಲ್ಲ' ಎಂದು ಚಿಕ್ಕಬಳ್ಳಾಪುರ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಇದು ಬಹಳ ಅಮಾನುಷ ಕೃತ್ಯ. ಸರ್ಕಾರಿ ಕೆಲಸ ಕೊಡಿಸಲು ಹಣದ ಬೇಡಿಕೆ ಇಟ್ಟ ಬಗ್ಗೆ ಮರಣಪತ್ರದಲ್ಲಿ ಬಾಬು ಸ್ಪಷ್ಟವಾಗಿ ಬರೆದಿದ್ದಾರೆ. ಪಾರದರ್ಶಕ ತನಿಖೆ ಮಾಡಿ, ಸತ್ಯವನ್ನು ಹೊರಗೆ ತರಬೇಕಾಗಿದೆ' ಎಂದರು.

'ಬಿಜೆಪಿ ಸಂಸದರ ಬಗ್ಗೆ ಆರೋಪ ಬಂದಿದೆ. ಈ ಬಗ್ಗೆ ಬಿಜೆಪಿ ನಾಯಕರು ಏನು ಉತ್ತರ ಕೊಡುತ್ತಾರೆ? ಬಿಜೆಪಿಯವರು ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ ? ಪರಿಶಿಷ್ಟ ಜಾತಿಯ ಯುವಕನಿಗೆ, ಅವರ ಕುಟುಂಬಕ್ಕೆ ಯಾವ ರೀತಿಯಲ್ಲಿ ನ್ಯಾಯ ಒದಗಿಸುತ್ತಾರೆ? ವಿರೋಧ ಪಕ್ಷದ ನಾಯಕರು, ಬಿಜೆಪಿ ಅಧ್ಯಕ್ಷರು ಈ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಬೇಕು' ಎಂದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, 'ಸಚಿನ್ ಪಾಂಚಾಳ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾಗ ಬಿಜೆಪಿಯವರು ನನ್ನ ವಿರುದ್ಧ ಕಲಬುರಗಿಯಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರು. ಆ ಪ್ರಕರಣದಲ್ಲಿ ಎಲ್ಲಿಯೂ ನನ್ನ ಹೆಸರು ಇರಲಿಲ್ಲ. ಆದರೂ ನನ್ನ ರಾಜೀನಾಮೆಗೆ ಆಗ್ರಹಿಸಿದ್ದರು. ಅದೇ ನೈತಿಕತೆಯನ್ನು ಬಿಜೆಪಿಯವರು ಈಗ ತೋರಿಸುತ್ತಾರೆಯೇ' ಎಂದು ಪ್ರಶ್ನಿಸಿದರು.

ಶಾಂತಿಗಾಗಿ ಠಾಣೆಯಲ್ಲಿ ಹೋಮ

ಪ್ರಜಾವಾಣಿ ವಾರ್ತೆ



ಲಿಂಗಸುಗೂರು ಠಾಣೆಯ ಒಳ ಕೋಣೆಯಲ್ಲಿ ಹೋಮ ಮಾಡಿಸಲಾಗಿದೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಯಾವುದೇ ಅಹಿತಕರ ಘಟನೆಗಳು ನಡೆಯದೇ ಶಾಂತಿ ನೆಲೆಸಲಿ ಎಂದು ಪ್ರಾರ್ಥಿಸಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬುಧವಾರ ಮಧ್ಯರಾತ್ರಿಯಿಂದ ಗುರುವಾರ ಬೆಳಿಗ್ಗೆವರೆಗೆ ವಿಶೇಷ ಹೋಮ, ಪೂಜೆ ಕೈಂಕರ್ಯ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಪಟ್ಟಣದ ಪೊಲೀಸ್ ಠಾಣೆಯ ಒಳಕೋಣೆಯಲ್ಲಿ ನವಗ್ರಹ ಪೂಜೆ, ಮೃತ್ಯಂಜಯ ಹೋಮ, ವಾಸ್ತು ಶಾಂತಿ, ದೋಷ ನಿವಾರಣಾ ಪೂಜೆ ಮಾಡಿಸಲಾಗಿದೆ. ಠಾಣೆಯ ಮುಖ್ಯಗೇಟ್ ಬಳಿ ದೊಡ್ಡ ಬೂದುಕುಂಬಳ ಕಾಯಿ ಒಡೆದು, ಅದಕ್ಕೆ ಕುಂಕಮ ಹಾಕಿ ವಿಶೇಷ ಪೂಜೆ ಮಾಡಲಾಗಿದೆ.

'ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಕರ್ತವ್ಯ. ಆದರೆ, ಪಟ್ಟಣದ ಪೊಲೀಸರು ಇದಕ್ಕೆ ಹೋಮ–ಹವನ ಮೊರೆ ಹೋಗಿದ್ದಾರೆ. ಅಪರಾಧಿಗಳಿಂದ ನಾಗರಿಕರನ್ನು ರಕ್ಷಣೆ ಮಾಡಬೇಕಾದವರೇ ಹೋಮ–ಹವನದ ಮೊರೆ ಹೋದರೆ ಹೇಗೆ' ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ.

'ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹೊಡೆದಾಟ, ಕಳ್ಳತನ, ಅಪಘಾತ ಸೇರಿ ಇತರೆ ಸಾಲು ಸಾಲು ಪ್ರಕರಣಗಳು ಠಾಣೆಗೆ ಬರುತ್ತಿತ್ತು. ಠಾಣೆಯ ವ್ಯಾಪ್ತಿಯಲ್ಲಿ ಅಹಿತಕರ ಘಟನೆಗಳು ನಡೆಯಬಾರದು. ಶಾಂತಿ ನೆಲಸಬೇಕು ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಪುಂಡಲೀಕ ಪಟೇದಾರ್ ನೇತೃತ್ವದಲ್ಲಿ ಹೋಮ ಹವನ ಮಾಡಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಪೊಲೀಸ್ ಠಾಣೆಯಲ್ಲಿ ಹೋಮ–ಹವನ ನಡೆಸಿರುವುದು ಮೌಢ್ಯತನದ ಪರಮಾವಧಿ. ಶಾಂತಿ–ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಕರ್ತವ್ಯ. ಪೊಲೀಸ್ ಇನ್‌ಸ್ಪೆಕ್ಟರ್ ದೈವಿ ಭಕ್ತರಾಗಿದ್ದರೆ ತಮ್ಮ ಮನೆಯಲ್ಲಿ ಪೂಜೆ ಮಾಡಿಸಲಿ. ಪೊಲೀಸ್ ಠಾಣೆಯಲ್ಲಿ ಹೋಮ ಮಾಡಿಸಿರುವುದು ಸರಿಯಲ್ಲ' ಎಂದು ಡಿಎಸ್‌ಎಸ್ (ಎನ್.ಮೂರ್ತಿ ಬಣದ)ನ ಕಲಬುರಗಿ ವಿಭಾಗದ ಸಂಚಾಲಕ ಹನುಮಂತಪ್ಪ ಕುಣಿಕೆಲ್ಲೂರು ಹಾಗೂ ಡಿಎಸ್‌ಎಸ್ (ಅಂಬೇಡ್ಕರ್ ವಾದ)ನ ಕಲಬುರಗಿ ವಿಭಾಗೀಯ ಸಂಘಟನಾ ಸಂಚಾಲಕ ಲಿಂಗಪ್ಪ ಪರಂಗಿ ಬೇಸರ ವ್ಯಕ್ತಪಡಿಸಿದ್ದಾರೆ.

ಶ್ರಾವಣ ಮಾಸ

'ಹೊಸದಾಗಿ ಕಟ್ಟಡ ನಿರ್ಮಾಣ ಮಾಡಿದಾಗಿನಿಂದಲೂ ಪೊಲೀಸ್ ಠಾಣೆಯಲ್ಲಿ ಯಾವುದೇ ಪೂಜೆ ಮಾಡಿಸಿರಲಿಲ್ಲ. ಶ್ರಾವಣ ಮಾಸವಾಗಿದ್ದರಿಂದ ಶಾಂತಿ ಸುವ್ಯವಸ್ಥೆಗಾಗಿ ಸುದರ್ಶನ ಹೋಮ ಮಾಡಿಸಿದ್ದೇವೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಪುಂಡಲಿಕ ಪಟೇದಾರ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಪಾಲಿಕೆಗೆ ವಂಚನೆ: ಪೊಲೀಸರಿಗೆ ದೂರು

ಹಾಸನ: ಆಕ್ಸಿಸ್ ಬ್ಯಾಂಕಿನ ನಕಲಿ ಸೀಲು ಬಳಸಿ, ವ್ಯವಸ್ಥಾಪಕರ ಸಹಿ ನಕಲು ಮಾಡಿ ಇಲ್ಲಿನ ಮಹಾನಗರ ಪಾಲಿಕೆಗೆ ಶುಲ್ಕ ಪಾವತಿಸದೇ ವಂಚಿಸಲಾಗಿದೆ ಎಂದು ಆಯುಕ್ತ ಕೃಷ್ಣಮೂರ್ತಿ ನಗರ ಠಾಣೆಗೆ ಬುಧವಾರ ದೂರು ನೀಡಿದ್ದಾರೆ.

ಇ–ಖಾತೆಗೆ ಅರ್ಜಿ ಸಲ್ಲಿಸಿರುವ ಮನೆಗಳ ಮಾಲೀಕರು, ಆಕ್ಸಿಸ್ ಬ್ಯಾಂಕ್‌ನಲ್ಲಿ ಚಲನ್ ತುಂಬಿ ಶುಲ್ಕ ಪಾವತಿಸಬೇಕು. ಅದರ ಪ್ರತಿಯನ್ನು ಪಾಲಿಕೆಗೆ ಸಲ್ಲಿಸಬೇಕು. ಆದರೆ, ಪಾಲಿಕೆಯ ನಾಲ್ಕು ಕಡತಗಳಲ್ಲಿ ನಕಲಿ ಸೀಲ್ ಹಾಕಿರುವ ಚಲನ್ ಪ್ರತಿಗಳನ್ನು ಕಂದಾಯ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಇಲ್ಲಿನ ಆಕ್ಸಿಸ್ ಬ್ಯಾಂಕಿನ ಹೆಸರಿನಲ್ಲಿ ಕ್ಯಾಶ್ ರಿಸೀವ್ಡ್ ಎನ್ನುವ ಸೀಲ್ ಮಾಡಿಸಲು ಬೆಂಗಳೂರಿಗೆ ಹೋಗಿದ್ದ ವ್ಯಕ್ತಿಯೊಬ್ಬರ ಬಗ್ಗೆ ಹಾಗೂ ಬ್ಯಾಂಕ್‌ನ ಲೆಟರ್‌ಹೆಡ್‌ನಲ್ಲಿದ್ದ ವ್ಯವಸ್ಥಾಪಕರ ಸಹಿ ಬಗ್ಗೆ ಅನುಮಾನಗೊಂಡ ಸೀಲ್ ಮಾಡುವವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬೆಂಗಳೂರಿನ ಪೊಲೀಸರು ಆತನನ್ನು ಬಂಧಿಸಿದ್ದರು. ಈ ಬಗ್ಗೆ ಮಾಹಿತಿ ಪಡೆದ ಬ್ಯಾಂಕ್ ವ್ಯವಸ್ಥಾಪಕರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತರು ಪಾಲಿಕೆಗೆ ಭೇಟಿ ನೀಡಿ, ಕಡತಗಳನ್ನು, ಪತ್ತೆ ಮಾಡಿರುವ ಚಲನ್‌ಗಳಲ್ಲಿರುವ ಸೀಲ್‌ಗಳನ್ನು ಪರಿಶೀಲಿಸಿದ್ದಾರೆ. 'ಎಷ್ಟು ಹಣ ವಂಚನೆಯಾಗಿದೆ? ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದು ತನಿಖೆಯಿಂದ ದೊರೆಯಲಿದೆ' ಎಂದು ಮೇಯರ್ ಎಂ.ಚಂದ್ರೇಗೌಡ ತಿಳಿಸಿದರು.

ಹಾಸ್ಟೆಲ್ ಸಿಬ್ಬಂದಿಗೆ ನೋಟಿಸ್

ವಿಜಯಪುರ: ನಗರದ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಸತಿ ನಿಲಯದ ವಿದ್ಯಾರ್ಥಿನಿಯರನ್ನು ಅಡುಗೆ ಸಿಬ್ಬಂದಿಯ ಜನ್ಮದಿನಾಚರಣೆಗೆ ಹೋಟೆಲ್‌ಗೆ ಕರೆದೊಯ್ದು, ಔತಣಕೂಟ ಮಾಡಿದ ಆರೋಪದ ಮೇಲೆ ವಾರ್ಡನ್ ಮತ್ತು ಅಡುಗೆ ಸಿಬ್ಬಂದಿಗೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಹೇಶ ಪೋತೆದಾರ ನೋಟಿಸ್ ನೀಡಿದ್ದಾರೆ.

ಆಗಸ್ಟ್ 2ರಂದು ಸಂಜೆ 7 ಗಂಟೆಗೆ ಹಾಸ್ಟೆಲ್‌ನ ಅಡುಗೆ ಸಿಬ್ಬಂದಿ ರಿಜ್ವಾನ್ ಬೇಗಂ ಮುಲ್ಲಾ ಜನ್ಮದಿನಾಚರಣೆಗೆ ವಾರ್ಡನ್ ಶಕುಂತಲಾ ರಜಪೂತ ಅವರು ವಿದ್ಯಾರ್ಥಿನಿಯರನ್ನು ಕರೆದೊಯ್ದಿದ್ದರು.

ವರಗಳ ನೀಡುವ ವರಮಹಾಲಕ್ಷ್ಮಿ

• ಎಸ್. ಸೂರ್ಯಪ್ರಕಾಶ ಪಂಡಿತ್



ಶಕ್ತಿಗೆ ಹಲವು ರೂಪಗಳು, ಹಲವು ನೆಲೆಗಳು. ವಿದ್ಯೆ, ಬುದ್ಧಿ, ಬಲ, ಬೆಳೆ – ಎಲ್ಲವೂ ಶಕ್ತಿಯ ರೂಪಗಳೇ. ಶಕ್ತಿಯನ್ನು ಮಾತೃಸ್ವರೂಪದಲ್ಲಿ ಪೂಜಿಸುತ್ತೇವೆ; ಅವಳ ನೆಲೆಯನ್ನು ಸಂಪತ್ತಿನ ಮೂಲಗಳಲ್ಲಿ ಕಾಣುತ್ತೇವೆ; ಎಲ್ಲ ಸಂಪತ್ತುಗಳ ಒಡತಿಯಾಗಿ ಅವಳನ್ನು ಲಕ್ಷ್ಮಿಯ ಸ್ವರೂಪದಲ್ಲಿ ಆರಾಧಿಸುತ್ತೇವೆ. ನಮ್ಮ ಜೀವನದ ಸುಖ–ನೆಮ್ಮದಿಗಳು ಈ ಸಂಪತ್ತುಗಳನ್ನು ಆಶ್ರಯಿಸಿರುವುದರಿಂದ ಅವಳಲ್ಲಿ ವರಗಳನ್ನು ಬೇಡುತ್ತೇವೆ. ಅಂತೆಯೇ ವರಮಹಾಲಕ್ಷ್ಮಿಯ ವ್ರತವನ್ನೂ ಆಚರಿಸುತ್ತೇವೆ.

ಲಕ್ಷ್ಮಿಯ ಕಲ್ಪನೆ ಬಹಳ ಪ್ರಾಚೀನವಾದುದು. ನಮಗೆ ಇಂದು ಲಕ್ಷ್ಮಿ ಎಂದರೆ ಕೇವಲ ದುಡ್ಡು, ಸಂಪತ್ತು – ಎಂದಷ್ಟೆ ಆಗಿದೆ. ಆದರೆ ನಮ್ಮ ಪೂರ್ವಜರು ಅವಳನ್ನು ಹಲವು ರೂಪಗಳಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದಾರೆ. ಮನುಷ್ಯನ ಮೊದಲ ಸಂಪತ್ತು ಎಂದರೆ ಅದು 'ಮಾತು'. ಹೀಗಾಗಿ ಮಾತನ್ನು ಕೂಡ ನಮ್ಮವರು ಲಕ್ಷ್ಮಿಯನ್ನಾಗಿಯೇ ಆರಾಧಿಸಿದ್ದಾರೆ. ಮಾತಿನ ಸಂಪತ್ತು ಮನುಷ್ಯನಿಗೆ ದಕ್ಕದೆ ಇದ್ದಿದ್ದರೆ ಆಗ ಅವನ ಜೀವನ ಹೇಗಿರುತ್ತಿತ್ತು ಎಂದು ಒಮ್ಮೆ ಊಹಿಸಿಕೊಂಡರೆ ತಿಳಿದೀತು, ಮಾತಿನ ಶಕ್ತಿ.

ವರಮಹಾಲಕ್ಷ್ಮಿಯನ್ನು ಪೂಜಿಸಲು ಸಂಪ್ರದಾಯದಲ್ಲಿ ನಿರ್ದಿಷ್ಟ ದಿನವನ್ನು ಆರಿಸಿಕೊಳ್ಳಲಾಗಿದೆ. ಹೀಗೆಂದು ವರ್ಷದಲ್ಲಿ ಒಂದು ದಿನ ಮಾತ್ರ ಅವಳನ್ನು ಪೂಜಿಸಬೇಕು ಎಂದು ಅರ್ಥವಲ್ಲ. ಪ್ರತಿದಿನದ ಪೂಜೆಯ ಸಾರ್ಥಕತೆ ಈ ದಿನದ ಆಚರಣೆಯಲ್ಲಿ ಅಭಿವ್ಯಕ್ತವಾಗಬೇಕು ಎಂಬುದು ಇದರ ಆಶಯ. ಶ್ರಾವಣಮಾಸದಲ್ಲಿ ಯಾವ ಶುಕ್ರವಾರವು ಹುಣ್ಣಿಮೆಗೆ ಸಮೀಪದಲ್ಲಿ ಇರುತ್ತದೆಯೋ ಅಂದು ವರಮಹಾಲಕ್ಷ್ಮಿಯ ವ್ರತವನ್ನು ಆಚರಿಸುವುದು ರೂಢಿ.

ವ್ರತಾಚರಣೆಗೆ ನಿರ್ದಿಷ್ಟ ವಿಧಿ–ವಿಧಾನಗಳು ಇವೆ. ಆದರೆ ಇವು ಕಾಲ–ದೇಶಗಳನ್ನು ಅವಲಂಬಿಸಿರುತ್ತವೆ. ಪೂಜೆಯನ್ನು ಹೀಗೇ ಮಾಡಬೇಕೆಂಬ ಹಟದಲ್ಲಿಯೋ ನೆಪದಲ್ಲಿಯೋ ಅದನ್ನು ಮಾಡದಿರುವುದಕ್ಕಿಂತಲೂ, ನಮಗೆ ಆ ಸಮಯಕ್ಕೆ ಸಿಕ್ಕುವ ದ್ರವ್ಯಗಳಿಂದ ಪೂಜೆಯನ್ನು ಮಾಡುವುದು ಬಹಳ ಮುಖ್ಯ. ಪೂಜೆಗೆ ಪ್ರಧಾನವಾಗಿ ಬೇಕಾಗಿರುವುದು ನಮ್ಮ ಶ್ರದ್ಧೆ. ಎಲ್ಲ ಇದ್ದೂ ಶ್ರದ್ಧೆ ಇಲ್ಲದಿದ್ದಾಗ ನಾವು ಪೂಜೆಯನ್ನು ಎಷ್ಟು ವೈಭವದಿಂದ ಮಾಡಿದರೂ ಅದು ವ್ಯರ್ಥವೇ ಆಗುತ್ತದೆ; ಅಂತೆಯೇ ಯಾವ ಸಲಕರಣೆ ಇಲ್ಲದಿದ್ದರೂ ಶ್ರದ್ಧೆಯಿಂದ ಮಹಾಲಕ್ಷ್ಮಿಗೆ ನಮಿಸುವುದೇ ವ್ರತಕ್ಕೆ ಸಮ ಎನಿಸಿಕೊಳ್ಳುತ್ತದೆ. ಆದುದರಿಂದ ವ್ರತಾಚರಣೆಗಳು ನಮ್ಮ ಸಂಪತ್ತಿನ ಪ್ರದರ್ಶನಕ್ಕೆ ವೇದಿಕೆಯಾಗದೆ, ಶ್ರದ್ಧಾ–ಭಕ್ತಿಗಳ ದರ್ಶನಕ್ಕೆ ಅಧಿಷ್ಠಾನವಾಗಬೇಕು.

ಸಾಮಾನ್ಯವಾಗಿ ಹೆಣ್ಣುಮಕ್ಕಳೇ ವರಮಹಾಲಕ್ಷ್ಮಿಯ ವ್ರತವನ್ನು ಆಚರಿಸುವುದು. ಹಬ್ಬದ ದಿನ ಪ್ರಾತಃಕಾಲದಲ್ಲಿಯೇ ಶುಚಿರ್ಭೂತರಾಗಿ ವ್ರತಾಚರಣೆಗೆ ಬೇಕಾದ ಎಲ್ಲ ವಸ್ತುಗಳನ್ನು ಸಿದ್ಧಮಾಡಿಕೊಳ್ಳಬೇಕು. ಕಳಶವನ್ನು ಸ್ಥಾಪಿಸಿ ದೇವಿಯನ್ನು ಆಹ್ವಾನಿಸಿ, ಪ್ರಾಣಪ್ರತಿಷ್ಠಾಪನೆಯನ್ನು ನೆರವೇರಿಸಿ, ವಿಧಿವತ್ತಾಗಿ ಪೂಜಾಕಲಪಗಳನ್ನು ನಡೆಸಬೇಕು. ಕಳಶಪೂಜೆಯ ಸಂಪ್ರದಾಯವಿಲ್ಲದವರು, ಮಹಾಲಕ್ಷ್ಮಿಯ ಪಟವನ್ನಿಟ್ಟೂ ಪೂಜಿಸಬಹುದು. ಆಚಾರ್ಯರ ನೆರವಿನಿಂದ ಪೂಜಾವಿಧಿಗಳನ್ನು ನೆರವೇರಿಸಬಹುದು; ಅಥವಾ ದೇವಿಯ ಸ್ತೋತ್ರಗಳನ್ನು ಪಠಿಸುತ್ತ, ಹಾಡುಗಳನ್ನು ಹಾಡುತ್ತಲೂ ಅವಳನ್ನು ಅರ್ಚಿಸಬಹುದು. ಗುರು–ಹಿರಿಯರ ಮಾರ್ಗದರ್ಶನಲ್ಲಿ ನೆರವೇರಿಸುವ ಪೂಜಾ ಕಲಾಪಗಳಿಗೆ ಹೆಚ್ಚಿನ ಕಳೆ ಒದಗುತ್ತದೆ; ಮನೆಯವರೆಲ್ಲರೂ ಒಂದಾಗಿ ಸೇರಿ ಆಚರಿಸುವ ಹಬ್ಬಕ್ಕೆ ಬಲ ಬರುತ್ತದೆ.

ಇಂದು ನಾವು ಎಲ್ಲ ಸಂಪತ್ತನ್ನೂ ಹಣದ ರೂಪದಲ್ಲಿಯೇ ಕಾಣುತ್ತಿದ್ದೇವೆ. ವಿವೇಕಲಕ್ಷ್ಮಿಯು ನಮಗೆ ಒಲಿಯದೆ, ದೂರ ಸರಿದಿರುವುದೇ ಇದಕ್ಕೆ ಕಾರಣ. ಹೀಗಾಗಿ ನಾವು ವರಮಹಾಲಕ್ಷ್ಮಿಯ ಹಬ್ಬದಂದು ದೇವಿಯನ್ನು ಕೇಳಿಕೊಳ್ಳುವ ವರಗಳಲ್ಲಿ ಬದಲಾವಣೆಯಾಗಬೇಕು. ಜೀವನದ ಸಮಗ್ರತೆಗೆ ಬೇಕಾದ ಎಲ್ಲ ಸಂಪತ್ತುಗಳನ್ನೂ ಅನುಗ್ರಹಿಸುವಂತೆ ಅವಳನ್ನು ಪ್ರಾರ್ಥಿಸಬೇಕು. ಐಶ್ವರ್ಯಲಕ್ಷ್ಮಿಗೂ ಮೊದಲು ವಿದ್ಯಾಲಕ್ಷ್ಮಿ, ವಿಜಯಲಕ್ಷ್ಮಿಗೂ ಮೊದಲು ಧೈರ್ಯಲಕ್ಷ್ಮಿಯ ಅನುಗ್ರಹವನ್ನು ಕೇಳಿಕೊಳ್ಳಬೇಕು. ಶ್ರೀಲಕ್ಷ್ಮಿ ಮತ್ತು ಮೋಕ್ಷಲಕ್ಷ್ಮಿಗಳಿಬ್ಬರೂ ಒಂದೇ ತತ್ತ್ವದ ಎರಡು ಸ್ವರೂಪಗಳು ಎಂಬ ಅರಿವಿನಿಂದ ಆಚರಿಸುವ ಹಬ್ಬಕ್ಕೆ ಆನಂದಲಕ್ಷ್ಮಿಯ ಅಭಯ ಇದ್ದೇ ಇರುತ್ತದೆ.

ಒಳ ಮೀಸಲು: ಮಾದಿಗರೇ ಮೇಲುಗೈ

ಜಾತಿಗಣತಿ ಅಥವಾ ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶವು ನಿಂತ ನೀರಲ್ಲ, ಅದು ಚಲನಾತ್ಮಕವಾದದ್ದು: ನಾಗಮೋಹನ್‌ದಾಸ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆ ಮಾಡುವ ಉದ್ದೇಶದಿಂದ ರಾಜ್ಯದಾದ್ಯಂತ ನಡೆಸಿದ ಸಮೀಕ್ಷೆಯಲ್ಲಿ ಮಾದಿಗರು (ಎಡಗೈ) ಅತೀ ಹೆಚ್ಚು 27,73,780 ಜನಸಂಖ್ಯೆ ಹೊಂದಿರುವುದು ಗೊತ್ತಾಗಿದೆ. ಎರಡನೇ ಸ್ಥಾನದಲ್ಲಿ ಹೊಲೆಯ (ಬಲಗೈ) ಉಪ ಜಾತಿಯವರಿದ್ದಾರೆ (24,72,103).

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಲು ರಾಜ್ಯ ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಈ ಮಾಹಿತಿಯಿದೆ.

'101 ಜಾತಿಗಳ ಪೈಕಿ, ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಜಾತಿಗಳ ಸಂಖ್ಯೆ 90. ಅವುಗಳಲ್ಲಿ ಬಹುತೇಕ ಜಾತಿಗಳು ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸ ಮಾಡುತ್ತಿಲ್ಲ. ಬೇರೆ, ಬೇರೆ ಪ್ರದೇಶಗಳಲ್ಲಿ ಹಂಚಿಹೋಗಿದ್ದಾರೆ. ಸಣ್ಣಪುಟ್ಟ ಜಾತಿಗಳು ಜನಸಂಖ್ಯೆ ಕಡಿಮೆ ಇರುವ ಕಾರಣ ರಾಜಕೀಯವಾಗಿ ಬಲ ಕಳೆದು ಕೊಂಡಿದ್ದಾರೆ. ಯಾವುದೇ ವಿಧಾನ ಸಭಾ ಕ್ಷೇತ್ರದಲ್ಲಿ ಈ ಜಾತಿಗಳ ಸಂಖ್ಯೆ ನಿರ್ಣಾಯಕ ಪಾತ್ರ ವಹಿಸಲು ಸಾಧ್ಯ ಆಗಿಲ್ಲ. ಮೀಸಲಾತಿ ಇದ್ದರೂ ಬಲಿಷ್ಠ ಜಾತಿಗಳ ಜೊತೆ ಸ್ಪರ್ಧೆ ಮಾಡಿ ಗೆಲ್ಲುವ ಸ್ಥಿತಿಯಲ್ಲಿಲ್ಲ. ಜೊತೆಗೆ, ಚುನಾವಣಾ ವ್ಯವಸ್ಥೆಯು ಜಾತಿ ಮತ್ತು ಹಣದ ಪ್ರಭಾವಕ್ಕೆ ಒಳಗಾಗಿರುವ ಕಾರಣ ಸಣ್ಣಪುಟ್ಟ ಜಾತಿಯ ಜನ ರಾಜಕೀಯ ಅಧಿಕಾರ ಪಡೆಯಲು ಸಾಧ್ಯ ಆಗಿಲ್ಲ' ಎಂದು ವರದಿ ಹೇಳಿದೆ.

> ಹಸಿದವರಿಗೆ ಮೊದಲು ಉಣಲು ಕೊಡಬೇಕು. ಚೆನ್ನಾಗಿ ಉಂಡವರು ಸ್ವಲ್ಪ ತ್ಯಾಗ ಮಾಡಬೇಕು. ಈ ನೀತಿಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಆದ್ಯತೆಯ ಮೇಲೆ ಹಂಚಿಕೆ ಮಾಡಲಾಗಿದೆ
>
> **ಎಚ್.ಎನ್. ನಾಗಮೋಹನ್‌ದಾಸ್,** ನ್ಯಾಯಮೂರ್ತಿ (ವರದಿಯಲ್ಲಿ)

ಆಯೋಗ ಹೇಳಿರುವುದೇನು?: 'ಹಾಗೆಂದು, ಹೀಗೆ ಹಂಚಿಕೆ ಮಾಡಿರುವ ಒಳ ಮೀಸಲಾತಿಯು ಶಾಶ್ವತವೂ ಅಲ್ಲ ಅಥವಾ ಅಂತಿಮವೂ ಅಲ್ಲ. ಜನಸಂಖ್ಯೆ ಮತ್ತು ಜಾತಿಯ ಗಣತಿ ಅಥವಾ ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶವು ನಿಂತ ನೀರಲ್ಲ. ಬದಲಾಗಿ ಅದು ಚಲನಾತ್ಮಕವಾದದ್ದು. ಜನನ, ಮರಣ, ವಲಸೆ, ಆಹಾರ, ಆರೋಗ್ಯ ಇತ್ಯಾದಿಗಳು ಬದಲಾದಂತೆ ಕಾಲಕಾಲಕ್ಕೆ ದತ್ತಾಂಶವೂ ಬದಲಾಗುತ್ತಾ ಹೋಗುತ್ತದೆ. ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಒಳ ಮೀಸಲಾತಿಯನ್ನು ಪರಿಷ್ಕರಿಸಬೇಕಾಗುತ್ತದೆ.

ಕರ್ನಾಟಕ ಸರ್ಕಾರದ ಜಾತಿವಾರು ಸಮೀಕ್ಷೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ಜನಗಣತಿಯ ಜತೆಗೆ ಜಾತಿ ಗಣತಿ ನಡೆಸಲು ಪ್ರಕ್ರಿಯೆ ಆರಂಭಿಸಿದೆ. ಇವುಗಳಿಂದ ಲಭ್ಯವಾಗುವ ದತ್ತಾಂಶದಲ್ಲಿ ಏರುಪೇರುಗಳು ಕಂಡುಬಂದರೆ ಒಳ ಮೀಸಲಾತಿಯನ್ನು ಪರಿಷ್ಕರಿಸಬಹುದು.

'ಮೀಸಲಾತಿ ಸೌಲಭ್ಯ ಪಡೆದುಕೊಂಡಿರುವ ಕೆಲವು ಜಾತಿಗಳಲ್ಲಿ ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆಯನ್ನು ಕಾಣಬಹುದು. ಈ ಸಮುದಾಯದವರು ಸ್ವಲ್ಪಮಟ್ಟಿಗೆ ಸಬಲೀಕರಣಗೊಂಡಿದ್ದಾರೆ. ಮೀಸಲಾತಿ ಸವಲತ್ತು ತಲುಪಿಯೇ ಇಲ್ಲದ ಕೆಲವು ಜಾತಿಗಳವರ ಜೀವನ ಹೀನಾಯವಾಗಿದೆ. ಇವರ ಮತ್ತು ಇವರ ಮಕ್ಕಳ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇದೆ. ಉನ್ನತ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗವೂ ಇಲ್ಲ. ಇಂತಹ ಜಾತಿಗಳ ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಕೂಡಾ ಪರಿಗಣನೆಗೆ ತೆಗೆದುಕೊಂಡು ಮೀಸಲಾತಿ ಪ್ರಮಾಣವನ್ನು ಹಂಚಲಾಗಿದೆ' ಎಂದು ಆಯೋಗ ಹೇಳಿದೆ.

ಅತೀ ಹೆಚ್ಚು ಜನಸಂಖ್ಯೆ ಇರುವ ಜಾತಿಗಳು (1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ)

ಜಾತಿ	ಜನಸಂಖ್ಯೆ
ಮಾದಿಗ	27,73,780
ಹೊಲೆಯ	24,72,103
ಬಂಜಾರ	14,05,272
ಬೋವಿ	11,29,301
ಭಾಂಬಿ, ಭಾಂಭಿ	5,10,454
ಛಲವಾದಿ	3,76,448
ಬೇಡ ಜಂಗಮ	3,22,049
ಆದಿ ದ್ರಾವಿಡ	3,20,641
ಕೊರಮ	2,43,620
ಪರೈಯನ್,ಪರಯ	1,61,164
ಆದಿ ಕರ್ನಾಟಕ	1,47,199

ಪರಿಶಿಷ್ಟ ಜಾತಿಗಳ ಸಂಖ್ಯೆ– ಮೀಸಲಾತಿ ಹಂಚಿಕೆ

ಪ್ರವರ್ಗ	ಜಾತಿಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ಜನಸಂಖ್ಯೆ (ಶೇ)	ಮೀಸಲಾತಿ ಹಂಚಿಕೆ (ಶೇ)
ಪ್ರವರ್ಗ 'ಎ'	59	5,22,099	4.97	1
ಪ್ರವರ್ಗ 'ಬಿ'	18	36,69,246	34.91	6
ಪ್ರವರ್ಗ 'ಸಿ'	17	30,08,633	28.63	5
ಪ್ರವರ್ಗ 'ಡಿ'	04	28,34,939	26.97	4
ಪ್ರವರ್ಗ 'ಇ'	03	4,74,954	4.52	1
ಒಟ್ಟು	101	1,05,09,871	100	17

ಜನಸಂಖ್ಯೆವಾರು ಜಾತಿಗಳು

ಜನಸಂಖ್ಯೆ	ಜಾತಿಗಳು
10 ಸಾವಿರಕ್ಕಿಂತ ಕಡಿಮೆ	73
10 ಸಾವಿರದಿಂದ 50 ಸಾವಿರ	12
50 ಸಾವಿರದಿಂದ 1 ಲಕ್ಷ	5
1 ಲಕ್ಷಕ್ಕಿಂತ ಹೆಚ್ಚು	11

ಅತೀ ಕಡಿಮೆ ಜನಸಂಖ್ಯೆ ಇರುವ ಜಾತಿ (100ಕ್ಕಿಂತ ಕಡಿಮೆ ಜನಸಂಖ್ಯೆ)

ಜಾತಿ	ಜನಸಂಖ್ಯೆ
ಕೆಪ್ಮಾರಿಸ್	6
ಮಾಲ ಹನ್ನಯ್	8
ಕೋಲುಪುಲುವಂದ್ಲು	18
ಮಸ್ತಿ	33
ಮಾಲ ಮಸ್ತಿ	38
ಮನ್ನೆ	51
ಬಿಂದ್ಲ	52
ಸಪರಿ	55
ಲಿಂಗದೇರ್	60
ಮಾಲ ಜಂಗಮ	62
ಮವಿಲನ್	66
ಮಾಲ ಸಾಲೆ,ನೆಟ್ಕನಿ	67
ಚಾಂಡಾಲ	76
ಕಡೈಯಾನ್	76
ಎಲ್ಲಮಲ್ವರ್, ಯೆಲ್ಲಮ್ಮಲವಂಡ್ಲು	80
ಪಣ್ಣಿಯಂದಿ	83
ಸಾಂಬನ್	93

ಸುದ್ದಿ 2 ನಿಮಿಷ

ನಾಟಿ ವೈದ್ಯನಿಂದ ಔಷಧ ನಾಲ್ಕಕ್ಕೇರಿದ ಸಾವಿನ ಸಂಖ್ಯೆ

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಇಮಡಾಪುರ ಗ್ರಾಮದ ನಾಟಿ ವೈದ್ಯನಿಂದ ಔಷಧ ಪಡೆದಿದ್ದ ಇನ್ನೊಬ್ಬ ವ್ಯಕ್ತಿ ಗುರುವಾರ ಮೃತಪಟ್ಟಿದ್ದಾರೆ. ಚಿತ್ತಾಪುರ ತಾಲ್ಲೂಕಿನ ಭೀಮನಳ್ಳಿ ತಾಂಡಾ ನಿವಾಸಿ ಮನೋಹರ್ ರಾಠೋಡ (35) ಮೃತ ವ್ಯಕ್ತಿ.

ಮದ್ಯ ಸೇವನೆಯ ವ್ಯಸನದಿಂದ ಮುಕ್ತರಾಗಲು ಮನೋಹರ್ ಬುಧವಾರ ನಾಟಿ ವೈದ್ಯನಿಂದ ಔಷಧ ಪಡೆದಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಾಟಿ ಔಷಧ ಪಡೆದಿದ್ದ ಮೂವರು ಬುಧವಾರ ಮೃತಪಟ್ಟಿದ್ದರು. ಮನೋಹರ್ ಅವರೂ ಅಸುನೀಗಿರುವುದರಿಂದ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೇರಿದೆ. ಇಮಡಾಪುರ ಗ್ರಾಮದ ನಾಟಿ ವೈದ್ಯ ಫಕೀರಪ್ಪ ಅಲಿಯಾಸ್ ಸಾಯಪ್ಪ ಎಂಬುವವರನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ.

ಪ್ರವಾಹ: ಮುಳುಗಿದ ಸೇತುವೆ



ವಿಜಯಪುರ: ಜಿಲ್ಲೆಯಲ್ಲಿ ಎರಡು ದಿನಗಳಿಂದ ಸುರಿದ ಧಾರಾಕಾರ ಮಳೆಯಿಂದ ಡೋಣಿ ನದಿ ತೀರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ತಾಳಿಕೋಟೆ ಸಮೀಪ ವಿಜಯಪುರ ಮಾರ್ಗದಲ್ಲಿರುವ ಸೇತುವೆ ಮತ್ತು ದೇವರಹಿಪ್ಪರಗಿ ತಾಲ್ಲೂಕಿನ ಸಾತಿಹಾಳ ಗ್ರಾಮದ ಬಳಿ ಸೇತುವೆಗಳು ಜಲಾವೃತವಾಗಿವೆ. ಈ ಮಾರ್ಗಗಳಲ್ಲಿ ಜನ, ವಾಹನ ಸಂಚಾರ ಸ್ಥಗಿತಗೊಂಡಿದೆ.

ಬಸವನ ಬಾಗೇವಾಡಿ ತಾಲ್ಲೂಕಿನ ಬೊಮ್ಮನಹಳ್ಳಿ, ಯಂಭತ್ನಾಳ, ಮುಲ್ಲಾಳ, ನೇಗಿನಾಳ, ಉಕ್ಕಲಿ, ಡೋಣೂರ, ಮನಗೂಳಿ ಹಾಗೂ ಬಿಸನಾಳ ಗ್ರಾಮಗಳ ವ್ಯಾಪ್ತಿಯಲ್ಲಿ ಜಮೀನುಗಳಿಗೆ ಡೋಣಿ ನದಿ ನೀರು ನುಗ್ಗಿದೆ. ಒಟ್ಟು 300 ಹೆಕ್ಟೇರ್‌ನಲ್ಲಿ ತೊಗರಿ, ಮೆಕ್ಕೆಜೋಳ ಮತ್ತು ಹತ್ತಿ ಬೆಳೆ ಸೇರಿ ವಿವಿಧ ಬೆಳೆಗಳು ಜಲಾವೃತಗೊಂಡಿವೆ.

ಅಬ್ಬರಿಸಿದ ಆಶ್ಲೇಷಾ ಮಳೆ: ಕಲಬುರಗಿ, ಯಾದಗಿರಿ, ಬೀದರ್ ಜಿಲ್ಲೆಗಳ ವಿವಿಧೆಡೆ ಗುರುವಾರ ಆಶ್ಲೇಷಾ ಮಳೆ ಒಂದೂವರೆ ಗಂಟೆ ಅಬ್ಬರಿಸಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಕಲಬುರಗಿಯಲ್ಲಿ ಬೆಳಿಗ್ಗೆ 10ರಿಂದ ಏಕಾಏಕಿ ಆರಂಭಗೊಂಡ ಮಳೆ, 2 ಗಂಟೆ ಬಿರುಸಿನಿಂದ ಸುರಿಯಿತು. ಅಫಜಲಪುರ ತಾಲ್ಲೂಕಿನ ಕಿರಿ ಹಳ್ಳಕ್ಕೆ ಅಪಾರ ಪ್ರಮಾಣದ ನೀರು ಹರಿದು, ಸುಮಾರು 5 ಗಂಟೆ ಮಣ್ಣೂರ– ಕರಜಗಿ– ಅಫಜಲಪುರ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ರಾಯಚೂರು ನಗರ, ಗ್ರಾಮೀಣ, ಸಿರವಾರ, ದೇವದುರ್ಗ ಹಾಗೂ ಹಟ್ಟಿ ಚಿನ್ನದಗಣಿ ಪ್ರದೇಶದಲ್ಲಿ ಸಾಧಾರಣ ಮಳೆಯಾಗಿದೆ.

ಚಿಟಿಕೆ ಸುದ್ದಿ

ಸ್ವಾತಂತ್ರ್ಯೋತ್ಸವ ಕಲಾವಿದೆ ಸರಸ್ವತಿಗೆ ಆಹ್ವಾನ



ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಮನಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಸುವಂತೆಯ ಸರಸ್ವತಿ ಈಶ್ವರ ನಾಯ್ಕ ಅವರಿಗೆ ನವದೆಹಲಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಭವನದಿಂದ ಮಂಗಳವಾರ ಆಮಂತ್ರಣ ಬಂದಿದೆ. ಸಂಜೀವಿನಿ ಯೋಜನೆಯಡಿ ನಡೆಯುವ ಸರಸ್ ಮೇಳಗಳಲ್ಲಿ ಪಾಲ್ಗೊಂಡು ಚಿತ್ತಾರ ಕಲೆಯನ್ನು ಇಡೀ ರಾಷ್ಟ್ರಕ್ಕೆ ಪರಿಚಯಿಸಿದ್ದಕ್ಕೆ ಸರಸ್ವತಿ ಅವರಿಗೆ ಈ ಅವಕಾಶ ಸಿಕ್ಕಿದೆ. ಅಲ್ಲದೆ, ಅವರು ಮನಮನೆ ಸಂಜೀವಿನಿ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ. ಸರಸ್ವತಿ ನಾಯ್ಕ ಅವರ ಪತಿ ಹಸೆ ಚಿತ್ತಾರ ಕಲಾವಿದ ಈಶ್ವರ ನಾಯ್ಕ ಹಸುವಂತೆ ಅವರಿಗೆ 2025ರ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿತ್ತು.

ಕಾಡಾನೆ ದಾಳಿ ರೈತ ಸಾವು

ಮಡಿಕೇರಿ: ತಾಲ್ಲೂಕಿನ ಚೆಂಬು ಗ್ರಾಮದ ದಬ್ಬಡ್ಕದಲ್ಲಿ ಬುಧವಾರ ರಾತ್ರಿ ಕಾಡಾನೆ ದಾಳಿಗೆ ಸಿಲುಕಿ ರೈತ ಕೊಪ್ಪದ ಶಿವಪ್ಪ (72) ಮೃತಪಟ್ಟಿದ್ದಾರೆ.

ರಾತ್ರಿ ಒಂದೇ ಸಮನೆ ನಾಯಿ ಬೊಗಳುತ್ತಿರುವುದನ್ನು ಗಮನಿಸಿ, ಮನೆಯಿಂದ ಹೊರಗೆ ಬಂದಾಗ, ಮನೆ ಸಮೀಪದ ತೋಟದಲ್ಲಿ ಕಾಡಾನೆ ದಿಢೀರ್ ದಾಳಿ ನಡೆಸಿದೆ. ದಾಳಿಗೆ ಸಿಲುಕಿ ತೀವ್ರವಾಗಿ ಗಾಯಗೊಂಡ ಅವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಸಾಗಿಸುವಾಗ ದಾರಿ ಮಧ್ಯೆ ಮೃತಪಟ್ಟರು.

ವರದಿಗೆ ಛಲವಾದಿ ಮಹಾಸಭಾ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅವರ ಅಧ್ಯಕ್ಷತೆಯ ಏಕ ಸದಸ್ಯ ಆಯೋಗ ಸಲ್ಲಿಸಿದ ಒಳಮೀಸಲಾತಿ ವರದಿಯಲ್ಲಿ ಹಲವು ಗೊಂದಲಗಳಿದ್ದು, ತಪ್ಪು ಸರಿಪಡಿಸಲು ಸಂಪುಟ ಉಪಸಮಿತಿ ರಚಿಸಬೇಕು ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಒತ್ತಾಯಿಸಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಹಾಸಭಾದ ಅಧ್ಯಕ್ಷರೂ ಆದ ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯ ಪತ್ರ ಬರೆದಿದ್ದಾರೆ.

'ಬಲಗೈನಲ್ಲಿರುವ 49 ಮೂಲ ಉಪ ಜಾತಿಗಳನ್ನು ಒಂದೇ ಗುಂಪಿನಡಿ ಗುರುತಿಸಿಲ್ಲ. ಕೆಲವರನ್ನು ಶೇ 1ರ ಮೀಸಲಾತಿ ಗುಂಪಿಗೆ ಸೇರಿಸಲಾಗಿದೆ. ಇಂತಹ ಏಕಪಕ್ಷೀಯ, ಪಕ್ಷಪಾತದಿಂದ ಕೂಡಿದ ವರದಿಯನ್ನು ಯಥಾವತ್ ಒಪ್ಪಿಕೊಳ್ಳದೆ ಸಂಪುಟ ಉಪಸಮಿತಿಗೆ ವಹಿಸಬೇಕು. ಬಲಗೈ ಸಮುದಾಯಕ್ಕೆ ಸೇರ್ಪಡೆಗೊಳ್ಳುವ ಜಾತಿಗಳನ್ನು ನಮೂದಿಸಿ ಸರ್ಕಾರಿ ಆದೇಶ ಹೊರಡಿಸಬೇಕು. ಸಂಗ್ರಹಿಸಿದ ದತ್ತಾಂಶಗಳನ್ನು ದೃಢೀಕರಿಸಲು 15 ದಿನಗಳ ಅವಕಾಶ ನೀಡಬೇಕು. ಒಳಮೀಸಲಾತಿ ಮರುಹಂಚಿಕೆ ಮಾಡಬೇಕು. ಶೇ 1ರ ಗುಂಪನ್ನು ಬಲಗೈಗೆ ಸೇರಿಸಬೇಕು' ಎಂದು ಆಗ್ರಹಿಸಿದ್ದಾರೆ.

27.24 ಲಕ್ಷ ಕುಟುಂಬಗಳ 1.07 ಕೋಟಿ ಜನರನ್ನು ಸಮೀಕ್ಷೆ ಮಾಡಿ ಪರಿಶಿಷ್ಟರನ್ನು ಐದು ಗುಂಪುಗಳಾಗಿ ವಿಂಗಡಿಸಲಾಗಿದೆ. ಬಲಗೈ ಸಮುದಾಯಕ್ಕೆ ಸೇರಿದ ಕೆಲ ಜಾತಿಗಳನ್ನು ಎಡಗೈ ಗುಂಪಿಗೆ, ಕೆಲ ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಲಾಗಿದೆ. ಬಹುತೇಕ ಜನ ತಮ್ಮ ಜಾತಿ ಬಹಿರಂಗಪಡಿಸಲು ಹಿಂಜರಿದು ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಬರೆಯಿಸಿದ್ದಾರೆ. ಜಾತಿಯೇ ಅಲ್ಲದ ಅಂತಹ ಸಮೂಹಕ್ಕೆ ಶೇ 1ರಷ್ಟು ಮೀಸಲಾತಿ ನೀಡಲಾಗಿದೆ ಎಂದು ದೂರಿದ್ದಾರೆ.

ಸಮೀಕ್ಷೆಯ ಆರಂಭದಿಂದಲೂ ಸಾಕಷ್ಟು ಗೊಂದಲಗಳಿದ್ದವು. ಗಣತಿದಾರರಿಗೆ ಟ್ಯಾಬ್ ನೀಡದ ಕಾರಣ ಅವರ ಮೊಬೈಲ್‌ಗಳಲ್ಲಿ ಆ್ಯಪ್ ಡೌನ್‌ಲೋಡ್ ಆಗದೆ ಸಮಸ್ಯೆಯಾಗಿತ್ತು. ಪಡಿತರ ಚೀಟಿಯಲ್ಲಿ ಹೆಸರು ಇಲ್ಲದವರನ್ನು ಸಮೀಕ್ಷೆಯಲ್ಲಿ ದಾಖಲಿಸಲಿಲ್ಲ. ನಂತರ ಆಧಾರ್ ಕಾರ್ಡ್ ಬಳಸಲಾಯಿತು. ಇದರಿಂದ 8 ಲಕ್ಷ ಮಕ್ಕಳು ಸಮೀಕ್ಷೆಯಿಂದ ಹೊರಗೆ ಉಳಿದರು. ಗಣತಿದಾರರಿಗೆ ಗುರುತಿನ ಚೀಟಿ ನೀಡಲಿಲ್ಲ. ಅವರ ಹೆಸರಿನಲ್ಲಿ ಬೇರೆಯವರು ಸಮೀಕ್ಷೆ ನಡೆಸಿದ್ದಾರೆ. ಕೆಲವರು ಮನೆಗಳಲ್ಲೇ ಕುಳಿತು ವಿವರ ದಾಖಲಿಸಿಕೊಂಡಿದ್ದಾರೆ. ಆಯೋಗ ಭರವಸೆ ನೀಡಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷಾ ಬೂತ್ ತೆರೆಯಲಿಲ್ಲ. ಬೆಂಗಳೂರಿನಲ್ಲಿ ಮನೆಮನೆಗೆ ಭೇಟಿ ನೀಡದೇ ಇರುವುದರಿಂದ ಇಲ್ಲಿ ಶೇ 48ರಷ್ಟು ಸಮೀಕ್ಷೆಯಷ್ಟೇ ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ಆಗಸ್ಟ್ ಅಂತ್ಯದೊಳಗೆ ಒಳಮೀಸಲಾತಿ ಜಾರಿ: ಆಂಜನೇಯ



ಎಚ್. ಆಂಜನೇಯ

ಬೆಂಗಳೂರು: ಆಗಸ್ಟ್ ತಿಂಗಳ ಅಂತ್ಯದೊಳಗೆ ರಾಜ್ಯ ಸರ್ಕಾರವು ಒಳಮೀಸಲಾತಿ ಜಾರಿಗೆ ತರಲಿದೆ ಎಂದು ಮಾಜಿ ಸಚಿವ, ಕಾಂಗ್ರೆಸ್‌ನ ಎಚ್.ಆಂಜನೇಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ವರ ಅಭಿಪ್ರಾಯ ಪಡೆದು ಒಳಮೀಸಲಾತಿ ಜಾರಿಗೆ ತರುವ ನಿರ್ಧಾರವನ್ನು ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡಿರುವುದು ಸ್ವಾಗತಾರ್ಹ. ಹೀಗಾಗಿ, ಈ ವಿಚಾರದಲ್ಲಿ ಚಾಲ್ತಿಯಲ್ಲಿದ್ದ ಊಹಾಪೋಹಗಳಿಗೆ ಈಗ ತೆರೆಬಿದ್ದಿದೆ' ಎಂದು ಹೇಳಿದ್ದಾರೆ.

'ಆಯೋಗವು 1.07 ಕೋಟಿ ಜನರನ್ನು ಸಮೀಕ್ಷೆ ನಡೆಸಿ, ಮಾಹಿತಿ ಕಲೆಹಾಕಿದೆ. ಜನಸಂಖ್ಯೆ, ಸಾಮಾಜಿಕ–ಶೈಕ್ಷಣಿಕ–ಆರ್ಥಿಕ ಹಿಂದುಳಿದಿರುವಿಕೆಯನ್ನು ವೈಜ್ಞಾನಿಕವಾಗಿ ದಾಖಲಿಸಲಾಗಿದೆ. 60 ದಿನಗಳಲ್ಲಿ ಇದನ್ನು ಸಾಧಿಸಿದೆ. ಇದೊಂದು ಮೈಲುಗಲ್ಲು' ಎಂದಿದ್ದಾರೆ.

'ಆಗಸ್ಟ್ 16ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವರದಿಗೆ ಅಧಿಕೃತ ಒಪ್ಪಿಗೆ ನೀಡಿ, ಅಧಿವೇಶನದಲ್ಲಿ ಮಂಡಿಸಲಾಗುತ್ತದೆ. ನಂತರ ಮಸೂದೆ ಪಾಸು ಮಾಡಿ, ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುತ್ತದೆ. ಇವೆಲ್ಲವೂ ಆಗಸ್ಟ್ ತಿಂಗಳಲ್ಲೇ ನಡೆಯುತ್ತದೆ' ಎಂದಿದ್ದಾರೆ.

'ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕ್ರಮ'



ಕೆ.ಎಚ್. ಮುನಿಯಪ್ಪ

'ನಾಗಮೋಹನ ದಾಸ್ ನೇತೃತ್ವದ ವಿಚಾರಣಾ ಆಯೋಗ ಸಮಗ್ರ ಸಮೀಕ್ಷೆ ನಡೆಸಿ, ವರದಿ ಸಲ್ಲಿಸಿದೆ. ಈ ಸಂಬಂಧ ಆ.16 ಶನಿವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಲಿದೆ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದಿನ ಸಭೆಯಲ್ಲಿ ವರದಿಯ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಆನಂತರ ಅಗತ್ಯ ಕ್ರಮ ತೆಗೆದುಕೊಳ್ಳಲಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಶಾಲೆಯಲ್ಲಿ ಹೊಡೆದಾಟ: ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ



ಅಂಶ್

ವಿಜಯಪುರ: ಇಲ್ಲಿನ ಯೋಗಾಪುರ ಕಾಲೊನಿಯ ಶ್ರೀ ಸತ್ಯಸಾಯಿ ಬಾಬಾ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ನಡುವೆ ನಡೆದ ಹೊಡೆದಾಟದಲ್ಲಿ ಗಾಯಗೊಂಡ ಐದನೇ ತರಗತಿ ವಿದ್ಯಾರ್ಥಿ ಅಂಶ್ (9) ಮೃತಪಟ್ಟಿದ್ದಾನೆ. ಆತನ ಶವವನ್ನು ಶಾಲೆಯ ಆವರಣದಲ್ಲಿಟ್ಟು, ಪೋಷಕರು ಪ್ರತಿಭಟನೆ ನಡೆಸಿದರು.

ಉತ್ತರಪ್ರದೇಶ ರಾಜ್ಯದ ಜಾಲೂನ್ ಜಿಲ್ಲೆಯ ಕಕ್ರೋಲಿ ಗ್ರಾಮದ ಸುನೀಲ್ ಜಾಟಪ್ ಮತ್ತು ಶ್ರುತಿ ದಂಪತಿಯು ಪುತ್ರ ಅಂಶ್ ಜೊತೆ, ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಾಲ್ಕು ವರ್ಷಗಳಿಂದ ತಳ್ಳುವ ಗಾಡಿಯಲ್ಲಿ ಪಾನಿಪುರಿ ವ್ಯಾಪಾರ ಮಾಡುತ್ತ ಜೀವನ ಸಾಗಿಸುತ್ತಿದ್ದರು.

'ಆಗಸ್ಟ್ 4ರಂದು ಅಂಶ್ ಮತ್ತು ಶಾಲೆಯ ಇತರೆ ವಿದ್ಯಾರ್ಥಿಗಳ ನಡುವೆ ಹೊಡೆದಾಟವಾಗಿದೆ. ಘಟನೆಯಲ್ಲಿ ಗಾಯಗೊಂಡ ಅಂಶ್‌ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಮನೆಗೆ ಕರೆತಂದಿದ್ದೆವು. ಬುಧವಾರ ರಾತ್ರಿ ಏಕಾಏಕಿ ಉಸಿರಾಟದಲ್ಲಿ ತೊಂದರೆಯಾಗಿ ಮೃತಪಟ್ಟ. ಆತನ ಸಾವಿನ ಬಗ್ಗೆ ಅನುಮಾನ ಇದೆ. ಅಂಶ್‌ಗೆ ಈ ಮೊದಲು ಅನಾರೋಗ್ಯ ಸಮಸ್ಯೆಯೂ ಇತ್ತು' ಎಂದು ಬಾಲಕನ ತಂದೆ ಸುನೀಲ್ ಪೊಲೀಸರಿಗೆ ದೂರು ನೀಡಿದ್ದಾರೆ.

'ಬಾಲಕನ ಸಾವಿನ ಬಗ್ಗೆ ಅನುಮಾನಗಳು ಇವೆ. ಅದಕ್ಕೆ ಈವರೆಗೆ ಯಾರ ವಿರುದ್ಧವೂ ಕ್ರಮಕೈಗೊಂಡಿಲ್ಲ, ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಸಾವಿಗೆ ಖಚಿತ ಕಾರಣ ಗೊತ್ತಾಗಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ 'ಪ್ರಜಾವಾಣಿ'ಗೆ ತಿಳಿಸಿದರು.

ಫಲಪುಷ್ಪ ಪ್ರದರ್ಶನ

ಪ್ರಜಾವಾಣಿ ಚಿತ್ರ: ರಂಜು ಪಿ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 218ನೇ ಫಲಪುಷ್ಪ ಪ್ರದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ರಾಮಲಿಂಗಾರೆಡ್ಡಿ, ಎಂ.ಸಿ. ಸುಧಾಕರ್, ತೋಟಗಾರಿಕೆ ಇಲಾಖೆಯ ನಿರ್ದೇಶಕ ರಮೇಶ್ ಡಿ.ಎಸ್. ಉಪಸ್ಥಿತರಿದ್ದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.15	12,904	6,320
ಹಾರಂಗಿ	2,859	2,856.10	2,020	2,583
ಕಬಿನಿ	2,284.00	2,281.95	10,296	11,183
ಹೇಮಾವತಿ	2,922	2,922	7,953	7,000
ಲಿಂಗನಮಕ್ಕಿ	1,819	1,811.85	8,076	6,739
ಸೂಪಾ (ಮೀ)	564	551.59	4,142.10	2,531.67
ಮಾಣಿ	595	590.76	1,100	709
ತುಂಗಭದ್ರಾ	1,633	1,626.06	24,033	23,623
ಮಲಪ್ರಭಾ	2,079.5	2,075.70	3,763	194
ಘಟಪ್ರಭಾ	2175	2,172.10	5,185	2,835
ಭದ್ರಾ *	186	182.10	12,174	5,113
ಆಲಮಟ್ಟಿ (ಮೀ)	519.6	519.32	31,532	8,095
ನಾರಾಯಣಪುರ (ಮೀ)	492.25	492.22	9,000	7,500

* ನೆಲಮಟ್ಟದಿಂದ

ಒಳಮೀಸಲು: ಬಲಗೈ ಸಚಿವರ ವಿರೋಧ?

ಒಂದನೇ ಪುಟದಿಂದ...

'ವರದಿ ಜಾರಿಗೊಂಡರೆ ಬಲಗೈ ಸಮುದಾಯದ ಜಾತಿಗಳಿಗೆ ಅನ್ಯಾಯವಾಗುತ್ತದೆ. ಯಾವುದೇ ಕಾರಣಕ್ಕೂ ವರದಿ ಜಾರಿಗೆ ಅವಕಾಶ ಕೊಡುವುದಿಲ್ಲ' ಎಂದು ಸಚಿವರು ಏರಿದ ಧ್ವನಿಯಲ್ಲಿ ಪ್ರತಿಪಾದಿಸಿದ್ದಾಗಿ ಗೊತ್ತಾಗಿದೆ.

'ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಜಾತಿಯನ್ನು ಪ್ರತ್ಯೇಕ ವರ್ಗೀಕರಣ ಮಾಡಿ ಶೇ 1ರಷ್ಟು ಮೀಸಲಾತಿ ನಿಗದಿ ಮಾಡಲಾಗಿದೆ. ಇದರಿಂದಾಗಿ 100 ಜನರಿಗೆ ಆದ ಮೇಲೆ ನಮಗೆ ಅವಕಾಶ ಸಿಗುತ್ತದೆ. ಈ ಜಾತಿಗಳಿಗೆ ಅನ್ಯಾಯವಾಗುತ್ತದೆ' ಎಂದು ಜಿ.ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

'ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿ ಮಾಡಬೇಕು. ನಮ್ಮ ಸಮುದಾಯದ ಸಂಖ್ಯೆ ಹೆಚ್ಚಿದೆ. ಇದನ್ನು ವರದಿಯಲ್ಲಿ ಕಡೆಗಣಿಸಲಾಗಿದೆ. ಇದರಿಂದ ಅನ್ಯಾಯವಾಗಿದೆ' ಎಂದು ಮಹದೇವಪ್ಪ ಅವರು ಗುಡುಗಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಎಡಗೈ ಸಮುದಾಯದ ಪ್ರತಿನಿಧಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, 'ಇಷ್ಟು ವರ್ಷ ಸ್ಪೃಶ್ಯ ಸಮಾಜದವರೇ ಮೀಸಲಾತಿಯ ಹೆಚ್ಚಿನ ಪ್ರಯೋಜನ ಪಡೆದುಕೊಂಡು ಬಂದಿದ್ದಾರೆ. ಅಸ್ಪೃಶ್ಯ ಜಾತಿಗಳಿಗೆ ನಿರಂತರವಾಗಿ ಅನ್ಯಾಯವಾಗುತ್ತಾ ಬಂದಿದೆ. ಈಗಲೂ ನಮಗೆ ನ್ಯಾಯ ಸಿಗದಿದ್ದರೆ, ನಾವು ಏನು ಮಾಡಬೇಕು ಎಂದು ಪ್ರಶ್ನಿಸಿದರು' ಎಂದು ಮೂಲಗಳು ಹೇಳಿವೆ. ಬಲಗೈ ಸಮುದಾಯದ ಸಚಿವರ ಅಬ್ಬರದ ಮುಂದೆ ಮುನಿಯಪ್ಪ ತಾವು ಹೇಳಬೇಕಾಗಿದ್ದನ್ನು ಪೂರ್ಣವಾಗಿ ಹೇಳಲು ಸಾಧ್ಯವಾಗಲಿಲ್ಲ ಎಂದೂ ಗೊತ್ತಾಗಿದೆ.

'ಬಲಗೈ ಸಮುದಾಯ ಇಲ್ಲಿಯವರೆಗೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದಿದೆ. ಕಳೆದ ಚುನಾವಣೆಯಲ್ಲಿ ಈ ಸಮುದಾಯ ಗಟ್ಟಿಯಾಗಿ ನಮ್ಮ ಜತೆ ನಿಂತ ಕಾರಣ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡು ಬರಲು ಸಾಧ್ಯವಾಗಿದೆ. ಈ ಸಮುದಾಯದ ಹಕ್ಕು ಕಿತ್ತುಕೊಳ್ಳಬಾರದು. ಹೀಗಾಗಿ ವರದಿಗೆ ಒಪ್ಪಿಗೆ ನೀಡಬಾರದು' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಸಮೀಕ್ಷೆಗೆ ಹೊಸ ತಂತ್ರಾಂಶ, ಹಳೆಯ ಮತದಾರರ ಪಟ್ಟಿ

ಈ ಬಾರಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಡಿಜಿಟಲ್ ಮಾದರಿಯಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಇದಕ್ಕಾಗಿ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಇ– ಆಡಳಿತ ಇಲಾಖೆಯ ಮೂಲಕವೇ ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುವುದು. ಸಮೀಕ್ಷೆಯಲ್ಲಿ ನಮೂದಿಸಲಾಗುವ 6 ವರ್ಷ ಮೇಲ್ಪಟ್ಟ ಪ್ರತಿ ವ್ಯಕ್ತಿಯ ಆಧಾರ್ ದೃಢೀಕರಣ ಕಡ್ಡಾಯಗೊಳಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ನಾಗಮೋಹನ್‌ದಾಸ್ ನೇತೃತ್ವದಲ್ಲಿ ಒಳಮೀಸಲಾತಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಸಮೀಕ್ಷೆಗೆ ಸಾರ್ವಜನಿಕವಾಗಿ ಲಭ್ಯವಿರುವ ಚುನಾವಣಾ ಮತದಾರರ ಪಟ್ಟಿ ಉಪಯೋಗಿಸಿದ್ದಾರೆ. ಅದೇ ರೀತಿಯಾಗಿ ಹಿಂದುಳಿದವರ ವರ್ಗಗಳ ಆಯೋಗವು ನಡೆಸುವ ಸಮೀಕ್ಷೆಗೂ ಸಾರ್ವಜನಿಕವಾಗಿ ಲಭ್ಯವಿರುವ (ಲೋಕಸಭಾ ಚುನಾವಣೆಗೆ ಬಳಸಿದ) ಚುನಾವಣಾ ಮತದಾರರ ಪಟ್ಟಿಯನ್ನೇ ಉಪಯೋಗಿಸಿಕೊಂಡು ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುವುದು ಎಂದರು.

'ಲೋಕಸಭಾ ಚುನಾವಣಾ ಮತದಾರರ ಪಟ್ಟಿ ಬಗ್ಗೆ ರಾಹುಲ್‌ಗಾಂಧಿ ಆಕ್ಷೇಪ ವ್ಯಕ್ತಪಡಿಸಿ ಪ್ರತಿಭಟನೆ ನಡೆಸುತ್ತಿರುವಾಗ, ಅದೇ ಪಟ್ಟಿಯನ್ನು ಸಮೀಕ್ಷೆಗೆ ಬಳಸುತ್ತಿರುವುದು ಸರಿಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಮತದಾರರ ಪಟ್ಟಿ ಬಗ್ಗೆ ಅನುಮಾನ ಬಂದರೆ ಪರಿಶೀಲನೆಗೆ ಒಳಪಡಿಸಲಾಗುವುದು' ಎಂದರು.

ಲಕ್ಷ ಮತಕಳವು: ರಾಹುಲ್

ಒಂದನೇ ಪುಟದಿಂದ....

ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷವು 16 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಆಂತರಿಕ ಸಮೀಕ್ಷೆಗಳಲ್ಲಿ ಗೊತ್ತಾಗಿತ್ತು. ಆದರೆ, ಪಕ್ಷವು ಗೆದ್ದಿದ್ದು 9 ಕ್ಷೇತ್ರಗಳನ್ನು. ಅನಿರೀಕ್ಷಿತವಾಗಿ ಏಳು ಕ್ಷೇತ್ರಗಳನ್ನು ಕಳೆದುಕೊಂಡ ಬಳಿಕ ಒಂದು ಕ್ಷೇತ್ರದ ಬಗ್ಗೆ ಆರು ತಿಂಗಳು ಅಧ್ಯಯನ ನಡೆಸಿದೆವು. ನಿರ್ದಿಷ್ಟವಾಗಿ ಮಹದೇವಪುರ ಕ್ಷೇತ್ರದ ಕುರಿತು ವಿಶ್ಲೇಷಣೆ ನಡೆಸಲಾಯಿತು ಎಂದರು.

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್ ಕ್ಷೇತ್ರದಲ್ಲಿ ಮಹದೇವಪುರ ಹೊರತುಪಡಿಸಿ ಉಳಿದ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿತ್ತು. ಆದರೆ, ಮಹದೇವಪುರದಲ್ಲೇ ಬಿಜೆಪಿಗೆ 1,14,046 ಮತಗಳ ಮುನ್ನಡೆ ಸಿಕ್ಕಿತ್ತು. ಅಧ್ಯಯನ ನಡೆಸಿದಾಗ 1,00,250 ಮತದಾರರು ನಕಲಿ ಎಂಬುದು ಗೊತ್ತಾಯಿತು. ಹೀಗಾಗಿ, ಈ ಕ್ಷೇತ್ರದಲ್ಲಿ ಬಿಜೆಪಿ ಗೆದ್ದಿತು ಎಂದರು.

'ನಾವು ತುಂಬಾ ಪ್ರೀತಿಸುವ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ ಅವರು, 'ಕಾಂಗ್ರೆಸ್ ಪಕ್ಷವು ವೋಟ್ ಚೋರಿ (ಮತಕಳ್ಳತನ) ಕುರಿತು ಪ್ರಬಲ ಮತ್ತು ಕ್ರಿಮಿನಲ್ ಸಾಕ್ಷ್ಯಗಳನ್ನು ಕಲೆ ಹಾಕಿದೆ. ಆದರೆ, ಚುನಾವಣಾ ಆಯೋಗವು ಅದನ್ನು ನಾಶಪಡಿಸುವಲ್ಲಿ ವ್ಯಸ್ತವಾಗಿದೆ. ಈಗ ನ್ಯಾಯಾಂಗ ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಬೇಕು' ಎಂದರು.

ತಮ್ಮ ಹೇಳಿಕೆ ಕುರಿತು ಸಹಿ ಹಾಕಿದ ದಾಖಲೆಗಳನ್ನು ಚುನಾವಣಾ ಆಯೋಗ ಕೇಳಿರುವ ಬೆನ್ನಲ್ಲೇ ರಾಹುಲ್, 'ನಾನು ಒಬ್ಬ ರಾಜಕಾರಣಿ. ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದೇನೆ. ಅದನ್ನು ತನ್ನ ಪ್ರತಿಜ್ಞೆ ಎಂದು ಪರಿಗಣಿಸಬಹುದು. ಆಸಕ್ತಿಕರ ವಿಷಯವೆಂದರೆ, ನಾನು ಪ್ರಸ್ತಾಪಿಸಿದ ವಿಷಯವನ್ನು ಆಯೋಗ ನಿರಾಕರಿಸಿಲ್ಲ. ನಾನು ತೋರಿಸಿದ ಮತಪಟ್ಟಿಗಳನ್ನು ತಪ್ಪು ಎಂದು ಹೇಳಿಲ್ಲ. ಅವರು ಹೇಳುತ್ತಿರುವುದೇನೆಂದರೆ ರಾಹುಲ್ ಅದನ್ನು ಸಾಕ್ಷ್ಯದೊಂದಿಗೆ ಹೇಳಬೇಕು ಎಂಬುದು. ಅವರಿಗೆ ಸತ್ಯ ಗೊತ್ತಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ' ಎಂದರು.

ರಾಹುಲ್ ನೀಡಿದ ಉದಾಹರಣೆಗಳು

ಒಂದನೇ ಪುಟದಿಂದ...

- ಮೊದಲ ಬಾರಿಗೆ ಮತದಾರರಾಗಿ ನೋಂದಣಿಯಾದಾಗ ಬಳಕೆಯಾಗುವ ನಮೂನೆ 6 ದುರುಪಯೋಗದ ಕುರಿತು ಪ್ರಶ್ನೆಗಳನ್ನು ಎತ್ತಿದ ಅವರು, ಅದನ್ನು ವ್ಯಾಪಕ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗಿದೆ. 95, 90, 85 ವರ್ಷದವರೂ ಈ ಪಟ್ಟಿಯಲ್ಲಿ ಸೇರಿದ್ದಾರೆ. 70 ವರ್ಷದ ಶಕುಲ್ ರಾಣಿ ಎಂಬ ಹೆಸರಿನ ಮಹಿಳೆಯು ಎರಡು ತಿಂಗಳುಗಳಲ್ಲಿ ಎರಡು ಬಾರಿ ನೋಂದಣಿಯಾಗಿದ್ದು, ಈ ಮಹಿಳೆ ಅಥವಾ ಆಕೆಯ ಹೆಸರಿನ ಇನ್ಯಾರೋ ಎರಡು ಬಾರಿ ಮತ ಚಲಾಯಿಸುತ್ತಿದ್ದಾರೆ.
- ಬೂತ್ ಸಂಖ್ಯೆ 470ರ ಏಕ ಕೋಣೆಯ ಸಣ್ಣ ಮನೆಯಲ್ಲಿ 80 ಮತದಾರರು ಇದ್ದರು. ಬೂತ್ ಸಂಖ್ಯೆ 791ರಲ್ಲಿ ಇಂತಹುದೇ ಮನೆಯಲ್ಲಿ 46 ಮತದಾರರು ಇದ್ದರು. ಒಂದು ಕಡೆಯಲ್ಲಿ 68 ಮತದಾರರು ಇದ್ದರು. ಈ ಬಗ್ಗೆ ಪರಿಶೀಲನೆಗೆ ನಮ್ಮ ತಂಡವು ಹೋದಾಗ ಅಲ್ಲಿದ್ದವರು ದಾಳಿ ಮಾಡಲು ಯತ್ನಿಸಿದರು.
- 40,009 ಮತದಾರರ ಪೈಕಿ ಅನೇಕರು ಸೊನ್ನೆ (0)ಯಂತಹ ವಿಳಾಸಗಳನ್ನು ಹೊಂದಿದ್ದಾರೆ. ಅದು 'ಅಸ್ತಿತ್ವದಲ್ಲಿಲ್ಲ ಅಥವಾ ಪರಿಶೀಲಿಸಬಹುದು' ಎಂದು ತೋರಿಸಿದೆ.

'ಮೇಲ್ಮನವಿ ಸಲ್ಲಿಕೆಯಾಗಿಲ್ಲ'

2024ರ ವಿಧಾನಸಭಾ ಚುನಾವಣೆಗೆ ಮೊದಲು ಪ್ರಕಟಿಸಿದ ಮತದಾರರ ಪಟ್ಟಿಗಳ ವಿರುದ್ಧ ಕಾಂಗ್ರೆಸ್ ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ. 2024ರ ಆಗಸ್ಟ್‌ನಲ್ಲಿ ಮತದಾರರ ಕರಡು ಪಟ್ಟಿ ಮತ್ತು ಸೆಪ್ಟೆಂಬರ್‌ನಲ್ಲಿ ಅಂತಿಮ ಪಟ್ಟಿಯನ್ನು ಕಾಂಗ್ರೆಸ್ ಜೊತೆ ಹಂಚಿಕೊಳ್ಳಲಾಗಿತ್ತು. ಆದರೆ ಯಾವುದೇ ಮೇಲ್ಮನವಿ ಸಲ್ಲಿಕೆಯಾಗಿಲ್ಲ ಎಂದು ಮಹಾರಾಷ್ಟ್ರದ ಮುಖ್ಯ ಚುನಾವಣಾ ಅಧಿಕಾರಿ ಎಸ್. ಚೊಕ್ಕಲಿಂಗಂ ತಿಳಿಸಿದ್ದಾರೆ.

ಘೋಷಣೆಗೆ ಸಹಿ ಹಾಕಿ: ರಾಹುಲ್‌ಗೆ ಅನ್ಬುಕುಮಾರ್ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ ಕಳವು ಆರೋಪ ಮಾಡಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಘೋಷಣೆ ಮತ್ತು ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಕೋರಿದ್ದಾರೆ.

> ಚುನಾವಣಾ ಆಯೋಗದ ದುರುಪಯೋಗ, ಅಧಿಕಾರ ದುರ್ಬಳಕೆ ಮೂಲಕ ಪ್ರಧಾನಿಯಾಗಿರುವ ಮೋದಿ ಅವರಿಗೆ ತಮ್ಮ ಹುದ್ದೆಯಲ್ಲಿ ಮುಂದುವರೆಯುವ ನೈತಿಕತೆ ಇಲ್ಲ.
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಲೋಕಸಭಾ ಚುನಾವಣೆ–2024ರ ವೇಳೆ ಬೆಂಗಳೂರಿನ ಮತಕ್ಷೇತ್ರದಲ್ಲಿ ಮತ ಕಳವು ನಡೆದಿರುವುದಕ್ಕೆ ನಿರ್ದಿಷ್ಟ ಪುರಾವೆಗಳಿವೆ ಎಂಬ ರಾಹುಲ್ ಆರೋಪಕ್ಕೆ ನೀಡಿದ ಪ್ರತಿಕ್ರಿಯೆಯ ಪತ್ರವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅವರು, ರಾಹುಲ್ ಮಾಡಿರುವ ಮತ ಕಳವು ಆರೋಪದ ಹೇಳಿಕೆ ಸುಳ್ಳು ಎಂದು ಕಂಡುಬಂದರೆ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ ಎಂದಿದ್ದಾರೆ.

ಮತದಾರರ ನೋಂದಣಿ ನಿಯಮಗಳ ಅಡಿಯಲ್ಲಿ ಘೋಷಣೆ, ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕುವಂತೆ ಕಾಂಗ್ರೆಸ್ ನಾಯಕರನ್ನು ಕೇಳಲಾಗಿದೆ. ಲೋಪ ಇರುವ ಮತದಾರರ ಹೆಸರನ್ನು ಸರಣಿ ಸಂಖ್ಯೆಗಳೊಂದಿಗೆ ನಿರ್ದಿಷ್ಟಪಡಿಸಲು ಅವರನ್ನು ಕೇಳಲಾಗಿದೆ. ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸುಳ್ಳು ಘೋಷಣೆ ಮಾಡುವುದು ಜನತಾ ಪ್ರಾತಿನಿಧ್ಯ ಕಾಯ್ದೆ, ಭಾರತೀಯ ನ್ಯಾಯ ಸಂಹಿತೆಯ ಪ್ರಕಾರ ಶಿಕ್ಷಾರ್ಹ ಅಪರಾಧ ಎನ್ನುವುದನ್ನು ರಾಹುಲ್ ಗಾಂಧಿ ಅವರು ಒಪ್ಪಿಕೊಳ್ಳುವ ನಿರೀಕ್ಷೆಯಿದೆ ಎಂದಿದ್ದಾರೆ.

'ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಿಯಮಗಳ ಪ್ರಕಾರ ಪಾರದರ್ಶಕವಾಗಿ ನಡೆಯುತ್ತಿದೆ. ಈಗಾಗಲೇ 2024 ನವೆಂಬರ್‌ನ ಮತದಾರರ ಕರಡು ಪಟ್ಟಿ, 2025ನೇ ಜನವರಿಯಲ್ಲಿನ ಮತದಾರರ ಅಂತಿಮ ಪಟ್ಟಿಯನ್ನು ಕಾಂಗ್ರೆಸ್ ಪಕ್ಷದ ಜತೆಗೆ ಹಂಚಿಕೊಳ್ಳಲಾಗಿದೆ. ಈ ಕುರಿತು ಕಾಂಗ್ರೆಸ್ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ಹತಾಶೆಯಿಂದ ರಾಹುಲ್ ಹೇಳಿಕೆ: ಬಿಜೆಪಿ

ಒಂದನೇ ಪುಟದಿಂದ...

ಮಾನನಷ್ಟ ಪ್ರಕರಣಗಳಲ್ಲಿ ಜಾಮೀನು ಪಡೆಯಲು ರಾಹುಲ್ ಅವರು ದೇಶದಾದ್ಯಂತ ಅಲೆದಾಡುತ್ತಲೇ ಇದ್ದಾರೆ. ಅಂತಹ ವ್ಯಕ್ತಿಯೇ ಯಾರನ್ನಾದರೂ ವಂಚಕ ಎಂದು ಕರೆಯುತ್ತಾರೆ. ಬೇಜವಾಬ್ದಾರಿಯ ವ್ಯಕ್ತಿ ಆಗಿರುವ ಅವರಿಗೆ ಸಾಂವಿಧಾನಿಕ ಸಂಸ್ಥೆಯ ಬಗ್ಗೆ ಏನು ಮಾತನಾಡಬೇಕೆಂದು ತಿಳಿದಿಲ್ಲ ಎಂದರು.

ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗದ ಮೇಲೆ ಆರೋಪ ಹೊರಿಸುವ ಮೊದಲು ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಯಾವ ರೀತಿಯಲ್ಲಿ ಗೆದ್ದಿತು ಎಂಬುದಕ್ಕೆ ರಾಹುಲ್ ಗಾಂಧಿ ಉತ್ತರಿಸಲಿ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಸವಾಲು ಹಾಕಿದರು.

ಸರ್ವಜ್ಞನಗರದಲ್ಲೂ ಪರಿಶೀಲನೆ ಮಾಡಲಿ: ಮೋಹನ್

ಒಂದನೇ ಪುಟದಿಂದ...

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, '2009ರಿಂದ ಮತ ಪ್ರಮಾಣ ನಿರಂತರವಾಗಿ ಏರಿಕೆಯಾಗುತ್ತಿದೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ರಾಜ್ಯ ಸರ್ಕಾರದ ಅಧಿಕಾರಿಗಳ ಸಹಯೋಗದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲಾಗುತ್ತದೆ. ಮತ ಕಳವು ಮಾಡಿದ್ದರಿಂದಲೇ ಕಾಂಗ್ರೆಸ್ ಒಂಬತ್ತು ಕ್ಷೇತ್ರಗಳನ್ನು ಗೆದ್ದಿತ್ತು' ಎಂದು ಆರೋಪಿಸಿದರು.

'ಐದು ಗಂಟೆಯ ಬಳಿಕ ಮತ ಪ್ರಮಾಣ ಹೆಚ್ಚಾಗುವುದು ಏಕೆ ಎಂಬುದು ನನಗೆ ಗೊತ್ತಿಲ್ಲ. ಈ ಬಗ್ಗೆ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಕೇಳಲಿ. ಚುನಾವಣಾ ಆಯೋಗದವರು ಕೊಡದಿದ್ದರೆ ನಾನೇನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

ಧರ್ಮಸ್ಥಳ ಘರ್ಷಣೆ: 7 ಪ್ರಕರಣ ದಾಖಲು

ಎಲ್ಲೆಡೆಯೂ ಪೊಲೀಸ್ ಪಹರೆ
ಗುರುವಾರ ನಡೆಯದ ಎಸ್‌ಐಟಿ ಶೋಧ

ಪ್ರಜಾವಾಣಿ ವಾರ್ತೆ

ಮಂಗಳೂರು: ಗುಂಪು ಘರ್ಷಣೆ ನಡೆದಿದ್ದ ಧರ್ಮಸ್ಥಳ ಗ್ರಾಮದ ಪರಿಸ್ಥಿತಿ ಗುರುವಾರ ಸಹಜ ಸ್ಥಿತಿಗೆ ಮರಳಿದೆ. ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಹಾಗೂ ಉಜಿರೆಯಲ್ಲಿ ಬುಧವಾರ ನಡೆದಿದ್ದ ಅಹಿತಕರ ಘಟನೆಗಳಿಗೆ ಸಂಬಂಧಿಸಿದಂತೆ ಏಳು ಪ್ರಕರಣಗಳು ದಾಖಲಾಗಿವೆ.

ಪಾಂಗಾಳ ರಸ್ತೆ ಬಳಿ ಯೂಟ್ಯೂಬರ್‌ಗಳ ಮೇಲೆ ಹಲ್ಲೆ ನಡೆಸಿದ ಪ್ರಕರಣದ ಆರೋಪಿ ಧರ್ಮಸ್ಥಳ ಗ್ರಾಮದ ನಿವಾಸಿ ಸೋಮನಾಥ ಸಫಲ್ಯ (50) ಎಂಬವರನ್ನು ಪೊಲೀಸರು ಬಂಧಿಸಿದ್ದು, ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

> **ಧರ್ಮಸ್ಥಳದಲ್ಲಿ ಪತ್ರಕರ್ತರ ಮೇಲಿನ ಹಲ್ಲೆ ಅಕ್ಷಮ್ಯ ಅಪರಾಧ. ಕ್ಷೇತ್ರದ ವಿರುದ್ಧ ಅಪಪ್ರಚಾರ ನಡೆಸುತ್ತಿರುವವರ ವಿರುದ್ಧ ಗೃಹ ಸಚಿವರು ಕ್ರಮ ಕೈಗೊಳ್ಳಬೇಕು**
> **ಬಿ.ವೈ. ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಪೊಲೀಸರು ಇನ್ನಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪಾಂಗಾಳ ರಸ್ತೆ ಹಾಗೂ ಉಜಿರೆಯ ಬೆನಕ ಆಸ್ಪತ್ರೆ ಬಳಿ ನಡೆದ ಘಟನೆಗಳಿಗೆ ಸಂಬಂಧಿಸಿದಂತೆ ನಾಲ್ಕು ಪ್ರಕರಣ ದಾಖಲಾಗಿದ್ದರೆ, ಎರಡೂ ಕಡೆ ಗುಂಪು ಸೇರಿದ್ದವರು ಹಾಗೂ ಧರ್ಮಸ್ಥಳ ಠಾಣೆ ಎದುರು ಧರಣಿ ನಡೆಸಿದವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತವಾಗಿ ಒಟ್ಟು 3 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಡೆಯದ ಶೋಧ ಕಾರ್ಯ: ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳ (ಎಸ್‌ಐಟಿ) ಗುರುವಾರ ಶೋಧ ಕಾರ್ಯ ನಡೆಸಲಿಲ್ಲ.



ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಬಳಿ ಗುರುವಾರ ಪೊಲೀಸ್ ಕಾವಲು ಒದಗಿಸಲಾಗಿತ್ತು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಪ್ರಚೋದನಕಾರಿ ಹೇಳಿಕೆ: 3 ಪ್ರಕರಣ

ಮಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇರೆಗೆ ಗಿರೀಶ್ ಮಟ್ಟಣ್ಣನವರ್, ಮಹೇಶ್ ತಿಮರೋಡಿ ಹಾಗೂ ಪುನೀತ್ ಕೆರೆಹಳ್ಳಿ ಅವರ ವಿರುದ್ಧ ಪ್ರತ್ಯೇಕ ದೂರುಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಐಟಿಗೆ ಅರ್ಜಿ: ಸಾಕ್ಷಿ ದೂರುದಾರನ್ನು ಎಸ್‌ಐಟಿ ತನ್ನ ಸುಪರ್ದಿಯಲ್ಲೇ ಇಟ್ಟುಕೊಂಡು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ ಪೆರ್ಮಾಣುವಿನ ಶ್ಯಾಮಸುಂದರ ಎಂಬುವರು ಎಸ್‌ಐಟಿಗೆ ಅರ್ಜಿ ಸಲ್ಲಿಸಿದ್ದಾರೆ.

ಹೊಸ ಜಾಗ ತೋರಿಸಲಿದ್ದಾರೆಯೇ ಸಾಕ್ಷಿ ದೂರುದಾರ?: ಸಾಕ್ಷಿ ದೂರುದಾರ ಈಗಿನ15 ಜಾಗಗಳಲ್ಲದೇ ಇನ್ನಷ್ಟು ಜಾಗಗಳನ್ನು ತೋರಿಸಲು ಮುಂದಾಗಿದ್ದಾರೆ. ಆ ಜಾಗದಲ್ಲಿ ಶೋಧ ಮುಂದುವರಿಯುವ ಸಾಧ್ಯತೆ ಇದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರ ತೋರಿಸಿರುವ ಜಾಗಗಳ ಪೈಕಿ ನೇತ್ರಾವತಿ ಸ್ನಾನಘಟ್ಟದ ಸಮೀಪದ 13ನೇ ಜಾಗದಲ್ಲಿ ಇನ್ನೂ ನೆಲವನ್ನು ಅಗೆದಿಲ್ಲ. ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಜಿಲ್ಲೆಯಲ್ಲೇ ಮೊಕ್ಕಾಂ ಹೂಡಿದ್ದಾರೆ.

ಮೇಲ್ಮನವಿ ಇಂದು ವಿಚಾರಣೆ

ನವದೆಹಲಿ: 'ಕೊಲೆಯಾದ ನೂರಾರು ಶವಗಳನ್ನು ಧರ್ಮಸ್ಥಳ ಗ್ರಾಮದ ವ್ಯಾಪ್ತಿಯಲ್ಲಿ ಹೂಳಲಾಗಿದೆ' ಎಂಬ ಆರೋಪ ಕುರಿತ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ಮಾಡದಂತೆ ಮಾಧ್ಯಮಗಳಿಗೆ ಹೇರಿದ್ದ ನಿರ್ಬಂಧ ತೆರವುಗೊಳಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಿಚಾರಣೆ ನಡೆಸಲಿದೆ.

'ಕ್ಷೇತ್ರದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ತಮ್ಮ ಡಿ.ಹರ್ಷೇಂದ್ರ ಕುಮಾರ್ ವಿರುದ್ಧ ಯಾವುದೇ ಮಾನಹಾನಿ ವಿಷಯ ಪ್ರಸಾರ ಅಥವಾ ಪ್ರಕಟ ಮಾಡಬಾರದು' ಎಂದು ಮಾಧ್ಯಮಗಳನ್ನು ನಿರ್ಬಂಧಿಸಿ, ಸಿಟಿ ಸಿವಿಲ್ ಕೋರ್ಟ್ ಹೆಚ್ಚುವರಿ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಹೈಕೋರ್ಟ್ ರದ್ದುಗೊಳಿಸಿತ್ತು. ಧರ್ಮಸ್ಥಳ ದೇವಾಲಯ ಸಂಸ್ಥೆಯ ಕಾರ್ಯದರ್ಶಿ ಹರ್ಷೇಂದ್ರ ಕುಮಾರ್ ಅವರು ಹೈಕೋರ್ಟ್ ಆದೇಶ ಪ್ರಶ್ನಿಸಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ. ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿಯನ್ನು ತುರ್ತು ಪಟ್ಟಿಗೆ ಸೇರಿಸುವಂತೆ ವಕೀಲರು ಕೋರಿದರು.

ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮಾ ಮತ್ತು ಕೆ.ವಿನೋದ್ ಚಂದ್ರನ್ ಅವರ ಪೀಠವು ಈ ವಿಷಯವನ್ನು ಶುಕ್ರವಾರ ವಿಚಾರಣೆಗೆ ಪಟ್ಟಿ ಮಾಡಲಾಗಿದೆ ಎಂದು ಹೇಳಿತು.

ಸ್ಫೋಟ: ಎನ್‌ಐಎ, ಇ.ಡಿ ಭಿನ್ನ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಕುಕ್ಕರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ), 'ಕದ್ರಿ ಮಂಜುನಾಥ ದೇವಾಲಯ ಸ್ಫೋಟಕ್ಕೆ ಸಂಚು ರೂಪಿಸಲಾಗಿತ್ತು' ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿತ್ತು. ಆದರೆ, ಜಾರಿ ನಿರ್ದೇಶನಾಲಯವು (ಇ.ಡಿ), 'ಧರ್ಮಸ್ಥಳ ಮಂಜುನಾಥಸ್ವಾಮಿ ದೇವಾಲಯ ಸ್ಫೋಟಕ್ಕೆ ಸಂಚು ರೂಪಿಸಲಾಗಿತ್ತು' ಎಂದಿದೆ. ಎರಡೂ ತನಿಖಾ ಸಂಸ್ಥೆಗಳ ವಿವರಗಳಲ್ಲಿನ ವ್ಯತ್ಯಾಸ ಚರ್ಚೆಗೆ ಕಾರಣವಾಗಿದೆ.

2022ರ ನವೆಂಬರ್‌ನಲ್ಲಿ ಮಂಗಳೂರಿನ ಆಟೋ ಒಂದರಲ್ಲಿ ಸ್ಫೋಟ ಸಂಭವಿಸಿತ್ತು. ಕುಕ್ಕರ್ ಬಾಂಬ್‌ನಿಂದ ಸ್ಫೋಟ ಸಂಭವಿಸಿದೆ ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಎನ್‌ಐಎ ತನಿಖೆ ಕೈಗೆತ್ತಿಕೊಂಡಿತ್ತು

2023ರ ಡಿಸೆಂಬರ್‌ನಲ್ಲಿ ಎನ್‌ಐಎ ಆರೋಪ ಪಟ್ಟಿ ಸಲ್ಲಿಸಿತ್ತು. 'ಮಂಗಳೂರಿನ ಕದ್ರಿಯ ಮಂಜುನಾಥಸ್ವಾಮಿ ದೇವಾಲಯವನ್ನು ಸ್ಫೋಟಿಸಲು ಸಂಚು ರೂಪಿಸಲಾಗಿತ್ತು. ಆದರೆ, ಆಪಾದಿತ ಮೊಹಮ್ಮದ್ ಶಾರಿಕ್ ಬಾಂಬ್‌ನ ಟೈಮರ್ ಅನ್ನು 9.0 ನಿಮಿಷಕ್ಕೆ ನಿಗದಿ ಮಾಡುವ ಬದಲಿಗೆ, 9.0 ಸೆಕೆಂಡ್‌ಗೆ ನಿಗದಿ ಮಾಡಿದ್ದ. ಹೀಗಾಗಿ ಆಟೊದಲ್ಲೇ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು' ಎಂದು ಎನ್‌ಐಎ ಹೇಳಿತ್ತು.

ಜತೆಗೆ, 'ಪ್ರೇಮರಾಜ್ ಎಂದು ಹೆಸರು ಬದಲಿಸಿದ್ದ ಶಾರಿಕ್ ಚಿಕ್ಕಬಳ್ಳಾಪುರದ ಇಶಾ ಫೌಂಡೇಷನ್, ಕನ್ಯಾಕುಮಾರಿಯ ವಿವೇಕಾನಂದ ಪ್ರತಿಮೆ, ವೆಲ್ಲೂರಿನ ದೇವಾಲಯ ಮತ್ತು ಕದ್ರಿಯ ಮಂಜುನಾಥ ದೇವಾಲಯಕ್ಕೂ ಭೇಟಿ ನೀಡಿದ್ದ' ಎಂದು ವಿವರಿಸಿತ್ತು.

ಕೇಂದ್ರದ ಎರಡು ತನಿಖಾ ಸಂಸ್ಥೆಗಳು ಒಂದೇ ಪ್ರಕರಣದ ವಿಚಾರದಲ್ಲಿ 2 ಭಿನ್ನ ದೇವಾಲಯಗಳ ಹೆಸರನ್ನು ಏಕೆ ಉಲ್ಲೇಖಿಸಿವೆ ಎಂದು ಜಾಲತಾಣಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ.

ದೇಗುಲ ಸ್ಫೋಟಕ್ಕೆ ಸಂಚು: ಇ.ಡಿ

ಪ್ರಕರಣದಲ್ಲಿ ವಿದೇಶದಿಂದ ಹಣ ವರ್ಗಾವಣೆ ಆಗಿರುವ ಬಗ್ಗೆ ತನಿಖೆ ನಡೆಸುವ ಉದ್ದೇಶದಿಂದ ಇ.ಡಿ ಸಹ ಇಸಿಐಆರ್ ದಾಖಲಿಸಿ ಕೊಂಡಿತ್ತು. ಶಾರಿಕ್‌ನ ಖಾತೆಯಲ್ಲಿದ್ದ ₹29,176 ವನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿದ್ದು, ಈ ಸಂಬಂಧ ಬುಧವಾರ ಪತ್ರಿಕಾ ಪ್ರಕಟಣೆ ಹೊರಡಿಸಿತ್ತು. ಅದರಲ್ಲಿ, 'ಆರೋಪಿಯು ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಾಲಯ ಸ್ಫೋಟಕ್ಕೆ ಸಂಚು ರೂಪಿಸಿದ್ದ. ಆದರೆ ಬಾಂಬ್‌ನ ಟೈಮರ್ ಅನ್ನು 90 ನಿಮಿಷಕ್ಕೆ ನಿಗದಿ ಮಾಡುವ ಬದಲಿಗೆ 9 ಸೆಕೆಂಡ್‌ಗೆ ನಿಗದಿ ಮಾಡಿದ್ದ. ಹೀಗಾಗಿ ಬಾಂಬ್ ಆಟೊದಲ್ಲೇ ಸ್ಫೋಟಗೊಂಡಿತ್ತು' ಎಂದು ವಿವರಿಸಿದೆ.

ಚಿಟಿಕೆ ಸುದ್ದಿ

'ಧರ್ಮಸ್ಥಳದಲ್ಲಿ ಧರ್ಮ ಜಾಗರಣಾ ಸಮಾವೇಶ'

ಮಂಗಳೂರು: 'ಧರ್ಮಸ್ಥಳದಲ್ಲಿ ಇದೇ ತಿಂಗಳು ಧರ್ಮ ಜಾಗರಣಾ ಸಮಾವೇಶ ನಡೆಸಲಾಗುವುದು. ರಾಜ್ಯದ ಮೂಲೆ ಮೂಲೆಗಳಲ್ಲಿರುವ ಮಂಜುನಾಥ ಸ್ವಾಮಿ ಭಕ್ತರು ಕ್ಷೇತ್ರದಲ್ಲಿ ಸೇರಲಿದ್ದಾರೆ. ಕ್ಷೇತ್ರದ ವಿರುದ್ಧ ಆಗುತ್ತಿರುವ ಷಡ್ಯಂತ್ರವನ್ನು ಈ ಸಮಾವೇಶದಲ್ಲಿ ಬಹಿರಂಗಗೊಳಿಸಲಾಗುವುದು' ಎಂದು 'ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಸಂಘಟನೆ'ಯ ಸಂಚಾಲಕ ವಸಂತ ಗಿಳಿಯಾರ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಧರ್ಮಸ್ಥಳ ಕ್ಷೇತ್ರದ ವಿರುದ್ಧ ಷಡ್ಯಂತ್ರಗಳು ನಡೆಯುತ್ತಿದ್ದು, ಭಯೋತ್ಪಾದಕ ಚಟುವಟಿಕೆಗೂ, ಇಲ್ಲಿ ನಡೆಯುತ್ತಿರುವ ಘಟನೆಗಳಿಗೂ ಸಂಬಂಧ ಇರುವ ಸಾಧ್ಯತೆ ಇದೆ. ವಿದೇಶಿ ಹಣ ವಿನಿಯೋಗ ಆಗಿರುವ ಅನುಮಾನ ಇದೆ. ಎನ್‌ಐಎಗೆ ತನಿಖೆ ವಹಿಸಬೇಕು' ಎಂದರು.

ಭದ್ರಾ: ಹುಲಿ ಸಾವು



ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮೃತಪಟ್ಟಿರುವ ಹೆಣ್ಣು ಹುಲಿ

ಚಿಕ್ಕಮಗಳೂರು: ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಲಕ್ಕವಳ್ಳಿ ವಲಯದ ಸಾವೆ ಅರಣ್ಯ ಪ್ರದೇಶದಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದೆ.

ಅಂದಾಜು 7 ವರ್ಷದ ಹೆಣ್ಣು ಹುಲಿ ಎಂದು ಗುರುತಿಸಲಾಗಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಗುರುವಾರ ಗಸ್ತು ತಿರುಗುವಾಗ ದೊರೆತಿದೆ.

ಹುಲಿಗಳ ನಡುವಿನ ಕಾದಾಟದಲ್ಲಿ ಗಾಯಗೊಂಡು ಸಾವನ್ನಪ್ಪಿರಬಹುದು ಎಂದು ಅನುಮಾನ ವ್ಯಕ್ತವಾಗಿದೆ.

ನಿಧನ ವಾರ್ತೆ

ಅಲೋಶಿಯಸ್ ಡಿಸೋಜ



ಮಂಗಳೂರು: ಮಂಗಳೂರು ಕೆಥೋಲಿಕ್ ಕ್ರೈಸ್ತ ಧರ್ಮಪ್ರಾಂತ್ಯದ ಧರ್ಮಗುರು ಶತಾಯುಷಿ ಫಾ. ಅಲೋಶಿಯಸ್ ಡಿಸೋಜ ಗುರುವಾರ ಇಲ್ಲಿನ ಜಪ್ಪು ಸೇಂಟ್ ಜೋಸೆಫ್ ವಾಜ್ ಹೋಂನಲ್ಲಿ ನಿಧನರಾದರು. ಅವರು 100ನೇ ವರ್ಷಕ್ಕೆ ಪಾದಾರ್ಪಣೆ ಮಾಡಿ ಏಳು ತಿಂಗಳು ಕಳೆದಿತ್ತು.

1925 ಜನವರಿ 29ರಂದು ಪುತ್ತೂರಿನಲ್ಲಿ ಜನಿಸಿದ್ದ ಅವರು1953 ಆಗಸ್ಟ್‌ನಲ್ಲಿ ಗುರುದೀಕ್ಷೆ ಪಡೆದು, 72 ವರ್ಷ ಧರ್ಮಗುರುಗಳಾಗಿ ಸೇವೆ ಸಲ್ಲಿಸಿದ್ದರು. 2025 ಜನವರಿ 29ರಂದು ಅವರ ಜನ್ಮ ಶತಮಾನೋತ್ಸವ ಆಚರಿಸಲಾಗಿತ್ತು.

ಅವರ ಅಂತ್ಯಕ್ರಿಯೆ ಆ.8ರ ಸಂಜೆ 4 ಗಂಟೆಗೆ ಮಂಗಳೂರಿನ ವೆಲೆನ್ಸಿಯಾದಲ್ಲಿರುವ ಸೇಂಟ್ ವಿನ್ಸೆಂಟ್ ಫೆರರ್ ಚರ್ಚ್‌ನಲ್ಲಿ ನಡೆಯಲಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಬಾಳ್ವೆಯನ್ನು ನಾವು ನಿರಾಕರಿಸದೇ ಮೊದಲಿಗೆ ಒಪ್ಪಬೇಕು. ಜೀವನದಿಂದಲೇ ಜೀವನ ಎಂಬುದನ್ನು ತಿಳಿಯಬೇಕು.

–ಶಿವರಾಮ ಕಾರಂತ

ಸಂಪಾದಕೀಯ

ದ್ವೇಷ ಹಾಗೂ ಹಿಂಸೆಯ ವಿಷ ವ್ಯಾಪಕ ಹೋರಾಟದ ಸಮಯ

ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳಲ್ಲಿ ದಿನವೂ ಅನುಸರಿಸಬೇಕಾದ 25 ಅಂಶಗಳನ್ನು ಪಟ್ಟಿ ಮಾಡಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಬೆಳಗಾವಿ ಮತ್ತು ಶಿವಮೊಗ್ಗದ ಶಾಲೆಗಳಲ್ಲಿ ಕುಡಿಯುವ ನೀರಿಗೆ ವಿಷ ಬೆರೆಸಿದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ, ಮಕ್ಕಳ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಶಿಕ್ಷಣ ಇಲಾಖೆ ಪಟ್ಟಿಮಾಡಿದೆ. ಶಿಕ್ಷಣ ಹಕ್ಕು ಕಾಯ್ದೆ ಹಾಗೂ ಮಕ್ಕಳ ಸುರಕ್ಷತಾ ನೀತಿ ಅನ್ವಯ ಈ ಪಟ್ಟಿಯನ್ನು ರೂಪಿಸಲಾಗಿದೆ. ಕುಡಿಯುವ ನೀರಿಗೆ ವಿಷ ಬೆರೆಸಿದ ಎರಡೂ ಘಟನೆಗಳು ಮಕ್ಕಳ ಸುರಕ್ಷತೆಯ ಬಗ್ಗೆ ಕಳವಳ ಹುಟ್ಟಿಸುವಂತಿವೆ. ವಿಶೇಷವಾಗಿ, ಬೆಳಗಾವಿಯ ಘಟನೆ ಹೆಚ್ಚು ಹೇಯವಾದುದು ಹಾಗೂ ಕೋಮುದ್ವೇಷದಿಂದ ಪ್ರೇರಿತವಾದುದು. ಶಾಲೆಯಲ್ಲಿನ ಮುಸ್ಲಿಂ ಸಮುದಾಯದ ಮುಖ್ಯ ಶಿಕ್ಷಕರ ವಿರುದ್ಧ ಅಪಪ್ರಚಾರ ಮಾಡಲು ಹಾಗೂ ಅವರನ್ನು ವರ್ಗ ಮಾಡಿಸುವ ಉದ್ದೇಶದಿಂದ ದುಷ್ಕೃತ್ಯ ನಡೆದಿದ್ದು, ವಿಷ ಬೆರೆತ ನೀರು ಕುಡಿದು ಕೆಲವು ವಿದ್ಯಾರ್ಥಿಗಳು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಈ ಪ್ರಕರಣದಲ್ಲಿ ಶ್ರೀರಾಮಸೇನೆಯ ಮುಖಂಡ ಸಾಗರ್ ಪಾಟೀಲ್ ಸೇರಿದಂತೆ ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಧಾರ್ಮಿಕ ಅಸಹಿಷ್ಣುತೆಯ ದ್ವೇಷಪೂರಿತ ಕಾರ್ಯಸೂಚಿ ಜಾರಿಗೊಳಿಸಲು ಮಕ್ಕಳನ್ನು ಗುರಿ ಮಾಡಿಕೊಂಡಿರುವುದು ಧಾರ್ಮಿಕ ಮೂಲಭೂತವಾದದ ವಿಕೃತ ಸ್ವರೂಪವನ್ನು ಅನಾವರಣಗೊಳಿಸುವಂತಿದೆ. ರಾಜಕಾರಣದಲ್ಲಿ ಧರ್ಮಾಂಧತೆಯನ್ನು ಬೆರೆಸುವುದು ಹಾಗೂ ತಾವು ನಿರ್ಲಜ್ಜೆಯಿಂದ ವರ್ತಿಸುವುದು ದೇಶದ ದುಷ್ಪರಿಣಾಮಗಳ ಸಂದಿರುವುದು ಪರಿಸ್ಥಿತಿ ತೀವ್ರವಾಗಿ ವಿಷಮಗೊಂಡಿರುವುದನ್ನು ಸೂಚಿಸುವಂತಿದೆ. ರಾಜಕೀಯ ಸಿದ್ಧಾಂತಗಳ ಕುರಿತ ದ್ವೇಷವಾಗಿ ರೂಪುಗೊಂಡಾಗ, ಅಮಾಯಕ ಮಕ್ಕಳನ್ನೂ ಆ ದ್ವೇಷ ಗುರಿಯಾಗಿಸಿಕೊಳ್ಳುತ್ತದೆ ಎನ್ನುವುದಕ್ಕೆ ಬೆಳಗಾವಿ ಶಾಲೆಯಲ್ಲಿ ನಡೆದ ಘಟನೆ ಉದಾಹರಣೆಯಾಗಿದೆ. ಆ ದುಷ್ಕೃತ್ಯದ ಜವಾಬ್ದಾರಿಯನ್ನು ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್, ಬಿಜೆಪಿ ನಾಯಕರಾದ ಬಿ.ವೈ. ವಿಜಯೇಂದ್ರ ಮತ್ತು ಆರ್. ಅಶೋಕ ಅವರು ತೆಗೆದುಕೊಳ್ಳುತ್ತಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿರುವುದು ಸೂಕ್ತವಾಗಿದೆ. ದುರ್ಘಟನೆಗೆ ಸಂಬಂಧಿಸಿದಂತೆ ಖಂಡನೆ, ತನಿಖೆ ಒತ್ತಾಯ, ಆಕ್ರೋಶ, ಯಾವುದೂ ಇಲ್ಲದೆ, ಬಿಜೆಪಿ ಮೌನವಹಿಸಿರುವುದು ಅಚ್ಚರಿ ಹುಟ್ಟಿಸುವಂತಿದೆ. ಮುಗ್ಧ ಮಕ್ಕಳ ಜೀವಗಳು ಅಪಾಯಕ್ಕೆ ಸಿಲುಕಿದ ಸಂದರ್ಭದಲ್ಲಿ ವಹಿಸುವ ಮೌನ ಹಾಗೂ 'ಅನುಕೂಲಸಿಂಧು ಆಕ್ರೋಶ' ವ್ಯಕ್ತಪಡಿಸುವುದು ಆಷಾಢಭೂತಿತನ ಮಾತ್ರವಾಗಿರದೆ, ದುಷ್ಕೃತ್ಯದಲ್ಲಿ ಭಾಗಿಯಾದಂತೆಯೂ ಹೌದು.



ಶಾಲಾ ಮಕ್ಕಳ ಸುರಕ್ಷತೆಗಾಗಿ ಪಾಲಿಸಬೇಕಾದ ಮುನ್ನೆಚ್ಚರಿಕೆಗಳ ಸುತ್ತೋಲೆ ಸ್ವಾಗತಾರ್ಹ. ಆದರೆ, ದ್ವೇಷ ಸಿದ್ಧಾಂತ ವಿರುದ್ಧದ ಹೋರಾಟ ವ್ಯಾಪಕವಾಗಬೇಕು.

ಶಾಲೆಗಳಲ್ಲಿ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ. ಶಾಲೆಗಳ ಮುಖ್ಯ ಶಿಕ್ಷಕರು ತರಗತಿಗಳು ಆರಂಭವಾಗುವ ಮುನ್ನ ಶಾಲಾ ಪರಿಸರದ ತಪಾಸಣೆ ನಡೆಸುವುದು ಇನ್ನು ಮುಂದೆ ಕಡ್ಡಾಯವಾಗಲಿದೆ. ನೀರಿನ ಗುಣಮಟ್ಟದ ಪರೀಕ್ಷೆ, ನೀರಿನ ಟ್ಯಾಂಕ್‌ಗಳಿಗೆ ಬೀಗ ಹಾಕಿರುವುದನ್ನು ಹಾಗೂ ಶೌಚಾಲಯಗಳು ಶುಚಿಯಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು, ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವುದು ಸೇರಿದಂತೆ ಪರಿಶೀಲನೆಯ ಎಲ್ಲ ಸಂಗತಿಗಳನ್ನೂ 'ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ' (ಸ್ಯಾಟ್ಸ್) ಪೋರ್ಟಲ್‌ನಲ್ಲಿ ಪ್ರತಿನಿತ್ಯ ದಾಖಲಿಸ ಬೇಕಾಗಿದೆ. ಆದರೆ, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದ ಮುನ್ನೆಚ್ಚರಿಕಾ ಕ್ರಮಗಳು ಕಾಗದದ ಮೇಲಷ್ಟೇ ಉಳಿಯದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕಾಗಿದೆ. ತಮಗೆ ಸಂಬಂಧಿಸದ ಯುದ್ಧದಲ್ಲಿ ಮಕ್ಕಳು ಅಪಾಯಕ್ಕೆ ಗುರಿಯಾಗಬಾರದು. ವಿಷ, ಪೂರ್ವಗ್ರಹ ಅಥವಾ ಸ್ವಚ್ಛತೆಯ ಕೊರತೆಯಂತಹ ಕಾರಣಗಳೊಂದಿಗೆ ಮಕ್ಕಳ ಹಿತಾಸಕ್ತಿಯನ್ನು ರಾಜಿ ಮಾಡಿಕೊಳ್ಳುವಂತೆಯೂ ಆಗಬಾರದು. ಬೆಳಗಾವಿ ದುಷ್ಕೃತ್ಯಕ್ಕೆ ಕಾರಣರಾದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕಾಗಿದೆ. ನ್ಯಾಯಾಲಯದ ಚೌಕಟ್ಟನ್ನು ಮೀರಿ, ಇಂಥ ಹೇಯ ಹಿಂಸೆಗೆ ಕಾರಣವಾಗುವ ದ್ವೇಷದ ಮನಃಸ್ಥಿತಿಯನ್ನು ತಿರಸ್ಕರಿಸುವ ನಿಟ್ಟಿನಲ್ಲಿ ಸಮಾಜ ಸಂವೇದನಾಶೀಲ ಆಗಬೇಕಿದೆ. ಇಂಥ ದುಷ್ಕೃತ್ಯಗಳಿಗೆ ವಿಭಜಕ ಮನಃಸ್ಥಿತಿಯ ರಾಜಕಾರಣಿಗಳು, ಶಿಕ್ಷೆಯ ಭಯವಿಲ್ಲದೆ ಅತಿರೇಕದಿಂದ ವರ್ತಿಸುವ ಗುಂಪುಗಳು ಮಾತ್ರವಲ್ಲದೆ, ಎಲ್ಲವನ್ನೂ ಸಹಿಸಿಕೊಳ್ಳುವ ಸಮಾಜದ ಉದಾಸೀನ ಪ್ರವೃತ್ತಿಯೂ ಕಾರಣವಾಗಿದೆ. ನಮ್ಮ ಮುಂದಿರುವ ಆಯ್ಕೆಯು ಸ್ಪಷ್ಟವಾಗಿದೆ: ವಿಷಕಾರಿ ಕಾರ್ಯಸೂಚಿಯನ್ನು ಒಗ್ಗಟ್ಟಿನಿಂದ ವಿರೋಧಿಸುವುದು ಅಥವಾ ಸಮಾಜದ ಮಾನವೀಯ ಸಂರಚನೆ ದ್ವೇಷದ ಉರಿಗೆ ಬಲಿಯಾಗುತ್ತಿರುವುದನ್ನು ನೋಡಿಕೊಂಡು ನಿಷ್ಕ್ರಿಯರಾಗಿರುವುದು.

ಜಾಲಾಡಿ

ಯಜಮಾನಿಕೆ ಪ್ರಶ್ನಾರ್ಹ



ಟ್ರಂಪ್ ಎಲ್ಲ ದೇಶಗಳನ್ನು ಕೋತಿ ಕುಣಿಸಿದಂತೆ ಕುಣಿಸುತ್ತಿದ್ದಾರೆ. ಏಕೆಂದರೆ, ಉಳಿದೆಲ್ಲ ದೇಶಗಳೂ ನಾಯಿಗಳಂತೆ ಪರಸ್ಪರ ಕಚ್ಚಾಡುತ್ತಿವೆ. ಎಲ್ಲ ದೇಶಗಳೂ ಒಂದಾಗಿ ಅಮೆರಿಕದ ಯಜಮಾನಿಕೆ ಪ್ರಶ್ನಿಸಲು ಸಾಧ್ಯವಿಲ್ಲವೇ?

ಕೆ. ಮರುಳಸಿದ್ದಪ್ಪ, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಮೇಲೆ ಅವೈಜ್ಞಾನಿಕವಾಗಿ ಸುಂಕ ವಿಧಿಸುತ್ತಿದ್ದಾರೆ. ಇನ್ನೂ ಮುಂದುವರಿದು ರಷ್ಯಾದೊಂದಿಗಿನ ಸಂಬಂಧಗಳನ್ನು ಕಡಿತಗೊಳಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದಾರೆ. ಇದು ನಮ್ಮ ಸಾರ್ವಭೌಮತ್ವದ ಮೇಲಿನ ನೇರ ದಾಳಿಯಾಗಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

---

25 ವರ್ಷಗಳ ಹಿಂದೆ

ಮಂಗಳವಾರ, 8-8-2000

• ವೀರಪ್ಪನ್ ಮೌನ: ಆತಂಕದಲ್ಲಿ ಕೃಷ್ಣ

ಬೆಂಗಳೂರು, ಆಗಸ್ಟ್ 7– 'ವರನಟ ಡಾ. ರಾಜ್ ಮತ್ತು ಇತರ ಮೂವರ ಅಪಹರಣ ಪ್ರಕರಣಕ್ಕೆ ಮುಕ್ತಾಯ ಹೇಳಲು ರಾಜ್ಯ ಸರ್ಕಾರ ಹಲವು ನಿರ್ಧಾರಗಳನ್ನು ಪ್ರಕಟಿಸಿದರೂ ಅದಕ್ಕೆ ಪ್ರತಿಯಾಗಿ ವೀರಪ್ಪನ್‌ನ ಮೌನ ಅಸಹನೀಯವಾಗಿದೆ' ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಬೇಸರ ವ್ಯಕ್ತಪಡಿಸಿದರು.

ವರದಿಗಾರರ ಜೊತೆಗೆ ಮಾತನಾಡಿದ ಅವರು, ವೀರಪ್ಪನ್ ಕಡೆಯಿಂದ ಇದುವರೆಗೆ ಯಾವುದೇ ಉತ್ತರ ಬಂದಿಲ್ಲ ಎಂದರು.

• ಕಾರು–ಬಸ್ ಡಿಕ್ಕಿ: ಪಟೇಲ್ ಬಂಧುಗಳು ಸೇರಿ 4 ಸಾವು

ಚಿತ್ರದುರ್ಗ, ಆಗಸ್ಟ್ 7– ಗೌರಮ್ಮನ ಗೇಟ್ ಬಳಿ ಹೆದ್ದಾರಿಯಲ್ಲಿ ಕಾರು ಮತ್ತು ಖಾಸಗಿ ಬಸ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಕಾರಿನ ಚಾಲಕ ಮತ್ತು ಕಾರಿನಲ್ಲಿದ್ದ ಇತರ ಮೂವರು ಮೃತರಾದರು.

ಮೃತರಾದ ಸಾವಿತ್ರಮ್ಮ ವಾಮದೇವಪ್ಪ (58) ಹಾಗೂ ಉಮಾ ಬಸವರಾಜ್ (56) ರಾಜ್ಯದ ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ತಂಗಿಯರು; ಮೃತಳಾದ ಬಾಲಕಿ ಶಕ್ತಿ, ಜೆ.ಎಚ್. ಪಟೇಲರ ಮಗ ಮಹಿಮಾ ಪಟೇಲ್ ಅವರ ಮಗಳು.

75 ವರ್ಷಗಳ ಹಿಂದೆ

ಮಂಗಳವಾರ, 8-8-1950

• ಚಾಮರಾಜನಗರ– ಸತ್ಯಮಂಗಲ ರೈಲ್ವೆ

ನವದೆಹಲಿ, ಆಗಸ್ಟ್ 7– ಚಾಮರಾಜ ನಗರ ಮತ್ತು ಸತ್ಯಮಂಗಲಕ್ಕೆ ರೈಲ್ವೆ ಮಾರ್ಗ ಹಾಕಬೇಕೆಂಬ ಬಗ್ಗೆ ಹನುಮಂತಯ್ಯ ಮತ್ತು ಎಸ್. ಚನ್ನಯ್ಯನವರು ಕೇಳಿದ ಪ್ರಶ್ನೆಯೊಂದಕ್ಕೆ ಕಾಲಾವಕಾಶವಾಗದೆ ಉತ್ತರಿಸಲಿಲ್ಲ.

ಚಾಮರಾಜನಗರ– ಸತ್ಯಮಂಗಲ ವಿಭಾಗವು ಚಾಮರಾಜನಗರ– ಮೆಟ್ಟುಪಾಳ್ಯ ನೀರಾವರಿ ಯೋಜನೆಗೆ ಸೇರಿದೆಯೆಂದೂ ಇದರ ಎಂಜಿನಿಯರಿಂಗ್ ಮತ್ತು ಆರ್ಥಿಕ ದೃಷ್ಟಿಯ ಪರಿಶೀಲನೆ ಪೂರ್ಣಗೊಂಡ ನಂತರ ಕೈಗೊಳ್ಳಬೇಕೆಂದು ಕೇಂದ್ರದ ಸಂಚಾರ ಸೌಕರ್ಯ ಸಮಿತಿ ನಿರ್ಧರಿಸಿದೆಯೆಂದೂ ಡಾ. ಗೋಪಾಲಸ್ವಾಮಿ ಅವರು ಪಾರ್ಲಿಮೆಂಟ್‌ಗೆ ನೀಡಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಯೋಜನೆಗೆ 4,56,221 ರೂಗಳು ತಗಲುತ್ತದೆ ಎಂದು ಅಂದಾಜು ಮಾಡಲಾಗಿದೆ.

ಟ್ರಂಪ್‌ಗೆ ಭಾರತ ಬಾಗಬೇಕೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

> ದೇಶದೊಳಗೆ ಕುಸಿಯುತ್ತಿರುವ ಜನಪ್ರಿಯತೆ ಹಾಗೂ ಅಂತರರಾಷ್ಟ್ರೀಯ ವಲಯದಲ್ಲಿ ಅಮೆರಿಕದ ಹಿಡಿತ ಕಡಿಮೆ ಆಗುತ್ತಿರುವ ಹತಾಶೆ ಟ್ರಂಪ್ ಅವರನ್ನು ಬಾಧಿಸುತ್ತಿದೆ. ಆ ಹತಾಶೆಯಲ್ಲಿಯೇ ಭಾರತದ ಮೇಲೆ ಸುಂಕ ಸಮರ ಸಾರಿದ್ದಾರೆ. ಈ ಮೊದಲು, ಅಮೆರಿಕ ಒತ್ತಡ ಹೇರಿದ ಸಂದರ್ಭಗಳಲ್ಲೆಲ್ಲ ಭಾರತ ದಿಟ್ಟತನದಿಂದ ಎದ್ದುನಿಂತಿದೆ. ಈಗಲೂ, ಟ್ರಂಪ್ ಬೆದರಿಕೆಗೆ ಭಾರತ ಸೊಪ್ಪು ಹಾಕಬೇಕಿಲ್ಲ.

ಡೊನಾಲ್ಡ್ ಟ್ರಂಪ್ ಅವರು ಎರಡನೆಯ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿ ಮಾಡಿದ ಭಾಷಣದಲ್ಲಿ, 'ಅಮೆರಿಕದ ಸ್ವರ್ಣಯುಗ ಇದೀಗ ಆರಂಭಗೊಳ್ಳುತ್ತಿದೆ' ಎಂದಿದ್ದರು. ಯುದ್ಧಗಳನ್ನು ನಿಲ್ಲಿಸುವ ಮಾತನಾಡಿದ್ದರು. ತಮ್ಮನ್ನು ಶಾಂತಿ ಸ್ಥಾಪಕ ಎಂದು ಗುರುತಿಸಬೇಕು ಎಂಬ ಆಕಾಂಕ್ಷೆ ವ್ಯಕ್ತಪಡಿಸಿದ್ದರು. ಆಕಾಂಕ್ಷೆ ಹತಾಶೆಯಾಗಿ ಪರಿಣಮಿಸಿದ ಮನುಷ್ಯನ ಮಾತು, ವರ್ತನೆ ಹಾಗೂ ಧೋರಣೆಗಳು ಹೇಗಿರುತ್ತವೆ ಎಂಬುದಕ್ಕೆ ಇದೀಗ ಟ್ರಂಪ್ ಉದಾಹರಣೆಯಾಗಿ ಕಾಣುತ್ತಿದ್ದಾರೆ.

ಅಮೆರಿಕದಲ್ಲಿ ಟ್ರಂಪ್ ಜನಪ್ರಿಯತೆ ಕುಸಿದಿದೆ. ಜಾಗತಿಕವಾಗಿ ಅಮೆರಿಕದ ಹಿಡಿತ ಸಡಿಲಗೊಳ್ಳುತ್ತಿದೆ. ಜೋ ಬೈಡೆನ್ ಅವರ ಅವಧಿಯಲ್ಲಿ ಅಮೆರಿಕದ ಆರ್ಥಿಕತೆ ಕುಸಿದಿತ್ತು. ನಿರುದ್ಯೋಗ ಪ್ರಮಾಣ ಹೆಚ್ಚಿತ್ತು. ಹಣದುಬ್ಬರ ಜನರನ್ನು ಕಂಗಾಲುಗೊಳಿಸಿತ್ತು. ಆ ವಿಷಯಗಳ ಕುರಿತು ಮಾತನಾಡಿದ್ದ ಟ್ರಂಪ್, ತಾನು ಅಧಿಕಾರಕ್ಕೆ ಬಂದರೆ ಅಮೆರಿಕದಲ್ಲಿ ಉದ್ಯೋಗ ಸೃಷ್ಟಿಸಲಾಗುತ್ತದೆ, ಅಕ್ರಮ ವಲಸೆ ಹಾಗೂ ಹಣದುಬ್ಬರಕ್ಕೆ ಕಡಿವಾಣ ಹಾಕುತ್ತೇನೆ, ರಷ್ಯಾ–ಉಕ್ರೇನ್ ಯುದ್ಧವನ್ನು ಕೆಲವೇ ದಿನಗಳಲ್ಲಿ ನಿಲ್ಲಿಸುತ್ತೇನೆ ಎಂದೆಲ್ಲ ಭರವಸೆ ನೀಡಿದ್ದರು.

ಇದೀಗ ಅಧಿಕಾರಕ್ಕೆ ಬಂದು ಏಳು ತಿಂಗಳು ಕಳೆದರೂ ಯಾವ ಸಮಸ್ಯೆಯನ್ನೂ ಪರಿಹರಿಸಲು ಅವರಿಗೆ ಸಾಧ್ಯವಾಗಿಲ್ಲ. ಉದ್ಯೋಗ ಕಡಿತ ಕುರಿತ ಅಂಕಿ ಅಂಶಗಳನ್ನು ಟ್ರಂಪ್ ನಿರಾಕರಿಸುತ್ತಿದ್ದಾರೆ. ಅಮೆರಿಕದ ಸಾಲದ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಆಂತರಿಕವಾಗಿ ಆಡಳಿತದಲ್ಲಿ ಶಿಸ್ತು ತರಲು, ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ. ಚುನಾವಣೆಯ ವೇಳೆ ಟ್ರಂಪ್ ನಿಕಟವರ್ತಿಯಾಗಿದ್ದ ಉದ್ಯಮಿ ಇಲಾನ್ ಮಸ್ಕ್ ಅವರಿಗೆ ಆಡಳಿತದಲ್ಲಿ ಸುಧಾರಣೆ ತರುವ ಜವಾಬ್ದಾರಿಯನ್ನು ನೀಡಲಾಗಿತ್ತು. ಆದರೆ, ಕೆಲವು ತಿಂಗಳುಗಳಲ್ಲೇ ಟ್ರಂಪ್ ಅವರ ವರ್ತನೆ ಹಾಗೂ ನಿಲುವುಗಳಿಂದ ಬೇಸತ್ತ ಮಸ್ಕ್, ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಟ್ರಂಪ್ ಅವರಿಂದ ದೂರ ಸರಿದಿದ್ದಾರೆ.

ಬೈಡೆನ್ ಅವಧಿಯಲ್ಲಿ ಅಮೆರಿಕ ತನ್ನ ಜಾಗತಿಕ ಪ್ರಭಾವವನ್ನು ಕಳೆದುಕೊಂಡಿತು. ಆ ಪ್ರಭಾವವನ್ನು ಪುನಃ ಸ್ಥಾಪಿಸಲು ಟ್ರಂಪ್‌ಗೆ ಸಾಧ್ಯವಾಗುತ್ತಿಲ್ಲ. ಉಕ್ರೇನ್ ಅಧ್ಯಕ್ಷರನ್ನು ಶ್ವೇತಭವನಕ್ಕೆ ಕರೆಸಿಕೊಂಡು ಮಾಧ್ಯಮಗಳ ಎದುರು ಸಿಡಿಮಿಡಿಗೊಂಡಿದ್ದ ಟ್ರಂಪ್, ಇದುವರೆಗೂ ಉಕ್ರೇನ್ ಯುದ್ಧದ ವಿಷಯದಲ್ಲಿ ಏನನ್ನೂ ಸಾಧಿಸಲು ಸಾಧ್ಯವಾಗಿಲ್ಲ. ಉಕ್ರೇನ್ ಅಧ್ಯಕ್ಷರನ್ನು ಹೊರಗಿಟ್ಟು ರಷ್ಯಾದ ಜೊತೆಗೆ ಯುದ್ಧದ ಕುರಿತು ಅಮೆರಿಕ ಮಾತುಕತೆ ನಡೆಸಿದ್ದನ್ನು ಐರೋಪ್ಯ ರಾಷ್ಟ್ರಗಳು ಒಪ್ಪಲಿಲ್ಲ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರ ನೇತೃತ್ವದಲ್ಲಿ ಐರೋಪ್ಯ ರಾಷ್ಟ್ರಗಳ ನಾಯಕರು ಅಮೆರಿಕದ ಧೋರಣೆಯನ್ನು ಖಂಡಿಸಿದರು, ಅಸಮಾಧಾನವನ್ನೂ ಬಹಿರಂಗಪಡಿಸಿದರು.

ಇಸ್ರೇಲ್ ಹಾಗೂ ಇರಾನ್ ನಡುವಿನ ಬಿಕ್ಕಟ್ಟಿನ ಸಂದರ್ಭದಲ್ಲೂ ಅಮೆರಿಕ ಹಾಗೂ ಐರೋಪ್ಯ ರಾಷ್ಟ್ರಗಳ ನಡುವಿನ ಒಡಕು ಹಾಗೂ ಅಸಮಾಧಾನ ಮತ್ತೊಮ್ಮೆ ಜಾಹೀರಾಯಿತು. ಫ್ರಾನ್ಸ್, ಬ್ರಿಟನ್ ಹಾಗೂ ಕೆನಡಾ ಇದೀಗ ಪ್ಯಾಲೆಸ್ಟೀನ್ ಅನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಗುರುತಿಸಲು ನಿರ್ಧರಿಸಿವೆ. ಅಮೆರಿಕಕ್ಕೆ ಮತ್ತೊಮ್ಮೆ ಹಿನ್ನಡೆಯಾಗಿದೆ. ಅರ್ಥಾತ್ ಟ್ರಂಪ್‌ಗೆ ಮುಖಭಂಗವಾಗಿದೆ.

ಅಮೆರಿಕದ ಆಂತರಿಕ ವಿಷಯಗಳಲ್ಲಿ ಆದ ಹಿನ್ನಡೆ ಹಾಗೂ ಜಾಗತಿಕವಾಗಿ ಕುಗ್ಗುತ್ತಲೇ ಇರುವ ಪ್ರಭಾವ ಟ್ರಂಪ್ ಅವರನ್ನು ತುದಿಗಾಲಲ್ಲಿ ನಿಲ್ಲಿಸಿದೆ. ವಿದೇಶಿ ಉತ್ಪನ್ನಗಳ ಮೇಲೆ ತೆರಿಗೆ ಹೆಚ್ಚಿಸುವ ಮೂಲಕ, ಅಮೆರಿಕದ ಪ್ರಾಮುಖ್ಯ ಹಾಗೂ ತಮ್ಮ ಅಧಿಕಾರದ ವ್ಯಾಪ್ತಿಯೇನು ಎಂದು ತೋರಿಸಲು ಅವರು ಹೊರಟಂತೆ ಕಾಣುತ್ತಿದೆ.

ಅಷ್ಟಕ್ಕೂ ಭಾರತದ ಕುರಿತು ಟ್ರಂಪ್ ಮುನಿಸಿಕೊಳ್ಳಲು, ಪಾಕಿಸ್ತಾನದ ಪರ ಮಮಕಾರ ತೋರಲು ಕಾರಣಗಳಿವೆಯೇ? ಮೊದಲ ಅವಧಿಯಲ್ಲಿ ಟ್ರಂಪ್ ಅವರ ಆದ್ಯತೆ ಚೀನಾದ ಓಘಕ್ಕೆ ಕಡಿವಾಣ ಹಾಕುವುದಾಗಿತ್ತು. ಹಾಗಾಗಿಯೇ, ಭಾರತಕ್ಕೆ ಹತ್ತಿರವಾಗುವುದು ಅಮೆರಿಕಕ್ಕೆ ಅನಿವಾರ್ಯ ಎನಿಸಿತ್ತು. ಬಂಡವಾಳ ಆಕರ್ಷಣೆ, ರಕ್ಷಣಾ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ವ್ಯೂಹಾತ್ಮಕ ದೃಷ್ಟಿಯಿಂದ ಭಾರತವೂ ಅಮೆರಿಕದ ಜೊತೆಗೆ ಸಂಬಂಧ ವೃದ್ಧಿಸಿಕೊಳ್ಳಲು ಕಾತುರವಾಗಿತ್ತು. ಹಾಗಾಗಿ ದ್ವಿಪಕ್ಷೀಯ ಸಂಬಂಧಕ್ಕೆ ಬಲಬಂತು. ಚೀನಾವನ್ನು ಗಮನದಲ್ಲಿಟ್ಟುಕೊಂಡು 'ಕ್ವಾಡ್' ರಚನೆಯಾಯಿತು.

ಭಾರತದ ವಿದೇಶಾಂಗ ನೀತಿ ಸ್ಪಷ್ಟವಿತ್ತು. ವ್ಯಾಪಾರ ಅಥವಾ ರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಯಾವುದೇ ಒಂದು ರಾಷ್ಟ್ರ ಅಥವಾ ಒಕ್ಕೂಟದ ಮೇಲೆ ಅವಲಂಬಿತವಾಗಬಾರದು ಎಂಬುದು ಭಾರತದ ನಿಲುವಾಗಿತ್ತು. ರಷ್ಯಾ, ಅಮೆರಿಕ, ಫ್ರಾನ್ಸ್, ಅರಬ್ ರಾಷ್ಟ್ರಗಳು, ಇಸ್ರೇಲ್ ಹಾಗೂ ದಕ್ಷಿಣ ಜಗತ್ತಿನ ರಾಷ್ಟ್ರಗಳನ್ನು ಸಮಾನವಾಗಿ ಕಾಣುವ ಹಾಗೂ ಎಲ್ಲ ದೇಶಗಳ ಜೊತೆಗೆ ವ್ಯಾವಹಾರಿಕ ಸಂಬಂಧ ಹೊಂದುವ, ಜಾಗತಿಕ ಪೂರೈಕೆ ಜಾಲದಲ್ಲಿ ಪ್ರಮುಖ ಕೊಂಡಿಯಾಗುವ ಗುರಿಯೊಂದಿಗೆ ಭಾರತ ಹೆಜ್ಜೆಯಿರಿಸಿತು. ರಷ್ಯಾದಿಂದ 'ಎಸ್–400' ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಭಾರತ ಖರೀದಿಸಿದಾಗ ಅಮೆರಿಕ ಸಿಟ್ಟಾಗಿತ್ತು. ಆದರೆ, ಭಾರತ ಹಿಂದೆ ಸರಿಯಲಿಲ್ಲ. ಉಕ್ರೇನ್ ಯುದ್ಧ ಆರಂಭವಾದ ಮೇಲೆ ರಷ್ಯಾದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳು ದಿಗ್ಬಂಧನ ಹೇರಿದವು. ರಷ್ಯಾದ ಜೊತೆಗೆ ಭಾರತ ವಾಣಿಜ್ಯಿಕ ವ್ಯವಹಾರ ಇಟ್ಟುಕೊಳ್ಳಬಾರದು ಎಂಬ ಒತ್ತಡ ಅಮೆರಿಕದಿಂದ ಬಂತು. ಭಾರತ ಒತ್ತಡಕ್ಕೆ ಮಣಿಯಲಿಲ್ಲ.

ಒತ್ತಡ ಹಾಗೂ ಬೆದರಿಕೆಗೆ ಬಗ್ಗದಿದ್ದಾಗ ಭಾರತವನ್ನು ಓಲೈಸುವ ಪ್ರಯತ್ನ ಮಾಡಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ವೇತಭವನಕ್ಕೆ ಕರೆಸಿಕೊಂಡು ಬೈಡೆನ್ ವಿಶೇಷ ಆತಿಥ್ಯ ನೀಡಿದರು. ಭಾರತದ ನಿಲುವು ಬದಲಾಗಲಿಲ್ಲ. ರಷ್ಯಾದ ಗೆಳೆತನವನ್ನು ಭಾರತ ತೊರೆಯಲಿಲ್ಲ. ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ಭಾರತದ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಬೆದರಿಕೆ ಒಡ್ಡಿದರು. ಐರೋಪ್ಯ ರಾಷ್ಟ್ರಗಳು ಹಾಗೂ ದಕ್ಷಿಣ ಜಗತ್ತಿನ ರಾಷ್ಟ್ರಗಳ ಜೊತೆಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವತ್ತ ಭಾರತ ಹೆಜ್ಜೆ ಇರಿಸಿತು. ಚೀನಾದ ಜೊತೆಗೆ ಸಂಬಂಧ ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಮುಂದಡಿಯಿಟ್ಟಿತು.

ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯ ಬಳಿಕ ಪಾಕಿಸ್ತಾನದ ವಿರುದ್ಧ ಭಾರತ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಆರಂಭಿಸಿದಾಗ, ಶಾಂತಿ ಸ್ಥಾಪಕನಾಗಬೇಕೆಂಬ ಆಸೆ ಟ್ರಂಪ್ ಅವರಲ್ಲಿ ಗರಿಗೆದರಿತು. ಟ್ರಂಪ್ ಮಧ್ಯಸ್ಥಿಕೆಗೆ ಪಾಕಿಸ್ತಾನ ದುಂಬಾಲು ಬಿತ್ತು. ಕದನ ವಿರಾಮ ಘೋಷಣೆಯಾದಾಗ ಟ್ರಂಪ್, ಜಾಗತಿಕ ವೇದಿಕೆಗಳಲ್ಲಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರಿಗೆ ಶ್ವೇತಭವನದಲ್ಲಿ ಸತ್ಕಾರ ಏರ್ಪಟ್ಟಿತು. ಪಾಕಿಸ್ತಾನ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ದೊರೆಯಬೇಕು ಎಂದಿತು. ಕಳೆದ ವಾರ ಸಂಸತ್ತಿನಲ್ಲಿ ಮಾತನಾಡಿದ ಪ್ರಧಾನಿ ಮೋದಿ 'ಜಗತ್ತಿನ ಯಾವುದೇ ನಾಯಕನೂ ಸಿಂಧೂರ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಕೇಳಲಿಲ್ಲ' ಎಂದರು. ಮರುದಿನವೇ ಟ್ರಂಪ್ ಭಾರತದ ವಿರುದ್ಧ ಮಾತನಾಡಿದರು. ಭಾರತದ ಆರ್ಥಿಕತೆ ನಿಸ್ತೇಜ ಎಂದರು. ಪಾಕಿಸ್ತಾನದ ಕುರಿತು ಪ್ರೀತಿ ವ್ಯಕ್ತಪಡಿಸಿದರು.

ಟ್ರಂಪ್ ಅವರ ಪಾಕಿಸ್ತಾನ ಪ್ರೀತಿಗೆ ಇತರ ಕಾರಣಗಳೂ ಇವೆ. ಕೆಲವು ತಿಂಗಳುಗಳ ಹಿಂದೆ ಅಮೆರಿಕ ಬೆನ್ನತ್ತಿದ್ದ ಕೆಲವು ಉಗ್ರರನ್ನು ಪಾಕಿಸ್ತಾನ ಅಮೆರಿಕಕ್ಕೆ ಹಸ್ತಾಂತರಿಸಿದೆ. ಕ್ರಿಪ್ಟೊ ಕರೆನ್ಸಿ ವಿಷಯದಲ್ಲಿ ಟ್ರಂಪ್ ಅವರ ಕುಟುಂಬದ ಒಡೆತನದ 'ವರ್ಲ್ಡ್ ಲಿಬರ್ಟಿ ಫೈನಾನ್ಶಿಯಲ್' ಜೊತೆಗೆ ಪಾಕಿಸ್ತಾನ ಒಪ್ಪಂದ ಮಾಡಿಕೊಂಡಿದೆ. ಹಾಗಾಗಿ ಟ್ರಂಪ್, ಅಮೆರಿಕ ಮತ್ತು ಪಾಕಿಸ್ತಾನ ಜಂಟಿಯಾಗಿ ಪಾಕಿಸ್ತಾನದಲ್ಲಿನ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಗೊಳಿಸಲಿವೆ ಎಂದಿದ್ದಾರೆ. ಮರುದಿನವೇ ಬಲೂಚಿಸ್ತಾನದ ನಾಯಕರು ತೈಲ ನಿಕ್ಷೇಪ ಹಾಗೂ ಖನಿಜ ಸಂಪತ್ತು ಇರುವುದು ಬಲೂಚಿಸ್ತಾನದಲ್ಲಿ, ಪಾಕಿಸ್ತಾನದಲ್ಲಲ್ಲ; ಚೀನಾ, ಪಾಕಿಸ್ತಾನ ಅಥವಾ ಇನ್ನಾವುದೇ ರಾಷ್ಟ್ರ ಬಲೂಚಿಸ್ತಾನದ ಸಂಪತ್ತನ್ನು ಲೂಟಿ ಮಾಡಲು ಬಿಡುವುದಿಲ್ಲ ಎಂದಿದ್ದಾರೆ.

ಭಾರತ ಈಗಾಗಲೇ ಜಗತ್ತಿನ ಬಲಿಷ್ಠ ಆರ್ಥಿಕತೆಗಳ ಪೈಕಿ ನಾಲ್ಕನೆಯ ಸ್ಥಾನದಲ್ಲಿದೆ. ವಾಜಪೇಯಿ ಅವರ ಅವಧಿಯಲ್ಲಿ ಭಾರತ ಪೋಕ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ, ಇದೇ ಅಮೆರಿಕ ಭಾರತದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತ್ತು. ಆ ದಿಗ್ಬಂಧನವನ್ನು ಭಾರತ ದಿಟ್ಟವಾಗಿ ಎದುರಿಸಿ ಎದ್ದುನಿಂತಿತು. ಹಾಗಾಗಿ ಟ್ರಂಪ್ ಅವರ ತೆರಿಗೆ ಹೆಚ್ಚಿಸುವ ಅಸ್ತ್ರಕ್ಕೆ ಭಾರತ ಸುಲಭವಾಗಿ ಮಣಿಯಬೇಕಿಲ್ಲ.

ಮುಖ್ಯವಾಗಿ ನೊಬೆಲ್ ಪ್ರಶಸ್ತಿಯ ಕನಸು ಟ್ರಂಪ್ ತಲೆಹೊಕ್ಕಿದೆ. 'ಥಾಯ್ಲೆಂಡ್ ಹಾಗೂ ಕಾಂಬೋಡಿಯಾ, ಇಸ್ರೇಲ್ ಮತ್ತು ಇರಾನ್, ರವಾಂಡ ಹಾಗೂ ಕಾಂಗೋ, ಸರ್ಬಿಯಾ ಮತ್ತು ಕೊಸೊವೊ, ಭಾರತ ಹಾಗೂ ಪಾಕಿಸ್ತಾನ, ಈಜಿಪ್ಟ್ ಹಾಗೂ ಇಥಿಯೋಪಿಯಾ ನಡುವಿನ ಬಿಕ್ಕಟ್ಟನ್ನು ಟ್ರಂಪ್ ಅಂತ್ಯಗೊಳಿಸಿದ್ದಾರೆ. ಅಧಿಕಾರ ವಹಿಸಿಕೊಂಡ 6 ತಿಂಗಳ ಅವಧಿಯಲ್ಲಿ ತಿಂಗಳಿಗೊಂದು ಶಾಂತಿ ಒಪ್ಪಂದ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ನಡೆದಿದೆ' ಎಂದು ಶ್ವೇತಭವನ ಹೇಳಿದೆ. ನೊಬೆಲ್ ಪಾರಿತೋಷಕ, ಕ್ರಿಪ್ಟೊ ಕರೆನ್ಸಿ, ತೈಲ ಮತ್ತು ಖನಿಜ ಒಪ್ಪಂದಗಳ ಮೂಲಕ ಟ್ರಂಪ್ ಅವರನ್ನು ಮರುಳು ಮಾಡಲು ಪಾಕಿಸ್ತಾನ ಯತ್ನಿಸುತ್ತಿದೆ. ಇರುಳು ಕಂಡ ಬಾವಿಯಲ್ಲಿ ಟ್ರಂಪ್ ಹಗಲಿನಲ್ಲಿ ಬಿದ್ದರೆ, ಇತಿಹಾಸ ಅವರನ್ನು ಮೂರ್ಖ ನಾಯಕರ ಸಾಲಿಗೆ ಸೇರಿಸುತ್ತದೆ.



ವಾಚಕರ ವಾಣಿ

ಯುವ ದಸರಾ: ದುಂದುವೆಚ್ಚ ಬೇಕೆ?

'ಯುವ ದಸರಾ' ಹೆಸರಿನಲ್ಲಿ ಸರ್ಕಾರವು ಕೋಟ್ಯಂತರ ರೂಪಾಯಿ ವ್ಯಯಿಸುತ್ತದೆ. ಆದರೆ, ಕಾರ್ಯಕ್ರಮದಲ್ಲಿ ಕನ್ನಡದ ಪ್ರತಿಭೆಗಳು ನಗಣ್ಯ. ಅದ್ದೂರಿ ಮನರಂಜನೆ ನೆಪದಲ್ಲಿ ಹೊರಗಿನ ಕಲಾವಿದರಿಗೆ ಮಣೆ ಹಾಕಲಾಗುತ್ತದೆ. ಒಂದೆರಡು ಗಂಟೆ ಕಾರ್ಯಕ್ರಮ ನೀಡುವ ಅವರಿಗೆ ದುಬಾರಿ ಸಂಭಾವನೆ ನೀಡಲಾಗುತ್ತದೆ. ಜೊತೆಗೆ, ಐಷಾರಾಮಿ ವಸತಿ ಸೌಕರ್ಯ ಕಲ್ಪಿಸಲಾಗುತ್ತದೆ. ಕಾರ್ಯಕ್ರಮದ ದಿನದಂದು ಸಂಚಾರ ದಟ್ಟಣೆ, ಕಳ್ಳಕಾಕರು, ಪುಂಡರ ದಾಂದಲೆಗೆ ಕೊನೆ ಎಂಬುದಿಲ್ಲ. ನಾಗರಿಕರ ತೆರಿಗೆ ಹಣವನ್ನು ದುಂದುವೆಚ್ಚ ಮಾಡುವ ಇಂತಹ ಕಾರ್ಯಕ್ರಮದ ಔಚಿತ್ಯವಾದರೂ ಏನು?

ಎನ್.ಕೆ. ಸ್ವಾಮಿ, ಬೆಂಗಳೂರು

ಬೋರ್ಡೊ ದ್ರಾವಣವೇ ಪರಿಹಾರ

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬೆಳೆಗಳಿಗೆ ಕೊಳೆರೋಗ, ಕೀಟ ಬಾಧೆ ಕಾಣಿಸಿಕೊಂಡಿದೆ (ಪ್ರ.ವಾ., ಆಗಸ್ಟ್ 7). ಕೃಷಿ ಇಲಾಖೆಯ ಪ್ರಥಮ ನಿರ್ದೇಶಕರಾಗಿದ್ದ ಡಾ. ಲೆಸ್ಲಿ ಕೋಲ್ಮನ್ ಅವರು, 100 ವರ್ಷಗಳ ಹಿಂದೆಯೇ ರೈತರ ಹೊಲಗಳಿಗೆ ತೆರಳಿ ಕೊಳೆರೋಗಕ್ಕೆ ರಾಮಬಾಣವಾದ ಬೋರ್ಡೊ ದ್ರಾವಣ ತಯಾರಿಕೆಯ ಬಗ್ಗೆ ತರಬೇತಿ ನೀಡಿದ್ದರು. ರೈತರೇ ಸುಲಭವಾಗಿ ಈ ದ್ರಾವಣವನ್ನು ತಯಾರಿಸಬಹುದು. ಮೊದಲಿಗೆ ಒಂದು ಕೆ.ಜಿ ಮೈಲುತುತ್ತವನ್ನು 10 ಲೀಟರ್ ನೀರಿನಲ್ಲಿ ಕರಗಿಸಬೇಕು. ಮತ್ತೊಂದು ಪಾತ್ರೆಯಲ್ಲಿ ಒಂದು ಕೆ.ಜಿ ಸುಣ್ಣವನ್ನು ಕರಗಿಸಿ ಮೈಲುತುತ್ತ ದ್ರಾವಣವನ್ನು ಆ ಸುಣ್ಣದ ನೀರಿಗೆ ಸೇರಿಸಬೇಕು. ನಂತರ ಅದಕ್ಕೆ 80 ಲೀಟರ್ ನೀರು ಸೇರಿಸಿದರೆ, ಶೇ 1ರಷ್ಟು ಬೋರ್ಡೊ ದ್ರಾವಣ ಸಿದ್ಧವಾಗುತ್ತದೆ.

ಎಚ್.ಆರ್. ಪ್ರಕಾಶ್, ಮಂಡ್ಯ

> **ಮೊರೆ**
>
> ಅಂಕೆಯಿರದ ಅಮೆರಿಕದ
> ಸುಂಕದೇಟು ತಡೆದುಕೊಂಡು
> ಅಂಕುಶವನ್ನಿಡಲು ಅದಕೆ
> ಕೊಂಕದಂಥ ಶಕ್ತಿ ನಮಗೆ
> ಶಂಕೆಯಿರದೆ ನೀಡಿ ನೀನು
> ಪೊರೆ ನಮ್ಮನು ಮಾತೆಯೇ,
> ವರಮಹಾಲಕ್ಷ್ಮಿಯೇ.
>
> **ಎಚ್. ಆನಂದರಾಮ ಶಾಸ್ತ್ರೀ**

ಹಬ್ಬ ಆರ್ಥಿಕ ಹೊರೆಯಾಗದಿರಲಿ

'ಹೊಸ ಹಬ್ಬ–ವ್ರತಗಳು ಬೇಕೆ?' ಲೇಖನವು (ಲೇ: ಹೆಚ್.ಆರ್. ಸುಜಾತಾ) ಚಿಂತನಾರ್ಹವಾಗಿದೆ. ಕುಟುಂಬದೊಂದಿಗೆ ಆಚರಿಸುವ ಹಬ್ಬಗಳು ನಮ್ಮ ಸಂಸ್ಕೃತಿಯ ಭಾಗ. ಅವು ಜೀವನದಲ್ಲಿ ಸಂಭ್ರಮ ತರುತ್ತವೆ. ಜನರು ಒಟ್ಟಾಗಿ ಸೇರಿ ಹಬ್ಬ ಆಚರಿಸುವುದರಿಂದ ಸಂಬಂಧಗಳು ಗಟ್ಟಿಯಾಗುತ್ತವೆ. ಇತ್ತೀಚೆಗೆ ಕೆಲ ಹಬ್ಬಗಳು ಪ್ರತಿಷ್ಠೆಯ ಲೇಪನ ಅಂಟಿಸಿಕೊಂಡಿವೆ. ಮಹಿಳೆಯರ ವ್ರತಗಳಿಗಾಗಿಯೇ ಸೀಮಿತವಾಗಿರುವ ಕೆಲ ಹಬ್ಬಗಳು ಕೌಟುಂಬಿಕ ಹಬ್ಬಗಳಾಗಿ ಮಾರ್ಪಟ್ಟಿವೆ. ಆರ್ಥಿಕವಾಗಿಯೂ ಹೊರೆಯಾಗಿವೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

'ಕೋಮುದ್ವೇಷ' ಅಧಿಕಾರದ ಕಾಮಧೇನು!

2026ರಲ್ಲಿ ನಡೆಯುವ ಅಸ್ಸಾಂ ವಿಧಾನಸಭಾ ಚುನಾವಣೆಗೆ ಮುನ್ನುಡಿಯಾಗಿ ಅಲ್ಪಸಂಖ್ಯಾತರ ಕೃಷಿ ಭೂಮಿಯನ್ನು ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಕಿತ್ತುಕೊಳ್ಳಲು ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ನೇತೃತ್ವದ ಸರ್ಕಾರ ಮುಂದಾಗಿರುವುದು ಅಮಾನವೀಯ. ಈ ಕುರಿತ ಸಂಪಾದಕೀಯ ಸಕಾಲಿಕವಾಗಿದೆ (ಪ್ರ.ವಾ., ಆಗಸ್ಟ್ 7). ಇತ್ತೀಚೆಗೆ ಅಲ್ಪಸಂಖ್ಯಾತರ ಮೇಲೆ ಐತಿಹಾಸಿಕ ಕಾರಣ ಹೊರಿಸಿ, ಬಹುಸಂಖ್ಯಾತರಲ್ಲಿ ಅವರ ಮೇಲೆ ದ್ವೇಷ ಮೂಡಿಸುವಂತಹ ವಾತಾವರಣ ಸೃಷ್ಟಿಸುವುದು ಸರಳ ಮತ್ತು ಯಶಸ್ವಿ ಪ್ರಯೋಗ ಆಗಿದೆ. ಆಯಾ ಜಾತಿಯ ಮತಗಳನ್ನು ಧ್ರುವೀಕರಿಸಲು 'ಕೋಮುದ್ವೇಷ'ವು ಅಧಿಕಾರ ಕೊಡಿಸುವ ಕಾಮಧೇನುವಾಗಿರುವುದು ದುರದೃಷ್ಟಕರ.

ತಿರುಪತಿ ನಾಯಕ್, ಕಲಬುರಗಿ

ಸಿ.ಎಂ ಸರ್ಕಾರಿ ಚಿಕಿತ್ಸೆ ಪಡೆಯಲಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿ, ರೋಗಿಗಳ ಕಷ್ಟವನ್ನು ಆಲಿಸಿದ್ದಾರೆ. ಜೊತೆಗೆ, ಅವರಿಗೆ ನೀಡುವ ಊಟವನ್ನೂ ಸೇವಿಸಿ ಅದರ ಗುಣಮಟ್ಟ ಪರೀಕ್ಷಿಸಿರುವುದು ಒಳ್ಳೆಯ ಬೆಳವಣಿಗೆ. ಇದೇ ರೀತಿ ಮುಖ್ಯಮಂತ್ರಿ ಅವರು ನಿಯಮಿತ ಆರೋಗ್ಯ ತಪಾಸಣೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿಯೇ ಮಾಡಿಸಿಕೊಂಡರೆ ಸರ್ಕಾರಿ ಆಸ್ಪತ್ರೆಗಳು ಜಾಗೃತವಾಗುತ್ತವೆ. ಜನರಲ್ಲಿ ಆಸ್ಪತ್ರೆಗಳ ಮೇಲೆ ನಂಬಿಕೆ ಬಲಗೊಳ್ಳುತ್ತದೆ. ನಿಮ್ಮಿಂದ ಪ್ರೇರಣೆ ಪಡೆದ ಸಚಿವರು, ಶಾಸಕರು, ಸಂಸದರು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಲು ಆರಂಭಿಸಿದರೆ ಸರ್ಕಾರಿ ಆಸ್ಪತ್ರೆಗಳಿಗೆ ಕಾಯಕಲ್ಪ ನೀಡಿದಂತಾಗುತ್ತದೆ. ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ತಮ್ಮ ಕೊನೆಯ ದಿನಗಳಲ್ಲಿ ಬೆಂಗಳೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಅಂದಿನ ಸರ್ಕಾರ ಅವರನ್ನು ಸುಸಜ್ಜಿತ ಖಾಸಗಿ ಆಸ್ಪತ್ರೆಗೆ ಸೇರಿಸಲು ಮುಂದಾದರೂ, ಅದನ್ನು ನಯವಾಗಿ ತಿರಸ್ಕರಿಸಿದ್ದರು.


ಕೃ.ಪ. ಗಣೇಶ, ಹೆಗ್ಗಡದೇವನಕೋಟೆ

ನಾಲ್ವಡಿ ಆಡಳಿತ ಇಂದಿಗೂ ಮಾದರಿ

'ನಾಲ್ವಡಿ: ಕನ್ನಡಿಗರ ವೈರಮುಡಿ' ಲೇಖನವು (ಲೇ: ವೈ.ಎಸ್.ವಿ. ದತ್ತ, ಪ್ರ.ವಾ., ಆಗಸ್ಟ್ 7) ಮನನೀಯವಾಗಿದೆ. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ನೀತಿಯು ಇಂದಿನ ಆಳುವ ವರ್ಗಕ್ಕೆ ಮಾದರಿಯಾಗಿದೆ. ಅವರ ಆಡಳಿತದ ಅವಧಿಯು ಬಲು ಕ್ಲಿಷ್ಟಕರ ಹಾಗೂ ಸಂದಿಗ್ಧತೆಯಿಂದ ಕೂಡಿತ್ತು. ಕಾಲದ ಪರಿಸ್ಥಿತಿಯ ಪರಿವೆಯೇ ಇಲ್ಲದೆ ಕೆಲವರು ನಾಲ್ವಡಿ ಅವರನ್ನು ಪದೇ ಪದೇ ದೂಷಿಸುವುದು ಮತ್ತು ಅವರಿಗಿಂತ ಈಗಿನ ಆಡಳಿತ ಸೂತ್ರ ಹಿಡಿದಿರುವವರೇ ಉತ್ತಮ ಎಂದು ಹೇಳುವುದು ಸರಿಯಲ್ಲ.

ರಮೇಶ್, ಬೆಂಗಳೂರು

ಚುರುಮುರಿ



'ದರ ಮಹಾಲಕ್ಷ್ಮೀ' ವ್ರತ!

• ಚಂದ್ರಕಾಂತ ವಡ್ಡು

ಮಡಿಚಿದ ದಿನಪತ್ರಿಕೆ ಹಿಡಿದು ಬೈಟು ಬಳಗಕ್ಕೆ ಜೊತೆಯಾದ ತಿಂಗಳೇಶ.

'ಪೇಪರಿನಲ್ಲಿ ಇವತ್ತಿನ ವಿಶೇಷ ಏನಪ್ಪಾ...' ಎನ್ನುತ್ತಾ ಕೈಚಾಚಿದ ಬದ್ರಿ.

'ನಮ್ಮ ಸಮುದಾಯದಲ್ಲಿ ಯಾರಾದರೂ 'ಕೊಂಡು ಓದುಗ' ಅಂತ ಇದ್ರೆ... ಅದು ನಮ್ಮೆಲ್ಲರ ಹೆಮ್ಮೆಯ ಬದ್ರಿಮಾಮಾ ಮಾತ್ರ...' ಎಂದು ಘಂಟಾಘೋಷವಾಗಿ ಕೂಗಿದ ಪ್ರಕಾಶಿ, ಚಪ್ಪಾಳೆಗಾಗಿ ಕಾದ.

'ಖರೀದಿಸಿಯೋ ಕಡ ಪಡೆದೋ... ಒಟ್ಟಿನಲ್ಲಿ 'ಕೊಂಡು' ಓದಿದರೆ ಸಾಕು ಎಂದು ಹೇಳಲು ನಾನು ಇಷ್ಟಪಡುತ್ತೇನೆ...' ರಾಜಣ್ಣ ಬಾಯಿ ಹಾಕಿದ. ಎಲ್ಲರ ಉದ್ದೇಶ ಒಂದೇ; ಬದ್ರಿಯನ್ನು 'ಉದ್ರಿ ಓದುಗ' ಎಂದು ನಿರೂಪಿಸುವುದು.

'ಶ್ರಾವಣ ಮಾಸದಲ್ಲಿ ಅದೇನಪ್ಪಾ ಮಹಾ ಸುದ್ದಿಗಳು ಇರುತ್ತವೆ? ಅವೇ– ಹಬ್ಬದ ಸಡಗರ, ಹೂವು– ಹಣ್ಣು ಖರೀದಿಗೆ ಮುಗಿಬಿದ್ದ ಭಕ್ತಸಾಗರ, ದರ ಏರಿದರೂ ಕುಗ್ಗದ ಸಂಭ್ರಮ... ಇವನ್ನು ಓದಲು ಪತ್ರಿಕೆ ಕೊಳ್ಳಬೇಕೆ? ನಾನಷ್ಟು ಮೂರ್ಖನಲ್ಲ' ಬದ್ರಿಯ ಸಮರ್ಥನೆ ಕೇಳಿ ತಿಂಗಳೇಶ ಹೆಗಲು ಮುಟ್ಟಿಕೊಂಡ.

'ಸ್ಥಳದಲ್ಲಿ ಎಷ್ಟು ಗುಂಡಿ ಅಗೆದರು, ಎಷ್ಟು ಮೂಳೆ ತೆಗೆದರು ಎಂಬ ಕುತೂಹಲವೂ ನಿನಗಿಲ್ಲವೇ?'

'ಹೋಗಲಿ, ಮೋದಿ ಮಾಮಾ ಮಾತು ಕೇಳಲಿಲ್ಲ ಅಂತ ಟ್ರಂಪ್ ಅಂಕಲ್ ಸುಂಕ ಏರಿಸಿದ್ದಾದರೂ ಬಿಸಿ ಸುದ್ದಿಯಲ್ಲವೇ?'

'ಅಮೆರಿಕ ಅಧ್ಯಕ್ಷ ಒಳ್ಳೇ ಕೆಲಸ ಮಾಡಿದ್ದಾರೆ. ಈಗಲಾದರೂ ಭಾರತದ ಪ್ರಧಾನಿಗೆ ನಾವು ಅನುಭವಿಸುತ್ತಿರುವ ಜಿಎಸ್‌ಟಿ ಭಾರದ ಅರಿವಾಗಲಿ' ಬದ್ರಿ ಅಸಲಿ ಸುದ್ದಿಗೆ ಬಂದ.

'ಇದು ಎ.ಐ ಯುಗ. ಹೊಸದಾಗಿ 'ದರ ಮಹಾಲಕ್ಷ್ಮೀ' ವ್ರತ ಆರಂಭಿಸಿದರೆ ಜಿಎಸ್‌ಟಿ ಭಾರ ಇಳಿಯಬಹುದೇನೋ...'

'ಇದಕ್ಕೆ ಪ್ರತಿಯಾಗಿ ಸರ್ಕಾರ 'ಕರ ಮಹಾಲಕ್ಷ್ಮೀ' ಪೂಜೆ ನಡೆಸಿದರೆ ಕರದಾತರಿಗೆ ಇನ್ನೂ ಕಷ್ಟ'.

'ನಾವು 'ಸುಂಕಷ್ಟಹರಣ' ಗಣಪನನ್ನು ಕೂಡಿಸೋಣ ಬಿಡಿ' ತಿಂಗಳೇಶ ತೀರ್ಪು ನೀಡಿದ!

ಸಂಗತ

ಮುದುಡದಿರಲಿ ಮೊಗ್ಗಿನ ಮನಸು

ಮಕ್ಕಳ ಮನಸ್ಸು ಬಹು ಸೂಕ್ಷ್ಮ. ಸಣ್ಣ ಕಂಪನದಿಂದಲೂ ಗಾಸಿಗೊಳ್ಳಬಲ್ಲದು. ಮಕ್ಕಳ ಮನಸ್ಸನ್ನು ಸ್ವಸ್ಥವಾಗಿ ಇರಿಸುವುದು ಎಲ್ಲರ ಹೊಣೆಗಾರಿಕೆಯಾಗಿದೆ.

• ಸದಾಶಿವ ಸೊರಟೂರು

ಏಳನೇ ತರಗತಿಯ ಬಾಲಕನೊಬ್ಬ ಬದುಕು ಬೇಡವೆಂದು ಎದ್ದು ಹೋದ ಘಟನೆಯೊಂದು ಮನಸ್ಸನ್ನು ತೀವ್ರವಾಗಿ ಕಲಕಿತು. ಬದುಕು ಎಂದರೇನು? ಜೀವ ಎಂದರೇನು? ಎಂಬುದನ್ನೂ ಅರಿಯದ ಹುಡುಗ ಬರೆದಿಟ್ಟ ಮರಣ ಪತ್ರದ ಸಾಲುಗಳನ್ನು ನೋಡಿ ಇನ್ನೂ ಕಂಗಾಲಾದೆ. ಸ್ವಚ್ಛಗಣ್ಣಿನ ಸಣ್ಣ ಮಕ್ಕಳ ಕಣ್ಣುಗಳಲ್ಲೇಕೆ ಸಾವು ಹಾಗೂ ಕೇಡಿನ ನೆರಳು?

ಇಲ್ಲೊಬ್ಬ ಹತ್ತನೇ ತರಗತಿ ಬಾಲಕ ತನಗೆ ಇಂಗ್ಲಿಷ್ ಕಷ್ಟವೆಂದು ಮನೆಬಿಟ್ಟು ಹೋದ. ಅಮ್ಮ ಗದರಿದರು ಅಂತ ಬಾಲಕಿಯೊಬ್ಬಳು ಊಟ, ನೀರು ಬಿಟ್ಟು ಸಾಯುವ ಬೆದರಿಕೆ ಹಾಕಿದಳು. ಮಕ್ಕಳ ಮನಸ್ಸೇಕೆ ಇಷ್ಟೊಂದು ಸೂಕ್ಷ್ಮವಾಗುತ್ತಿದೆ? ಕೃತಕ ಬುದ್ಧಿಮತ್ತೆ ಒಂದೇ ನಿಮಿಷದಲ್ಲಿ ಏನೆಲ್ಲವನ್ನೂ ಮಾಡಬಲ್ಲದು ಎನ್ನುವುದು ಈ ಕಾಲದ ಅಹಂಕಾರ. ಅದೇ ಒಂದು ನಿಮಿಷದಲ್ಲಿ ಎಂತಹ ಒಳ್ಳೆಯ ಮಕ್ಕಳೂ ದುಡುಕಿಬಿಡುತ್ತಾರೆ ಎಂಬುದು ನಮ್ಮ ದೊಡ್ಡ ಸೋಲು.

ಒಂದು ಸಿನಿಮಾ, ಒಂದು ವಿಡಿಯೊ ಗೇಮ್, ಹೆತ್ತವರ ಒಂದು ಗದರಿಕೆ, ನಾಲ್ಕಾರು ವಿಡಿಯೊಗಳು, ಪರೀಕ್ಷೆಯ ಭಯ, ದೇಹದಲ್ಲಿನ ಬದಲಾವಣೆಯ ಗೊಂದಲ, ಭೀತಿ, ಆಕರ್ಷಣೆ, ಪೋಷಕರ ಒತ್ತಡ, ಸಮಾಜದ ನಿರೀಕ್ಷೆಗಳು– ಮಗುವಿನ ಮನಸ್ಸಿನೊಳಗೆ ದ್ವಂದ್ವಗಳ ಬಿರುಗಾಳಿ ಎಬ್ಬಿಸಲು ಇರುವ ಕಾರಣಗಳು ಒಂದೆರಡಲ್ಲ. ತಾತ್ಪರ್ಯ ಇಷ್ಟೇ: ಮಕ್ಕಳ ಮಾನಸ ಸರೋವರದಲ್ಲಿ ಕಂಪನಗಳು ಎದ್ದಿವೆ ಹಾಗೂ ಆ ಕಂಪನಗಳು ಗಂಭೀರ ಸ್ವರೂಪ ಹೊಂದಿವೆ.

ಸಣ್ಣಪುಟ್ಟ ಒತ್ತಡಕ್ಕೂ ಮಕ್ಕಳು ಸ್ಫೋಟಗೊಳ್ಳುತ್ತಿದ್ದಾರೆ. ಮನೆ ಬಿಟ್ಟು ಹೋಗುತ್ತಿದ್ದಾರೆ. ಆಕ್ರಮಣ ಮನಃಸ್ಥಿತಿ ಪ್ರದರ್ಶಿಸುತ್ತಿದ್ದಾರೆ. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಇತ್ತೀಚೆಗೆ ನೀಡಿದ ವರದಿಯಲ್ಲಿ ಮಕ್ಕಳಲೋಕದ ಕುರಿತಾಗಿ ಅಚ್ಚರಿಯ ವಿಷಯಗಳು ಹೊರಬಿದ್ದಿವೆ. ಬಹಳಷ್ಟು ವಿದ್ಯಾರ್ಥಿಗಳಲ್ಲಿ ದೈಹಿಕ ಹಾಗೂ ಮಾನಸಿಕ ಅಸಹಜ ಬೆಳವಣಿಗೆಗಳು ಕಂಡು ಬಂದಿವೆ.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳು ಹೆಚ್ಚಳವಾಗಿರುವುದು ಕಳವಳದ ಸಂಗತಿ. ಅದಕ್ಕೆ ಸಾಕಷ್ಟು ಕಾರಣಗಳೂ ಇವೆ. ಮಿತಿಮೀರಿದ ಮೊಬೈಲ್ ಬಳಕೆ, ಆಧುನಿಕ ಶಿಕ್ಷಣದ ಒತ್ತಡ, ಸ್ಪರ್ಧಾತ್ಮಕತೆಯ ಸವಾಲುಗಳು ಹಾಗೂ ಸಾಮಾಜಿಕ ಬೆಂಬಲದ ಕೊರತೆಯಂತಹ ಕಾರಣಗಳಿಂದ ಮಕ್ಕಳ ಮನಸ್ಸು ಕುಗ್ಗುತ್ತಿದೆ. ಮಾನಸಿಕ ಕುಸಿತಕ್ಕೆ ಒಳಗಾದ ಕೆಲವರು ಆತ್ಮಹತ್ಯೆಯ ದಾರಿ ಹಿಡಿಯುತ್ತಿರುವುದರ ಬಗ್ಗೆ ಸುಪ್ರೀಂ ಕೋರ್ಟ್ ಆತಂಕ ವ್ಯಕ್ತಪಡಿಸಿದೆ; ಇದೊಂದು 'ವ್ಯವಸ್ಥಿತ ವೈಫಲ್ಯ' ಎಂದು ವ್ಯಾಖ್ಯಾನಿಸಿದೆ.



ಮಗುವಿಗೆ ಜ್ವರ ಬಂದರೆ ಕಾಳಜಿ ಮಾಡುತ್ತೇವೆ. ಗಾಯವಾದರೆ ಆತಂಕಕ್ಕೆ ಒಳಗಾಗುತ್ತೇವೆ. ಆದರೆ, ಮನಸ್ಸು ಕೂಡ ಹುಷಾರು ತಪ್ಪುತ್ತದೆ ಎಂಬುದರ ಅರಿವಾಗುತ್ತಿಲ್ಲ ನಮಗೆ. ಮನಸ್ಸಿಗೂ ಗಾಯವಾಗುತ್ತದೆ, ಬಳಲುತ್ತದೆ, ಪ್ರಭಾವಕ್ಕೆ ಒಳಗಾಗುತ್ತದೆ, ಸೋಲುತ್ತದೆ, ನೋವು ತಿನ್ನುತ್ತದೆ. ಜ್ವರಕ್ಕೆ ಔಷಧ ಕೊಟ್ಟಂತೆ ಮನಸ್ಸಿಗೂ ಮದ್ದು ನೀಡಬೇಕಾಗುತ್ತದೆ.

ವಯಸ್ಕರಿಗೂ ತಮ್ಮ ಮಾನಸಿಕ ತುಮುಲಗಳ ಬಗ್ಗೆ ಅರಿವಿಲ್ಲದ ಸಾಮಾಜಿಕ ಸಂದರ್ಭ ನಮ್ಮದಾಗಿರುವಾಗ, ಮಕ್ಕಳ ಮನೋಲೋಕದ ಬಗ್ಗೆ ಯೋಚಿಸುವವರು ಕಡಿಮೆ. ಈ ಉದಾಸೀನ ಸರಿಯಲ್ಲ. ಬೆಳೆಯಬೇಕಾದ ಮಕ್ಕಳು, ನಾಳೆ ಸಮಾಜಕ್ಕೆ ಆಸ್ತಿಯಾಗಬೇಕಾದ ಮಕ್ಕಳು, ಅನಾರೋಗ್ಯಕರ ಮೈ ಮನಸ್ಸು ಇಟ್ಟುಕೊಂಡರೆ ಹೇಗೆ?

ಮಗು ಅನೇಕ ಕಾರಣಗಳಿಂದ ಮಾನಸಿಕ ಸಮಸ್ಯೆಯಿಂದ ಬಳಲಬಹುದು. ಒಳ್ಳೆಯ ಶಾಲೆ, ಒಳ್ಳೆಯ ಬಟ್ಟೆ, ಒಳ್ಳೆಯ ಆಹಾರದಂತೆ, ಉತ್ತಮ ಮಾನಸಿಕ ಆರೋಗ್ಯ ಹೊಂದುವುದೂ ಎಲ್ಲ ಮಕ್ಕಳ ಹಕ್ಕಾಗಬೇಕು. ಒಂದು ತೀವ್ರ ಜ್ವರ ಗಾಬರಿಗೊಳಿಸಿದಷ್ಟೇ ಮಕ್ಕಳ ಬೇಸರ, ಸಿಟ್ಟು, ಖಿನ್ನತೆ ನಮ್ಮನ್ನು ಆತಂಕಕ್ಕೀಡು ಮಾಡಬೇಕು.

ಶಾಲೆಗಳಲ್ಲಿ ವರ್ಷಕ್ಕೆ ಒಮ್ಮೆಯಾದರೂ ಮಕ್ಕಳಿಗೆ ಮನೋವೈದ್ಯರಿಂದ ಆಪ್ತಸಲಹೆ ರೀತಿಯ ಕಾರ್ಯಕ್ರಮಗಳನ್ನು ಯೋಜಿಸಬೇಕು. ಮಗು ಯಾರ ಬಳಿಯೂ ಹೇಳಿಕೊಳ್ಳದೆ ತಾನು ಅನುಭವಿಸುತ್ತಿರುವ ಮಾನಸಿಕ ಸಂಕಟಗಳನ್ನು ವೈದ್ಯರ ಮುಂದೆ ಹೇಳಿಕೊಳ್ಳಲು ಅನುಕೂಲವಾಗುತ್ತದೆ. ಎಲ್ಲ ಸಂಗತಿಗಳನ್ನೂ ಗೆಳೆಯರ ಮುಂದೆ, ಶಿಕ್ಷಕರ ಮುಂದೆ, ಪೋಷಕರ ಮುಂದೆ ಹೇಳಿಕೊಳ್ಳಲಾಗದು. ಮನೋವೈದ್ಯರು ಅವರದೇ ಆದ ತಂತ್ರದ ಮೂಲಕ ಮಗುವಿನ ಮನಸ್ಸನ್ನು ತಲುಪಬಲ್ಲರು.

ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಶಿಕ್ಷಕರೂ ಗಮನಹರಿಸಬೇಕು. ಮಗುವಿನ ಮಾನಸಿಕ ತೊಳಲಾಟದ ಲಕ್ಷಣಗಳನ್ನು ಗುರುತಿಸಿ, ಪೋಷಕರ ಗಮನಕ್ಕೆ ತರಬೇಕು. ಶಿಕ್ಷಕರನ್ನು ಈ ನಿಟ್ಟಿನಲ್ಲಿ ತರಬೇತುಗೊಳಿಸಬೇಕು.

ಉತ್ತಮ ಆರೋಗ್ಯವಂತ ಮಗು ನಾಳೆಯ ಸಮಾಜದ ಆಸ್ತಿ. ಉತ್ತಮ ಆರೋಗ್ಯವೆಂದರೆ, ದೈಹಿಕ ಕಾಯಿಲೆಗಳಿಂದಷ್ಟೇ ಮುಕ್ತವಾಗಿರುವುದಲ್ಲ; ಮಾನಸಿಕವಾಗಿ, ಭಾವನಾತ್ಮಕವಾಗಿ ಸದೃಢವಾಗಿರುವುದೂ ಕೂಡ. ಆರೋಗ್ಯವಂತ ಮಕ್ಕಳು ನಾಳೆಯ ಆರೋಗ್ಯಯುತ ಸಮಾಜದ ವಾರಸುದಾರರು.

ಕಾರಣ ಏನಾದರೂ ಇರಲಿ, ಮಕ್ಕಳ ಮಾನಸ ಸರೋವರಕ್ಕೆ ಕಲ್ಲಂತೂ ಬಿದ್ದಿದೆ. ಕೊಳಕ್ಕೆ ಕಲ್ಲು ಬಿದ್ದಾಗ ನೀರು ಕಲಕುವುದು ಸಹಜ. ನೀರನ್ನು ಯಥಾಸ್ಥಿತಿಗೆ ತರುವ ಸವಾಲನ್ನು ಪೋಷಕರು, ಶಿಕ್ಷಕರು ಹಾಗೂ ಸಮಾಜ ವಹಿಸಿಕೊಳ್ಳಬೇಕು. ಮಕ್ಕಳ ಆರೋಗ್ಯ; ದೇಶದ ಆರೋಗ್ಯ.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಂಗಾಂಗ ಕಸಿಯ ತಂತ್ರಜ್ಞಾನ ಜಗತ್ತಿನಾದ್ಯಂತ ಅನೇಕ ಜೀವಗಳನ್ನು ಉಳಿಸುತ್ತಿದೆ. ಆದಾಗ್ಯೂ, ಈ ವಲಯದಲ್ಲಿ ಕೆಲವು ಸಮಸ್ಯೆಗಳು, ಅಂತರಗಳು ಹಾಗೆಯೇ ಉಳಿದಿವೆ. ಜಗತ್ತಿನಾದ್ಯಂತ ಶೋಷಿತ ಜನಾಂಗಗಳು, ಸಮುದಾಯಗಳು, ವ್ಯಕ್ತಿಗಳು ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಮಟ್ಟದಲ್ಲಿರುವವರಿಗೆ ಅಂಗಾಂಗ ಕಸಿ ಸೌಲಭ್ಯ ಮತ್ತು ತಂತ್ರಜ್ಞಾನ ಅಲಭ್ಯವಾಗಿಯೇ ಉಳಿದಿದೆ. ಭಾರತದಲ್ಲಿಯೂ ಪುರುಷ–ಮಹಿಳೆ, ನಗರ–ಗ್ರಾಮೀಣ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಅಂತರ ಇರುವುದು 'ದಿ ಲ್ಯಾನ್ಸೆಟ್' ಅಧ್ಯಯನದಲ್ಲಿ ಕಂಡುಬಂದಿದೆ. ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು ಎಂದರೆ, ಅದಕ್ಕೆ ತಕ್ಕಂತೆ ನೀತಿ ನಿರೂಪಣೆ ಮಾಡಬೇಕು ಎಂದು ವರದಿ ಹೇಳಿದೆ

ಭಾರತದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿಯೇ ಹೆಚ್ಚು ಕಸಿ; ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ, ಸಂಪನ್ಮೂಲದ ಕೊರತೆ

ಅಂಗಾಂಗ ಕಸಿ ದುರ್ಬಲರಿಗೆ ದುರ್ಲಭ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.



17,000-18,000 ಭಾರತದಲ್ಲಿ ಪ್ರತಿ ವರ್ಷ ನಡೆಯುತ್ತಿರುವ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ

0.65 ಭಾರತದಲ್ಲಿ ಅಂಗಾಂಗ ಕಸಿಯ ದರ (ಪ್ರತಿ 10 ಲಕ್ಷ ಜನರಿಗೆ)

ಮಾನವದೇಹದ ಅಂಗಗಳನ್ನು ಸಂರಕ್ಷಿಸಿ ಇಡುವ ತಂತ್ರಜ್ಞಾನದಲ್ಲಿ ಪ್ರಗತಿ, ರೋಗನಿರೋಧಕ ಶಕ್ತಿಯ ಉತ್ತಮ ನಿರ್ವಹಣೆಯಿಂದ ಅಂಗಾಂಗ ದಾನ ವಲಯದಲ್ಲಿ ದೊಡ್ಡ ಮಟ್ಟದ, ಸಕಾರಾತ್ಮಕ ಬದಲಾವಣೆಗಳು ಘಟಿಸುತ್ತಿವೆ. ಆದರೆ, ಈ ಬೆಳವಣಿಗೆಗಳ ಫಲ ಎಲ್ಲರಿಗೂ ಸಮಾನವಾಗಿ ಸಿಗುತ್ತಿಲ್ಲ. ಈ ವಿಚಾರದಲ್ಲಿ ಪ್ರಾದೇಶಿಕ, ಆರ್ಥಿಕ ಹಾಗೂ ಸಾಮಾಜಿಕ ಅಂತರಗಳಿದ್ದು, ಅವನ್ನು ಹೋಗಲಾಡಿಸುವ ನೀತಿ ನಿರೂಪಣೆ ಮತ್ತು ಸಂಪನ್ಮೂಲಗಳ ಪೂರೈಕೆಯಲ್ಲಿ ಬದಲಾವಣೆ ಆಗಬೇಕಿದೆ ಎಂದು 'ದಿ ಲ್ಯಾನ್ಸೆಟ್' ವರದಿ ಪ್ರತಿಪಾದಿಸಿದೆ.

ಭಾರತವು ಅಂಗಾಂಗ ಕಸಿಯಲ್ಲಿ ಭಾರಿ ಪ್ರಗತಿ ಸಾಧಿಸಿದೆ. ಹೊರದೇಶಗಳಿಂದಲೂ ಅಂಗಾಂಗ ಕಸಿಗೆಂದು ರೋಗಿಗಳು ಭಾರತಕ್ಕೆ ಬರುತ್ತಿದ್ದಾರೆ. 2024ರಲ್ಲಿ 39 ವಿವಿಧ ದೇಶಗಳ ರೋಗಿಗಳು ಅಂಗಾಂಗ ಕಸಿಗಾಗಿ ಭಾರತಕ್ಕೆ ಭೇಟಿ ನೀಡಿದ್ದರು ಎಂದು 'ಇಂಡಿಯನ್ ಸೊಸೈಟಿ ಆಫ್ ಆರ್ಗನ್ ಟ್ರಾನ್ಸ್‌ಪ್ಲಾಂಟೇಷನ್' ಹೇಳಿದೆ. ಆದರೂ, ಭಾರತದಲ್ಲಿ ನಗರ–ಗ್ರಾಮೀಣ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಅಂತರಗಳಿರುವುದು ಅಧ್ಯಯನಗಳಲ್ಲಿ ಕಂಡುಬಂದಿದೆ.

ಅಂಗಾಂಗ ಕಸಿಯಲ್ಲಿ ಸಮಾನತೆ ಸಾಧಿಸುವ ವಿಚಾರದಲ್ಲಿ ಭಾರತವು ಹಿಂದುಳಿದಿದೆ. ಮಹಾನಗರಗಳಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿಯೇ ಬಹುತೇಕ ಕಸಿ ನಡೆಯುತ್ತಿದ್ದು, ಗ್ರಾಮಗಳಲ್ಲಿ ವಾಸಿಸುವ ಜನರು ಈ ವ್ಯವಸ್ಥೆಯ ಸೌಲಭ್ಯ ಪಡೆಯಲಾಗುತ್ತಿಲ್ಲ. ದೇಶದ ಬಹುತೇಕ ರಾಜ್ಯಗಳಲ್ಲಿ ಉಚಿತ ಡಯಾಲಿಸಿಸ್ ವ್ಯವಸ್ಥೆ ಲಭ್ಯವಿದ್ದರೂ ಅಂಗಾಂಗ ಕಸಿಯ ವೆಚ್ಚಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಮಟ್ಟದಲ್ಲಿ ಸಮಗ್ರವಾದ ನಿಯಮಾವಳಿ ಇಲ್ಲ. ಕೆಲವು ಖಾಸಗಿ ಆಸ್ಪತ್ರೆಗಳ ಶೇ 90ರಷ್ಟು ಕಸಿಗಳು ವಿದೇಶಿ ಪ್ರಜೆಗಳಿಗೆ ನಡೆಯುತ್ತಿವೆ ಎಂದು ವರದಿ ಹೇಳಿದೆ.

ವರದಿಯಲ್ಲಿ ಅಂಗಾಂಗ ಕಸಿಯ ಸ್ಥಿತಿಗಳನ್ನು ಆಧರಿಸಿ ವಿವಿಧ ದೇಶಗಳನ್ನು ಐದು ಗುಂಪುಗಳನ್ನಾಗಿ ಮಾಡಲಾಗಿದ್ದು, ಭಾರತವು ನಾಲ್ಕನೇ ಗುಂಪಿನಲ್ಲಿ ಸ್ಥಾನ ಪಡೆದಿದೆ. ಈ ಗುಂಪಿನಲ್ಲಿ ದಕ್ಷಿಣ ಆಫ್ರಿಕಾವೂ ಇದೆ. ಭಾರತದಲ್ಲಿ ಉದರ, ಎದೆಗೆ ಸಂಬಂಧಿಸಿದ ಕಸಿಗಳು ಹೆಚ್ಚು ನಡೆಯುತ್ತಿವೆ. ಸತ್ತವರು ಮತ್ತು ಜೀವಂತ ದಾನಿಗಳಿಂದ ಅಂಗಾಂಗ ಸಂಗ್ರಹ ಮಾಡಿ, ಸರ್ಕಾರಿ ಮತ್ತು ಖಾಸಗಿ ಧನಸಹಾಯದೊಂದಿಗೆ ಕಸಿ ನೆರವೇರಿಸಲಾಗುತ್ತಿದೆ.

ಮಾನವ ಅಂಗಾಂಗ ಕಸಿ ಕಾಯ್ದೆ-1994 ಮೃತ ದಾನಿಯಿಂದ ಪಡೆದ ಅಂಗಾಂಗಗಳ ಕಸಿಗೆ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಚೌಕಟ್ಟು ಒದಗಿಸುತ್ತದೆ. 'ಮೋಹನ್' ದಂಥ ಸ್ವಯಂಸೇವಾ ಸಂಸ್ಥೆಗಳು ವೈದ್ಯಕೀಯ ಸಿಬ್ಬಂದಿ ಕಾರ್ಯದಕ್ಷತೆ ಉತ್ತಮಪಡಿಸಲು ಹಲವು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಹಾಗಿದ್ದರೂ ದೇಶದಲ್ಲಿ ಅಂಗಾಂಗ ಕಸಿಯು ಭಿನ್ನ ಪ್ರದೇಶಗಳಲ್ಲಿ ಭಿನ್ನವಾದ ರೀತಿಯಲ್ಲಿ ನಡೆಯುತ್ತಿದೆ.

ಅನೇಕ ಭಾರತೀಯರು, ಮುಖ್ಯವಾಗಿ ಬಡವರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಜೀವ ಉಳಿಸಲು ನೆರವಾಗುವಂಥ ಅಂಗಾಂಗ ಕಸಿಯಿಂದ ದೂರ ಉಳಿದಿದ್ದು, ಸರ್ಕಾರವು ಇವರಿಗೂ ಕಸಿ ಸೌಲಭ್ಯ ಕಲ್ಪಿಸದಿದ್ದರೆ ಈ ಅಸಮಾನತೆ ಹೀಗೆಯೇ ಮುಂದುವರಿಯಲಿದೆ ಎಂದು ವರದಿ ಹೇಳಿದೆ.

ಕಸಿ ಮಾಡಲು ಅಂಗಾಂಗಗಳಿಗಾಗಿ ಜೀವಂತ ಇರುವವರನ್ನೇ ನೆಚ್ಚಿಕೊಂಡಿರುವುದರಿಂದ ಹೆಚ್ಚು ಅಂಗಾಂಗಗಳು ಲಭ್ಯವಾಗುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪನ್ಮೂಲದ ಕೊರತೆ ಇದೆ. ಜತೆಗೆ, ಅಂಗಾಂಗಗಳಿಗೆ ಹೆಚ್ಚು ಬೇಡಿಕೆ ಇದ್ದು, ಕಸಿ ಸಾಮರ್ಥ್ಯ ಕಡಿಮೆ ಇದೆ. ಅಂಗಾಂಗಗಳನ್ನು ಹಣ ಕೊಟ್ಟು ಕೊಳ್ಳುವಂತಹ ಅನೈತಿಕ ಪದ್ಧತಿಗಳೂ ಚಾಲ್ತಿಯಲ್ಲಿವೆ.

ಒಟ್ಟು ಅಂಗಾಂಗ ಕಸಿಗಳ ಲೆಕ್ಕದಲ್ಲಿ ಭಾರತವು ಅಗ್ರ ಮೂರು ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರೂ ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ, ಪಟ್ಟಿಯಲ್ಲಿ ಕೆಳಕ್ಕೆ ಕುಸಿಯುತ್ತದೆ ಎಂದು ಅಧ್ಯಯನ ತಂಡದ ಭಾಗವಾಗಿದ್ದವರು ಹೇಳಿದ್ದಾರೆ.

ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ಗುಜರಾತ್ ರಾಜ್ಯಗಳು ಅಂಗಾಂಗ ಕಸಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿವೆ. ದೇಶದಲ್ಲಿಯೇ ತಮಿಳುನಾಡು ಮುಂಚೂಣಿಯಲ್ಲಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಮೃತವ್ಯಕ್ತಿಗಳ ಅಂಗಾಂಗಗಳನ್ನು ಸಂಗ್ರಹಿಸಿ, ಕಸಿ ಮಾಡಲಾಗುತ್ತಿದೆ. ಅದಕ್ಕಾಗಿ ಖಾಸಗಿ ಮೂಲಗಳಿಂದಲೂ ಹಣವನ್ನು ಪೂರೈಸಲಾಗುತ್ತಿದೆ. ಒಡಿಶಾ ಮತ್ತು ಕೆಲವು ಈಶಾನ್ಯ ರಾಜ್ಯಗಳು ಇದರಲ್ಲಿ ಹಿಂದುಳಿದಿವೆ. ಜಾರ್ಖಂಡ್, ಛತ್ತೀಸಗಢ, ಬಿಹಾರ, ಉತ್ತರ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಈ ವ್ಯವಸ್ಥೆ ಈಗ ಪ್ರವರ್ಧಮಾನಕ್ಕೆ ಬರುತ್ತಿದೆ ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ಎಲ್ಲ ವರ್ಗ, ಪ್ರದೇಶಗಳ ಜನರಿಗೂ ಸಮಾನ ಅವಕಾಶಗಳು ಸಿಗಬೇಕು ಎಂದರೆ, ಅದಕ್ಕೆ ತಕ್ಕಂತೆ ಆಸ್ಪತ್ರೆಗಳ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಿಯಮಾವಳಿಗಳನ್ನು ರೂಪಿಸಬೇಕು ಎಂದು ವರದಿ ಪ್ರತಿಪಾದಿಸಿದೆ.

ಆಧಾರ: ದಿ ಲ್ಯಾನ್ಸೆಟ್‌ನ 'ಪಾಲಿಸಿ ಇನೊವೇಷನ್ಸ್ ಟು ಅಡ್ವಾನ್ಸ್ ಈಕ್ವಿಟಿ ಇನ್ ಸಾಲಿಡ್ ಆರ್ಗನ್ ಟ್ರಾನ್ಸ್‌ಪ್ಲಾಂಟೇಷನ್' ಮತ್ತು ಇತರ ವರದಿಗಳು, ಮಾಧ್ಯಮ ವರದಿಗಳು

ಐದು ಗುಂಪುಗಳು

ಜಾಗತಿಕ ಅಂಗಾಂಗ ಕಸಿಯ ವ್ಯವಸ್ಥೆಯನ್ನು ವರದಿಯಲ್ಲಿ ಐದು ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದನೇ ಗುಂಪಿನಲ್ಲಿ ಬೆನಿನ್, ಚಾಡ್, ನೈಗರ್‌ನಂಥ ಅಂಗಾಂಗ ಕಸಿ ವ್ಯವಸ್ಥೆ ಇಲ್ಲದ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳು ಸ್ಥಾನ ಪಡೆದಿವೆ. ಎರಡನೇ ಗುಂಪಿನಲ್ಲಿ ಕ್ಯಾಮರೂನ್, ಉಗಾಂಡ, ಮಂಗೋಲಿಯಾದಂಥ ಸೀಮಿತ ಕಸಿ ಕೇಂದ್ರಗಳಿರುವ, ಕಿಡ್ನಿ ಕಸಿಗೆ ಹೆಚ್ಚು ಆದ್ಯತೆ ನೀಡುವ ದೇಶಗಳು ಸ್ಥಾನ ಪಡೆದಿವೆ. ಮೂರನೇ ಗುಂಪಿನಲ್ಲಿ ಹಲವು ಕಸಿ ಕೇಂದ್ರಗಳಿರುವ ಈಜಿಪ್ಟ್, ವಿಯೆಟ್ನಾಂನಂಥ ದೇಶಗಳಿದ್ದು, ಅವು ಹಣದ ಕೊರತೆ ಮತ್ತು ಆದ್ಯತೆಯ ಪ್ರಶ್ನೆಗಳನ್ನು ಎದುರಿಸುತ್ತಿವೆ. ಐದನೇ ಗುಂಪಿನಲ್ಲಿ ಅಮೆರಿಕ, ಸ್ಪೇನ್‌ನಂಥ ಅಂಗಾಂಗ ಕಸಿಯನ್ನು ವ್ಯವಸ್ಥಿತವಾಗಿ, ನಿರ್ದಿಷ್ಟ ಚೌಕಟ್ಟುಗಳೊಳಗೆ ನಡೆಸುತ್ತಿರುವ ದೇಶಗಳಿವೆ.

ಸವಾಲುಗಳು

- ರಾಷ್ಟ್ರೀಯ ಮಟ್ಟದಲ್ಲಿ ದತ್ತಾಂಶ ಕೊರತೆ
- ಸರ್ಕಾರ ಸಾಕಷ್ಟು ಬಂಡವಾಳ ಹೂಡದಿರುವುದು, ದೂರದೃಷ್ಟಿ ಕೊರತೆ
- ಎಲ್ಲರಿಗೂ ಅತ್ಯುತ್ತಮ ಚಿಕಿತ್ಸೆ ಲಭ್ಯ ಇಲ್ಲದಿರುವುದು
- ಅಂಗಾಂಗ ಕಸಿಗೆ ಶಿಫಾರಸು ಮಾಡುವ ವೈದ್ಯರು ಮತ್ತು ಅಂಗಾಂಗ ಕಸಿ ಯೋಜನೆಯ ನಡುವೆ ಸಮನ್ವಯ ಇಲ್ಲದಿರುವುದು
- ವಿಮೆ ಸೌಲಭ್ಯದ ಇತಿಮಿತಿ
- ರೋಗಿಗಳಿಗೆ ಹಣಕಾಸಿನ ಕೊರತೆ

ಪರಿಹಾರ

- ರಾಷ್ಟ್ರೀಯ ಮಟ್ಟದಲ್ಲಿ ದತ್ತಾಂಶಗಳನ್ನು ದಾಖಲಿಸುವ ವ್ಯವಸ್ಥೆ ಅಭಿವೃದ್ಧಿಪಡಿಸಬೇಕು
- ರೋಗಿಗಳ ಮೇಲೆ ಬರುವ ಹಣಕಾಸಿನ ಹೊರೆಯನ್ನು ತಪ್ಪಿಸುವಂತಹ ನೀತಿಗಳನ್ನು ಜಾರಿಗೊಳಿಸಬೇಕು
- ಮೃತಪಟ್ಟವರ ಅಂಗಾಂಗಗಳನ್ನು ದಾನವಾಗಿ ಪಡೆಯುವ ದಿಸೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಹೆಚ್ಚು ಬಂಡವಾಳ ಹೂಡಬೇಕು
- ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಯನ್ನು ಹೆಚ್ಚಿಸುವುದಕ್ಕಾಗಿ ಆಸ್ಪತ್ರೆಗಳಿಗೆ ಪ್ರೋತ್ಸಾಹ ನೀಡಬೇಕು ಮತ್ತು ಆರ್ಥಿಕ ಸಮನ್ವಯವನ್ನು ಸುಧಾರಿಸಬೇಕು

ಸುಧಾರಣೆ ಕಂಡಿದೆ, ಆದರೆ...



ಭಾರತದಲ್ಲಿ ಅಂಗಾಂಗ ಕಸಿ ಕ್ಷೇತ್ರದಲ್ಲಿ ವರ್ಷದಿಂದ ವರ್ಷಕ್ಕೆ ಸುಧಾರಣೆಯಾಗುತ್ತಿದೆ. ಪ್ರತಿ ದಾನಿಗೆ ಸಂಬಂಧಿಸಿದಂತೆ ಅಂಗಾಂಗ ಕಸಿಯ ಸರಾಸರಿ ಸಂಖ್ಯೆಯು 2016ರಲ್ಲಿ 2.43 ಇದ್ದರೆ, 2022ರಲ್ಲಿ ಇದು 3.05ಕ್ಕೆ ಏರಿಕೆಯಾಗಿದೆ. ಹಾಗಿದ್ದರೂ, ಬಹುತೇಕ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗಳು ಖಾಸಗಿ ಆಸ್ಪತ್ರೆಗಳಲ್ಲಿ ನಡೆಯುತ್ತಿವೆ. ಖಾಸಗಿ ಆರೋಗ್ಯ ಸೇವೆ ದುಬಾರಿಯಾಗಿರುವುದರಿಂದ ಬಹುಪಾಲು ರೋಗಿಗಳಿಗೆ ಅಂಗಾಂಗ ಕಸಿ ಮಾಡಿಸಿಕೊಳ್ಳಲು ಆಗುತ್ತಿಲ್ಲ.

ಭಾರತದಲ್ಲಿ ಹೆಚ್ಚು ಮೂತ್ರಪಿಂಡ (ಕಿಡ್ನಿ) ಕಸಿ ಮಾಡಲಾಗುತ್ತಿದೆ. ಹಾಗಿದ್ದರೂ, ಈ ಪ್ರಕ್ರಿಯೆಯು ಬಹುತೇಕ ರೋಗಿಗಗಳನ್ನು ಒಳಗೊಳ್ಳುತ್ತಿಲ್ಲ. ರೋಗಿಗಳ ನಡುವೆ ಸಮಾನತೆಯನ್ನೂ ಸಾಧಿಸಲಾಗುತ್ತಿಲ್ಲ. ಮೃತಪಟ್ಟವರ (ಮಿದುಳು ನಿಷ್ಕ್ರಿಯಗೊಂಡವರು ಮತ್ತು ಹೃದಯ ಸ್ತಂಭನಕ್ಕೆ ಒಳಗಾಗಿ ಮೃತಪಟ್ಟವರ) ಮೂತ್ರಪಿಂಡಗಳನ್ನು ಅಗತ್ಯವಿರುವವರಿಗೆ ಕಸಿ ಕಟ್ಟುವ ಪ್ರಕ್ರಿಯೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದರೂ ದೇಶದಲ್ಲಿ ಮೃತರ ಅಂಗಾಂಗಗಳನ್ನು ಬಳಸುವ ವ್ಯವಸ್ಥೆ ಉತ್ತಮವಾಗಿಲ್ಲ. ಇದಕ್ಕೆ ಧಾರ್ಮಿಕ, ಸಾಂಸ್ಕೃತಿಕ ನಂಬಿಕೆಗಳು, ಆರೋಗ್ಯ ವ್ಯವಸ್ಥೆಯಲ್ಲಿನ ಇತಿಮಿತಿಗಳು ಸೇರಿದಂತೆ ಹಲವು ಕಾರಣಗಳಿವೆ.

2023ರಲ್ಲಿ ಭಾರತದಲ್ಲಿ 18,378 ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಈ ಪೈಕಿ ಮೃತಪಟ್ಟ 2,935 ಮಂದಿಯ (ಶೇ 15.9ರಷ್ಟು) ಅಂಗಾಂಗಗಳನ್ನು ಮಾತ್ರ ಪಡೆಯಲಾಗಿತ್ತು.

'ದಿ ಲ್ಯಾನ್ಸೆಟ್'ನ 2024ರ ವರದಿ ಪ್ರಕಾರ, ಭಾರತದಲ್ಲಿ ವಾರ್ಷಿಕವಾಗಿ 11,243 ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತಿದೆ. ಆದರೆ, ಪ್ರತಿ ವರ್ಷ 2 ಲಕ್ಷ ಮಂದಿ ಮೂತ್ರಪಿಂಡ ನಿಷ್ಕ್ರಿಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ, ಬೇಡಿಕೆಯಷ್ಟು ಮೂತ್ರಪಿಂಡಗಳು ಲಭ್ಯವಾಗುತ್ತಿಲ್ಲ. ಬಹುತೇಕ ರೋಗಿಗಳು ಜೀವನಪೂರ್ತಿ ಡಯಾಲಿಸಿಸ್ ಅವಲಂಬಿಸಿದ್ದಾರೆ. ಇನ್ನೂ ಕೆಲವರು ಕಸಿ ಕಟ್ಟಲು ಮೂತ್ರಪಿಂಡಗಳಿಗೆ ಇಲ್ಲವೇ ಖಾಸಗಿ ಆಸ್ಪತ್ರೆಗಳಲ್ಲಿ ಕಸಿ ಶಸ್ತ್ರಚಿಕಿತ್ಸೆಗಾಗಿ ಹಣಕಾಸು ನೆರವಿಗೆ ಕಾದುಕುಳಿತಿದ್ದಾರೆ.

ದಾನಿಗಳಲ್ಲಿ ಮಹಿಳೆಯರೇ ಹೆಚ್ಚು

ದೇಶದಲ್ಲಿ ಅಂಗಾಂಗ ದಾನ ಪ್ರಕ್ರಿಯೆಯಲ್ಲೂ ಲಿಂಗ ಅಸಮಾನತೆ ಇರುವುದರ ಬಗ್ಗೆ ಈ ವರ್ಷದ ಜೂನ್‌ನಲ್ಲಿ ಪ್ರಕಟವಾದ 'ದಿ ಲ್ಯಾನ್ಸೆಟ್'ನ ಮತ್ತೊಂದು ಅಧ್ಯಯನ ವರದಿ ಬೊಟ್ಟು ಮಾಡಿದೆ.

2000–2025ರ ನಡುವೆ ದೇಶದಲ್ಲಿ ನಡೆದಿರುವ ಕಿಡ್ನಿ ಮತ್ತು ಯಕೃತ್ (ಲಿವರ್) ವಿನಿಮಯ ಕಸಿ ಶಸ್ತ್ರಚಿಕಿತ್ಸೆಗಳನ್ನು (exchange transplantation) ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. 1,839 ಮೂತ್ರಪಿಂಡ ಮತ್ತು 259 ಯಕೃತ್ ವಿನಿಮಯ ಕಸಿ ಶಸ್ತ್ರಚಿಕಿತ್ಸೆಗಳನ್ನು ಅಧ್ಯಯನಕ್ಕಾಗಿ ಪರಿಗಣಿಸಲಾಗಿದೆ. ಕಿಡ್ನಿ ವಿನಿಮಯ ಕಸಿಯಲ್ಲಿ ಪುರುಷರು 1,504 ಕಿಡ್ನಿಗಳನ್ನು (ಶೇ 82ರಷ್ಟು) ಪಡೆದರೆ, 1,469 ಕಿಡ್ನಿಗಳನ್ನು (ಶೇ 80ರಷ್ಟು) ಮಹಿಳೆಯರೇ ದಾನ ಮಾಡಿದ್ದಾರೆ. ಯಕೃತ್ ಅನ್ನು ಪಡೆದವರಲ್ಲೂ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 222 ಪುರುಷರು ಯಕೃತ್ ಪಡೆದಿದ್ದರೆ, 37 ಮಹಿಳೆಯರಿಗೆ ಮಾತ್ರ ಯಕೃತ್ ಲಭ್ಯವಾಗಿದೆ.

ರಾಷ್ಟ್ರೀಯ

ಉಪ ರಾಷ್ಟ್ರಪತಿ ಆಯ್ಕೆ ಸೆ. 9ರಂದು ಚುನಾವಣೆ

ನವದೆಹಲಿ (ಪಿಟಿಐ): ಜಗದೀಪ್ ಧನಕರ್ ರಾಜೀನಾಮೆಯಿಂದ ತೆರವಾಗಿರುವ ಉಪ ರಾಷ್ಟ್ರಪತಿ ಸ್ಥಾನಕ್ಕೆ ಸೆಪ್ಟೆಂಬರ್ 9ರಂದು ಚುನಾವಣೆ ನಡೆಯಲಿದ್ದು, ಕೇಂದ್ರ ಚುನಾವಣಾ ಆಯೋಗ ಗುರುವಾರ ಅಧಿಸೂಚನೆ ಹೊರಡಿಸಿದೆ.

ಅಧಿಸೂಚನೆಯ ಪ್ರಕಾರ, ನಾಮಪತ್ರ ಸಲ್ಲಿಸಲು ಆಗಸ್ಟ್ 21 ಕೊನೆಯ ದಿನವಾಗಿದೆ. ಆ. 22ರಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಆ. 25 ಕೊನೆಯ ದಿನ.

ಉಪ ರಾಷ್ಟ್ರಪತಿ ಸ್ಥಾನಕ್ಕೆ ಅವಿರೋಧ ಆಯ್ಕೆಯಾಗದಿದ್ದರೆ, ಚುನಾವಣೆ ನಡೆಯಲಿದೆ. ಸೆ. 9ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ. ಅದೇ ದಿನ, ಫಲಿತಾಂಶವೂ ಪ್ರಕಟಗೊಳ್ಳಲಿದೆ.

ಜುಲೈ 21ರಂದು ಧನಕರ್ ಅವರು ದಿಢೀರ್ ರಾಜೀನಾಮೆ ನೀಡಿದ ಬಳಿಕ ಉಪ ರಾಷ್ಟ್ರಪತಿ ಹುದ್ದೆ ಖಾಲಿ ಉಳಿದಿದೆ. ಅವರ 5 ವರ್ಷಗಳ ಅವಧಿ 2027ರ ಆಗಸ್ಟ್‌ವರೆಗೆ ಇತ್ತು.

ಉಪರಾಷ್ಟ್ರಪತಿ ಅಭ್ಯರ್ಥಿ ಆಯ್ಕೆ ನಿರ್ಧಾರ ಮೋದಿ, ನಡ್ಡಾ ಹೆಗಲಿಗೆ


ನರೇಂದ್ರ ಮೋದಿ ಮತ್ತು ಜೆ.ಪಿ.ನಡ್ಡಾ

ನವದೆಹಲಿ (ಪಿಟಿಐ): ಉಪರಾಷ್ಟ್ರಪತಿ ಚುನಾವಣೆಗೆ ತಮ್ಮ ಅಭ್ಯರ್ಥಿಯನ್ನು ನಿರ್ಧರಿಸುವ ಅಧಿಕಾರವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಎನ್‌ಡಿಎ ನೀಡಿದೆ.

ಮೈತ್ರಿಕೂಟದ ನಾಯಕರು ಸರ್ವಾನುಮತದಿಂದ ಅಭ್ಯರ್ಥಿ ಆಯ್ಕೆ ಹೊಣೆಯನ್ನು ಲೋಕಸಭೆಯ ಸದನ ನಾಯಕ ಮೋದಿ ಮತ್ತು ರಾಜ್ಯಸಭೆಯ ಸದನ ನಾಯಕ ನಡ್ಡಾ ಅವರಿಗೆ ವಹಿಸಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

'ಸಂಭವನೀಯ ಅಭ್ಯರ್ಥಿ ಆಯ್ಕೆ ಕುರಿತು ಯಾವುದೇ ಚರ್ಚೆಗಳು ನಡೆದಿಲ್ಲ. ಜೊತೆಗೆ ವಿಪಕ್ಷಗಳು ಈ ಬಗ್ಗೆ ನಮ್ಮೊಂದಿಗೆ ಚರ್ಚಿಸಿದರೆ, ನಾವು ಅವರೊಂದಿಗೆ ಚರ್ಚಿಸಲು ಸಿದ್ಧರಿದ್ದೇವೆ' ಎಂದರು.

ಬೆದರಿಸುವ ತಂತ್ರ: ಅಮೆರಿಕ ಸುಂಕ ಏರಿಕೆಗೆ ಸಿಪಿಎಂ ಖಂಡನೆ

ನವದೆಹಲಿ (ಪಿಟಿಐ): ಭಾರತದಿಂದ ರಫ್ತು ಮಾಡುವ ಸರಕುಗಳಿಗೆ ಶೇಕಡ 50ರಷ್ಟು ಸುಂಕ ವಿಧಿಸುವ ಅಮೆರಿಕದ ನಡೆ 'ಬೆದರಿಕೆ ತಂತ್ರ'ವಾಗಿದ್ದು, ದೇಶದ ಸ್ವಾಯತ್ತೆ ಕಾಪಾಡುವ ನಿಟ್ಟಿನಲ್ಲಿ ಮೋದಿ ಸರ್ಕಾರವು ದೃಢ ನಿರ್ಧಾರ ಕೈಗೊಳ್ಳಬೇಕು ಎಂದು ಸಿಪಿಎಂ ಆಗ್ರಹಿಸಿದೆ.

'ಟ್ರಂಪ್ ಸರ್ಕಾರವು ನಿರಂಕುಶ ಹಾಗೂ ಸರ್ವಾಧಿಕಾರದ ನಡೆ ಪ್ರದರ್ಶಿಸಿದೆ' ಎಂದು ಸಿಪಿಎಂ ಪಾಲಿಟ್ ಬ್ಯುರೊ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ. 'ಭಾರತದಿಂದ ರಫ್ತಾಗುವ ವಸ್ತುಗಳಿಗೆ ಶೇಕಡ 50ರಷ್ಟು ಸುಂಕ ಹೇರಿದ ಅಮೆರಿಕದ ನಿರ್ಧಾರವನ್ನು ಸಿಪಿಎಂ ಕಟುವಾಗಿ ಖಂಡಿಸುತ್ತದೆ. ಅಮೆರಿಕ ಸರ್ಕಾರ ಅನುಸರಿಸುತ್ತಿರುವ ಬೆದರಿಕೆ ತಂತ್ರವು ನಿರಂಕುಶ, ಸರ್ವಾಧಿಕಾರಿತನದ ನಡೆಯಾಗಿದೆ' ಎಂದು ಸಿಪಿಎಂ ತಿಳಿಸಿದೆ.

'ರಷ್ಯಾದ ಜೊತೆಗೆ ವ್ಯಾಪಾರ ಸಂಬಂಧ ಮುಂದುವರಿಸದಂತೆ, ಅಮೆರಿಕ ಹಾಗೂ ಐರೋಪ್ಯ ಒಕ್ಕೂಟವು ಭಾರತದ ಮೇಲೆ ಒತ್ತಡ ಹೇರುತ್ತಿವೆ. ಆದರೆ, ಆ ರಾಷ್ಟ್ರಗಳು ಮಾತ್ರ ರಷ್ಯಾದ ಜೊತೆಗೆ ವ್ಯಾಪಾರ ವಹಿವಾಟು ಮುಂದುವರಿಸಿವೆ' ಎಂದು ತಿಳಿಸಿದೆ.

'ಟ್ರಂಪ್‌ಗೆ ಪ್ರತ್ಯುತ್ತರ: ಸರ್ಕಾರ ವಿಫಲ'


ಉದ್ಧವ್ ಠಾಕ್ರೆ

ನವದೆಹಲಿ (ಪಿಟಿಐ): 'ಪ್ರಧಾನಿ ಮೋದಿ ಅವರನ್ನು ಪದೇ ಪದೇ ಅಣಕಿಸುತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತಕ್ಕ ಪ್ರತ್ಯುತ್ತರ ನೀಡಲು ಕೇಂದ್ರ ಸರ್ಕಾರ ವಿಫಲವಾಗಿದೆ' ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಎನ್‌ಡಿಎ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಟ್ರಂಪ್, ನಮ್ಮ ದೇಶ ಮತ್ತು ಪ್ರಧಾನಿ ಅವರನ್ನು ಅಪಹಾಸ್ಯ ಮಾಡುತ್ತಲೇ ಇದ್ದಾರೆ. ಸರ್ಕಾರದ ವಿದೇಶಾಂಗ ನೀತಿ ಸಂಪೂರ್ಣ ವಿಫಲವಾಗಿದೆ' ಎಂದು ಟೀಕಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಹೊಲಗಳ** ನಡುವಿನ ಮಣ್ಣಿನ ರಸ್ತೆಯಲ್ಲಿ ಜನರ ದೊಡ್ಡ ಗುಂಪೊಂದು ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ನಡೆದುಬರುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇವರೆಲ್ಲರೂ ಬಾಂಗ್ಲಾದೇಶದ ಅಕ್ರಮ ವಲಸಿಗರಾಗಿದ್ದು, ಅಸ್ಸಾಂನ ಗೋಲ್ಪಾರ ಜಿಲ್ಲೆಯ ಅಧಿಕಾರಿಗಳ ಮೇಲೆ ದಾಳಿ ನಡೆಸಲು ಸಜ್ಜಾಗಿ ಬಂದರು, ಘರ್ಷಣೆಯಲ್ಲಿ ತೊಡಗಿದರು ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ವಿಡಿಯೊದ** ಒಂದು ಕೀಫ್ರೇಮ್ ಅನ್ನು ಪ್ರತ್ಯೇಕಗೊಳಿಸಿ, ಅದನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಬಾಂಗ್ಲಾದೇಶದ ಹಲವು ಮಾಧ್ಯಮಗಳಲ್ಲಿ 2025ರ ಜುಲೈ 1ರಂದು ವಿಡಿಯೊಸಹಿತ ವರದಿಗಳು ಪ್ರಕಟವಾಗಿರುವುದು ಕಂಡಿತು. 'ಢಾಕಾ ಮೇಲ್', 'ಜಾಗೊನ್ಯೂಸ್24.ಕಾಮ್' ಮತ್ತು 'ಚಾನೆಲ್ ಐ ನ್ಯೂಸ್' ಪ್ರಕಾರ, ಬಾಂಗ್ಲಾದೇಶದ ಕಿಶನ್‌ಗಂಜ್‌ನಲ್ಲಿ ಬಾಂಗ್ಲಾದೇಶ ನ್ಯಾಷನಲ್ ಪಾರ್ಟಿಯ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯ ವಿಡಿಯೊ ಅದಾಗಿದೆ. ಹಿಂಸಾಚಾರದಲ್ಲಿ ಕನಿಷ್ಠ 40 ಮಂದಿ ಗಾಯಗೊಂಡಿದ್ದಾರೆ ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಬಾಂಗ್ಲಾದೇಶದ ವಿಡಿಯೊ ಅನ್ನು ಅಸ್ಸಾಂನ ಅಕ್ರಮ ವಲಸಿಗರು ಎಂಬ ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕೋಪದ ಬೆನ್ನೇರಿ

ನುಡಿ ಬೆಳಗು



ದಯಾ ಗಂಗನಘಟ್ಟ

ಬಹಳ ಶಿಸ್ತಿಗೆ ಹೆಸರಾದ ಸಾಹುಕಾರನೊಬ್ಬ ಕೆಲಸಗಾರರು ಹೇಗೆ ಕೆಲಸ ಮಾಡುತ್ತಾರೆ ಎಂದು ಪರೀಕ್ಷಿಸಲು ತನ್ನ ಗೋಡೌನಿಗೆ ಹೋದ. ಅಲ್ಲಿನ ಸಾಮಾನುಗಳನ್ನು ಚೀಲಕ್ಕೆ ಕಟ್ಟುತ್ತಿದ್ದ ಕೋಣೆಯಲ್ಲಿ ಒಬ್ಬ ಹುಡುಗ ಕೆಲಸ ಮಾಡದೇ ಮೊಬೈಲು ನೋಡುತ್ತಾ ನಿಂತಿದ್ದು ಕಾಣಿಸಿತು. ಕೋಪಗೊಂಡ ಅವನು, 'ಏನೋ, ನಿನಗೆ ತಿಂಗಳಿಗೆ ಎಷ್ಟು ಸಂಬಳ ಸಿಗುತ್ತದೆ' ಎಂದು ಕೇಳಿದ. ಅವನು ತಿರುಗಿ ನೋಡಿ ಉಡಾಫೆಯಲ್ಲಿ 'ಹತ್ತು ಸಾವಿರ ರೂಪಾಯಿ' ಎಂದ. ಅವನ ಧೋರಣೆಗೆ ಇವನ ಪಿತ್ತ ನೆತ್ತಿಗೇರಿತು. ತಕ್ಷಣ ಇವನು ಕೋಪದಲ್ಲಿ ಜೇಬಿಗೆ ಕೈ ಹಾಕಿ, 'ತಗೊ ಹತ್ತು ಸಾವಿರ ರೂಪಾಯಿ, ನೀನು ಇನ್ನು ಮೇಲೆ ಈ ಕಡೆ ತಲೆ ಹಾಕಬೇಡ, ನಿನ್ನನ್ನು ವಜಾ ಮಾಡಿದ್ದೇನೆ. ಹೋಗಿಲ್ಲಿಂದ' ಎಂದು ಬೈದು ಕಳಿಸಿಬಿಟ್ಟ. ಆಮೇಲೆ ಅವನು ಆ ಭಾಗದ ಮ್ಯಾನೇಜರನ್ನು ಕರೆದು 'ಆ ಹುಡುಗನನ್ನು ಯಾರು ನೌಕರಿಗೆ ಸೇರಿಸಿಕೊಂಡರು? ಸೇರಿಸಿಕೊಂಡು ಎಷ್ಟು ದಿನವಾಗಿತ್ತು? ಇಂತಹವರನ್ನೆಲ್ಲಾ ಯಾಕ್ರೀ ಸೇರಿಸ್ಕೊತೀರಿ' ಎಂದು ಕೇಳಿದ. ತನ್ನ ಬೈಕ್ ಸ್ಟಾರ್ಟ್ ಮಾಡಿ ಹೊರಟು ಹೋದ ಹುಡುಗನನ್ನು ನೋಡಿದ ಮ್ಯಾನೇಜರ್ ಆಶ್ಚರ್ಯದಿಂದ 'ಅವನು ನಮ್ಮಲ್ಲಿಯ ನೌಕರನಲ್ಲವಲ್ಲ. ಆತ ಯಾವುದೋ ಅಂಗಡಿಯಿಂದ ಸಾಮಾನನ್ನು ಕೊಟ್ಟುಹೋಗಲು ಬಂದಿದ್ದವ' ಅಂದ.

ಕೋಪ. ಇದು ಯಾಕೆ, ಯಾವಾಗ, ಹೇಗೆ ಬರುತ್ತದೆ ಹೇಳುವುದು ಕಷ್ಟ. ಸಿಟ್ಟು ಬರಲು ಇಂಥವೇ ಕಾರಣ ಎಂದು ಗುರುತಿಸುವುದು ಜಟಿಲ. ವಿಜ್ಞಾನಿಗಳು ಸಹ ಈ ಮಾತನ್ನು ಒಪ್ಪಿಕೊಳ್ಳುತ್ತಾ ಕೋಪ ಯಾವಾಗ, ಏಕೆ ಬರುತ್ತದೆ ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಷ್ಟ ಎನ್ನುತ್ತಾರೆ. ನಮಗೆ ಇಷ್ಟವಿಲ್ಲದ್ದು ನಡೆದಾಗ, ನಮ್ಮ ಬಯಕೆಗಳು ಈಡೇರದೇ ಹೋದಾಗ, ಯಾರೋ ನಮ್ಮನ್ನು ಅವಮಾನಿಸಿದಾಗ ಅಥವಾ ಯಾರೋ ನಮ್ಮ ಘನತೆಗೆ ಕುಂದು ತರುವ ಮಾತಾಡಿದರೆ ಇಂತಹ ಬಹುತೇಕ ಕಾರಣಗಳು ವ್ಯಕ್ತಿಯನ್ನು ತಕ್ಷಣ ಕೋಪಗೊಳ್ಳುವಂತೆ ಮಾಡುತ್ತವೆ. ಸಿಟ್ಟೆಬ್ಬಿಸುವ ವಿಷಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವೂ ಆಗಿರುತ್ತದೆ. ವಯಸ್ಸು, ಲಿಂಗ, ಸಂಸ್ಕೃತಿಗೆ ಅನುಸಾರವೂ ಭಿನ್ನವಾಗಿರುತ್ತವೆ. ಸಿಟ್ಟೆಬ್ಬಿಸುವ ವಿಷಯಗಳಿಗೆ ಜನರು ಪ್ರತಿಕ್ರಿಯಿಸುವ ವಿಧದಲ್ಲೂ ವ್ಯತ್ಯಾಸವಿದೆ. ಕೆಲವರಿಗೆ ಸಿಟ್ಟು ಬರುವುದೇ ಕಡಿಮೆ. ಬಂದರೂ ಆ ಸಿಟ್ಟು ಬೇಗನೆ ಆರಿಹೋಗುತ್ತದೆ. ಇನ್ನು ಕೆಲವರು 'ಮುಟ್ಟಿದರೆ ಮುನಿ' ಸ್ವಭಾವದವರು, ಮುಂಗೋಪಿಗಳು. ಅವರ ಸಿಟ್ಟು ತಣ್ಣಗಾಗಲು ಅನೇಕ ದಿನಗಳು, ವಾರಗಳು, ತಿಂಗಳುಗಳು ಅಥವಾ ವರ್ಷವೇ ಬೇಕಾಗುತ್ತದೆ.

ಹಾಗಾದರೆ ಕೋಪವೇ ಬರಬಾರದೇ? ಹಾಗೆ ಹೇಳಲಾಗುವುದಿಲ್ಲ. ಜಗತ್ತಿನಲ್ಲಿ ನಡೆವ ಅನ್ಯಾಯಗಳೆಡೆಗೆ, ಮೋಸ, ಶೋಷಣೆಗಳಿಗೆ ನಮ್ಮಲ್ಲಿ ಕೋಪ ಹುಟ್ಟಲೇ ಬೇಕು. ಆದರೆ ಅದನ್ನು ವ್ಯಕ್ತಪಡಿಸುವ ರೀತಿ ಮತ್ತು ಕೋಪದ ಯಾವ ರೂಪ ಸರಿಯಲ್ಲ ಎಂಬುದು ಯೋಚಿಸಬೇಕಾದ ವಿಚಾರ. ನಮ್ಮ ನಿಯಂತ್ರಣಕ್ಕೆ ಸಿಗದ ಮತ್ತು ಅನಾಹುತಗಳಿಗೆ ದಾರಿ ಮಾಡಿಕೊಡುವಂತಹ ಕೋಪ ಒಳ್ಳೆಯದಲ್ಲ. ಅಂತಹ ಕೋಪ ಹೋಗು ಹೋಗುತ್ತಾ ಚಟವಾಗುತ್ತದೆ ಅಷ್ಟೆ. 'ಕೋಪವು ನನಗೆ ಒಳ್ಳೆಯದಲ್ಲ, ಅದು ಅಪಾಯಕಾರಿ, ಹಾನಿಕಾರಿ' ಎಂಬುದು ಹಲವು ಅನುಭವ ಮತ್ತು ಅರಿವಿನ ಕಾರಣದಿಂದ ಬಹಳ ಚೆನ್ನಾಗಿಯೇ ಅರ್ಥವಾಗಿರುತ್ತದೆ. ಆದರೂ ನಾವು ಕೋಪದ ಚಟಕ್ಕೆ ಬಲಿಯಾಗುತ್ತೇವೆ, ಆ ಕ್ಷಣಕ್ಕೆ ಮನಸ್ಸಿನ ಸ್ಥಿಮಿತ ಕಳೆದುಕೊಂಡು ಸಿಟ್ಟಿನಿಂದ ರೇಗುವುದೋ, ಬಯ್ಯುವುದೋ, ಸಿಡಿಮಿಡಿಗೊಂಡು ಕುದಿಯುವುದೋ ಮಾಡುವ ಮೂಲಕ ಪ್ರತಿಕ್ರಿಯಿಸಿಬಿಡುತ್ತೇವೆ. ಕೋಪ ಇಳಿದ ಮೇಲೆ, 'ನಾನು ಕೋಪಗೊಳ್ಳಬಾರದಿತ್ತು' ಎಂದು ಹೇಳಿಕೊಳ್ಳುತ್ತೇವೆ. ಇದು ಆ ಕ್ಷಣಕ್ಕಷ್ಟೇ. ಮುಂದಿನ ಸಲ ಯಾವುದೋ ಪ್ರಚೋದನೆ ಬರುತ್ತದೆ. ನಾವು ಪುನಃ ಕೋಪಗೊಳ್ಳುತ್ತೇವೆ. ಏಕೆಂದರೆ ಅದರ ನಿಯಂತ್ರಣ ನಮಗೆ ಗೊತ್ತಿಲ್ಲ. ಮುಳ್ಳನ್ನು ಮುಳ್ಳಿನಿಂದ ತೆಗೆಯಬಹುದು. ಆದರೆ ಕೆಸರನ್ನು ಕೆಸರಿನಿಂದ ತೊಳೆಯಲಾಗದು. ಅದೇ ರೀತಿ ಸಿಟ್ಟನ್ನು ಸಿಟ್ಟಿನಿಂದ ಕಡಿಮೆ ಮಾಡಲು ಬರುವುದಿಲ್ಲ. ಕೋಪಕ್ಕೆ ಕೋಪ ಎಂದೂ ಉತ್ತರವಲ್ಲ. ಮನಸ್ಸೆಂಬುದು ಭಾವನೆಗಳ ಕಾರ್ಖಾನೆ ನಿಜ. ಅಲ್ಲಿ ಉತ್ಪಾದನೆಯಾಗುವ ಎಲ್ಲ ಭಾವನೆಗಳನ್ನೂ ಹೊರ ಹಾಕಲು ಮಾರ್ಗಗಳು ಬೇಕೇ ಬೇಕು. ಕೋಪದಂಥ ನಕಾರಾತ್ಮಕ ಭಾವವನ್ನು ಹೊರ ಹಾಕಲು ನಮಗೆ ಸೂಕ್ತವೆನಿಸುವ ಸಮಾಧಾನಕರ, ಶಾಂತ ದಾರಿಗಳನ್ನು ನಾವೇ ಹುಡುಕಿಕೊಳ್ಳುವುದು ಉತ್ತಮ. ಇಲ್ಲದಿದ್ದರೆ ನಮಗೇ ನಷ್ಟ ಕಟ್ಟಿಟ್ಟ ಬುತ್ತಿ. ❖

ಗುಂಡಣ್ಣ



ಪದಬಂಧ 6128

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಹಾಡಿನ ಧಾಟಿಯಿದು (2)
3.ಅಭಿನಯಕಾರನಾಗಿರುವ ಶಿವ (4)
5.ಮಣಿ ಧರಿಸಿರುವ ಚಲುವೆ (3)
6.ಲೋಪದೋಷಗಳನ್ನು ಸರಿಪಡಿಸುವವನು (4)
8.ಕೊನೆಗೆ ಮಗ ತಿರುಗಿದ್ದಾಗ ಸೇರುವಿಕೆ (4)
11.ಹೀಗೆ ಕಣ್ಮರೆಯಾಗುವುದು (4)
14.ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು (4)
15.ಧಾನ್ಯ ಸಂಗ್ರಹಿಸುವ ಸ್ಥಳವಿದು (3)
16.ಬುಡದಿಂದ ವ್ಯಕ್ತಗೊಂಡಿರುವ ಕಳವಳ (4)
17.ಸಂಸಾರ ಬಂಧನಕ್ಕೆ ಒಳಗಾದವನು (2)

ಮೇಲಿಂದ ಕೆಳಕ್ಕೆ

1.ನಡುವಿರುವ ವರ ತಿರುಗಿ ನೀಡಿದ ಆಶ್ವಾಸನೆ (4)
2.ರಾಜಪತ್ನಿಯ ಆಲಯ (4)
3.ಅದೇ ತಾನೆ ಬಿರಿದಿರುವ ಹೂ (4)
4.ಬದುಕು ಈ ಕುದುರೆಬಂಡಿಯ ಹಾಗಂತೆ! (3)
7.ವಿರಹದಲ್ಲಿರುವ ಗುಟ್ಟು ಗೊತ್ತಾಯಿತೇ? (2)
9.ಸುಲಭವಾಗಿ ತಲೆಗೆ ಹತ್ತದ ಲೆಕ್ಕಶಾಸ್ತ್ರ (3)
10.ದಿವಸದ ಎಂಟನೆ ಒಂದು ಭಾಗದಷ್ಟು ಕಾಲ (2)
11.ನಡುವಣ ಪ್ರದೇಶ (4)
12.ಹೊಸ ಶೈಲಿಯ ಬರಹಗಾರ (4)
13.ಕೊನೆಗೆ ಜನವಿದ್ದರೆ ಇದು ಉಪಯೋಗ! (4)
14.ಹಿತವಲ್ಲದ್ದು ಇದು (3)

6127ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನವೋನವ 3.ತಲೆಹೋಕ 5.ಕಲಗಚ್ಚು 7.ಪಡಪೋಸಿ 9.ಹುಂಜ 10.ಡಿಕ್ರಿ 11.ಮೆಲುನುಡಿ 14.ಕವಾಡಿಗ 17.ಗಟ್ಟಿಮುಟ್ಟು 18.ಮನಸ್ಸಾಕ್ಷಿ

ಮೇಲಿಂದ ಕೆಳಕ್ಕೆ: 1.ನರ್ತಕ 2.ನಹಗ 3.ತಡಬಡ 4.ಕಲ್ಲೋಲ 6.ಲವಾಜಮೆ 7.ಪಗಡಿ 8.ಸಿಡಿಮಿಡಿ 12.ನುಡಿಗಟ್ಟು 13.ಗಿಡುಗ 15.ವಾಮನ 16.ಗವಾಕಿ

ಸುಡೊಕು 6512

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		1		3	5		7
7		6	4	9			3	1
	3				7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

6511 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಆಗಸ್ಟ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು **ತಿಥಿ:** ಶ್ರಾವಣ ಶುಕ್ಲ ಚತುರ್ದಶಿ ಗಂ. 14-13 **ನಕ್ಷತ್ರ:** ಉತ್ತರಾಷಾಢ ಗಂ. 14-28 **ಯೋಗ:** ಪ್ರೀತಿ ಗಂ. 5-39 ನಂತರ ಆಯುಷ್ಮಾನ್ ಗಂ.28-09 **ಕರಣ:** ವಣಿಜ ಗಂ. 14-13, ಕರ್ಕಾಟಕ ಮಾಸದ 23 ನೇ ದಿನ. **ಮಳೆ ನಕ್ಷತ್ರ:** ಆಶ್ಲೇಷ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 12-00 **ಸೂರ್ಯೋದಯ:** 06-21 **ಸೂರ್ಯಾಸ್ತ:** 06-52, ಮುಸ್ಲಿಂ ದಿನಾಂಕ : 13 ಸಫರ್, **ದಿನ ವಿಶೇಷ:** ವರಮಹಾಲಕ್ಷ್ಮಿ ವ್ರತ, ನರೋಲಿ ಪೂರ್ಣಿಮಾ, **ಅದೃಷ್ಟ ಸಂಖ್ಯೆ:** 5, 9

ಮೇಷ: ಪೊಲೀಸ್ ವೃತ್ತಿಯಲ್ಲಿರುವವರು ಕಾರ್ಯಾಚರಣೆಗಾಗಿ ದೂರ ಸಂಚಾರ ಮಾಡಲಿದ್ದೀರಿ. ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗ್ಗಿ. ಗುಮಾಸ್ತ ಕೆಲಸದಲ್ಲಿದ್ದವರಿಗೆ ವಿರಾಮ ಸಿಗುವಂತಾಗಲಿದೆ.

ವೃಷಭ: ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಯುವುದು. ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಕೇವಲ ಸಮಯ ಹಾಳಾಗುವುದು ಎಂಬುದು ತಿಳಿದಿರಲಿ. ತರಕಾರಿ ಮಾರಾಟಗಾರರಿಗೆ ಸುದಿನ.

ಮಿಥುನ: ಆಪ್ತರಿಂದ ಬರುವ ಸಲಹೆ–ಸೂಚನೆಗಳಿಗೆ ಗಮನ ನೀಡಿ ಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗ್ಗಿ. ಹೊಸಜೀವನ ಪ್ರಾರಂಭವಾಗುವುದರಿಂದ ದೇವತಾ ಕಾರ್ಯಗಳನ್ನು ಜರುಗಿಸುವ ಬಗ್ಗೆ ಯೋಚಿಸಿ.

ಕರ್ಕಾಟಕ: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವೈದ್ಯರ ಸಂಪರ್ಕ ಮತ್ತು ಸಹಾಯ ಹಸ್ತ ಸಿಗುವುದು. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲ ನಿವಾರಿಸಿಕೊಳ್ಳುವಿರಿ. ಪಂಚಾಕ್ಷರಿ ಮಂತ್ರ ಜಪಿಸಿ.

ಸಿಂಹ: ವ್ಯಾಪಾರ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜೊತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ರಾಜಕೀಯ ವ್ಯಕ್ತಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದೀರಿ. ರಾಜಕೀಯ ವಿದ್ಯಮಾನ ಎಚ್ಚರಿಕೆಯಿಂದ ಗಮನಿಸಿರಿ.

ಕನ್ಯಾ: ಸಂಸಾರ ನಿರ್ವಹಣೆ ಸಲಭವೆನಿಸುವುದಿಲ್ಲ. ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ, ಅನಿವಾರ್ಯ. ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ. ಮಕ್ಕಳ ಅಗತ್ಯಗಳನ್ನು ಪೂರೈಸಿ.

ತುಲಾ: ಕುಟುಂಬದ ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳುವುದರ ಬಗ್ಗೆ ನಿಮ್ಮ ನಡೆ ಇರಲಿ. ಆತ್ಮಾಭಿಮಾನವನ್ನು ಸಂರಕ್ಷಿಸಿಕೊಳ್ಳಿ. ಆಧ್ಯಾತ್ಮಿಕ ಚಿಂತನೆಯು ಜೀವನದ ಧೈರ್ಯವನ್ನು ವೃದ್ಧಿಸುತ್ತದೆ.

ವೃಶ್ಚಿಕ: ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ದಿನಗಳು ನೆಮ್ಮದಿದಾಯಕವಾಗಲಿವೆ. ಸಂಜೆಯ ಸಮಯದ ಪುಟ್ಟದೊಂದು ಪ್ರಯಾಣ ಹುರುಪು ತುಂಬಲಿದೆ.

ಧನು: ಕೋಪದ ಮೇಲೆ ನಿಯಂತ್ರಣವನ್ನು ಸಾಧಿಸದಿದ್ದರೆ ಸಹೋದರರು ಮತ್ತು ಸ್ನೇಹಿತರು ಎದುರಾಳಿಗಳಾಗುವರು. ಸಾಧ್ಯವಾದ ಮಟ್ಟಿಗೆ ಶಾಂತವಾಗಿರಿ. ತೋಟದ ಬೆಳೆಗಳಿಂದ ಉತ್ತಮ ಆದಾಯವಿರುವುದು.

ಮಕರ: ಕೆಲಸಗಳ ಬಗ್ಗೆ ಪುನರವಲೋಕನ ಮಾಡಿ. ಬಂಧು ಮಿತ್ರರೊಂದಿಗೆ ಸಂತೋಷ ಹಂಚಿಕೊಳ್ಳುವಿರಿ. ಮನೆ ಕೊಳ್ಳುವ ವಿಷಯ ಇತ್ಯರ್ಥವಾಗುವುದು. ಹಳದಿ ವರ್ಣ ಶುಭದಾಯಕ.

ಕುಂಭ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣವಿರುವುದು. ಹಳೆಯ ವಾಹನವನ್ನು ಕೊಟ್ಟು ಹೊಸ ವಾಹನ ಖರೀದಿ ಮಾಡುವ ಯೋಚನೆಗೆ ಜೀವ ಬಂದಂತೆ ಆಗುವುದು. ಮಗನ ಕಾರ್ಯಸಿದ್ಧಿಗೆ ಗಣೇಶನಿಗೆ ಪೂಜೆ ಮಾಡಿಸಿ.

ಮೀನ: ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ನಿಮಗೆ ಬಂದಿದೆ. ಆದರೂ ಮುನ್ನೆಚ್ಚರಿಕೆ ಅಗತ್ಯ. ಆಡಿಟಿಂಗ್ ಕೆಲಸಗಳಿಂದ ವರಮಾನ ಗಳಿಸುವಿರಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ಷೇರುಪೇಟೆ ವಹಿವಾಟು — ಹಿಂದಿನ ಅಂತ್ಯ 80,543 | ಇಂದಿನ ಅಂತ್ಯ 80,623 | 79

ಎನ್‌ಎಸ್‌ಇ ನಿಫ್ಟಿ — ಹಿಂದಿನ ಅಂತ್ಯ: 24,574 | ಇಂದಿನ ಅಂತ್ಯ: 24,596 | ದಿನದ ಗಳಿಕೆ: 21

ಮೊಟ್ಟೆ ಧಾರಣೆ (ಎನ್‌ಇಸಿಸಿ) — ಬೆಂಗಳೂರು: 100 ಕ್ಕೆ ₹485; 12 ಕ್ಕೆ ₹66 | ಮೈಸೂರು: 100 ಕ್ಕೆ ₹495

ರಾಮನಗರ ರೇಷ್ಮೆಗೂಡು — ಮಿಶ್ರತಳಿ (ಪ್ರತಿ ಕೆ.ಜಿ) ₹400-670 | ದ್ವಿತಳಿ (ಪ್ರತಿ ಕೆ.ಜಿ) ₹412-793

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ) — ಆರ್‌ಎಸ್‌ಎಸ್-4 ₹200 | ಆರ್‌ಎಸ್‌ಎಸ್-5 ₹194 | ಗುಡ್ ಲಾಟ್ ₹178

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) — ಶೇಂಗಾ (ರಿಫೈನ್) ₹1355 (1355) | ಸೋಯಾ (ರಿಫೈನ್) ₹1235 (1240) | ಸೂರ್ಯಕಾಂತಿ (ರಿಫೈನ್) ₹1350 (1355) | ಪಾಮೋಲಿನ್ ₹1200 (1205)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ) — ಅರಸೀಕೆರೆ ₹26000-26000 | ದಾವಣಗೆರೆ ₹24000-26500

ಚಿಟಿಕೆ ಸುದ್ದಿ

ಚಿನ್ನ: ₹3,600 ಏರಿಕೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಗುರುವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಾಗಿದೆ. ಹೀಗಾಗಿ, ದೇಶದ ಚಿನಿವಾರ ಪೇಟೆಯಲ್ಲೂ ಧಾರಣೆ ಹೆಚ್ಚಳವಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧ) ₹3,600 ಹೆಚ್ಚಳವಾಗಿ, ₹1,02,620ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,02,200 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1,500 ಹೆಚ್ಚಳವಾಗಿ, ₹1.14 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಅಮೆರಿಕ ಆಡಳಿತವು ಭಾರತದ ಸರಕುಗಳ ಆಮದು ಮೇಲೆ ಹೆಚ್ಚುವರಿ ಸುಂಕ ವಿಧಿಸಿದೆ. ಇದು ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಬಿಕ್ಕಟ್ಟನ್ನು ಸೃಷ್ಟಿಸಿದೆ. ಹೀಗಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನ ಖರೀದಿಸಲು ಮುಂದಾಗಿದ್ದರಿಂದ ಹಳದಿ ಲೋಹದ ದರದಲ್ಲಿ ಹೆಚ್ಚಳವಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

'ಶೇ 50ರಷ್ಟು ಸುಂಕದಿಂದ ನಷ್ಟ'

'ಸುಂಕದ ದಿಢೀರ್ ಏರಿಕೆಯ ಪರಿಣಾಮ ಸಣ್ಣ ಉದ್ದಿಮೆಗಳ ಮೇಲೆ ಹೆಚ್ಚು'

ನವದೆಹಲಿ (ಎಎಫ್‌ಪಿ): ಭಾರತದ ಸರಕುಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಿರುವ ಶೇಕಡ 50ರಷ್ಟು ತೆರಿಗೆಯ ಕಾರಣದಿಂದಾಗಿ ಭಾರಿ ನಷ್ಟ ಉಂಟಾಗಲಿದೆ ಎಂದು ಭಾರತದ ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ.

'ಸುಂಕವನ್ನು ಹೆಚ್ಚು ಮಾಡಿರುವುದು ಭಾರತದ ರಫ್ತು ವಹಿವಾಟುಗಳಿಗೆ ಗಂಭೀರ ಸ್ವರೂಪದ ಹಿನ್ನಡೆ. ನಾವು ಅಮೆರಿಕದ ಮಾರುಕಟ್ಟೆಗೆ ಕಳುಹಿಸುವ ಶೇ 55ರಷ್ಟು ಪಾಲಿನ ಮೇಲೆ ನೇರ ಪರಿಣಾಮ ಉಂಟಾಗಲಿದೆ' ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಸಿ. ರಲ್ಹನ್ ಹೇಳಿದ್ದಾರೆ.

ಖರೀದಿದಾರರು ತಾವು ಯಾವ ದೇಶದ ಸರಕು ಖರೀದಿಸಬೇಕು ಎಂಬುದನ್ನು ಪುನರ್ ಪರಿಶೀಲಿಸಲು ಆರಂಭಿಸಿರುವ ಕಾರಣಕ್ಕೆ 'ಹಲವು ರಫ್ತು ಕಾರ್ಯಾದೇಶಗಳನ್ನು ಈಗಾಗಲೇ ತಡೆಹಿಡಿಯಲಾಗಿದೆ' ಎಂದು ಕೂಡ ಅವರು ಹೇಳಿದ್ದಾರೆ.

ಸಣ್ಣ ಹಾಗೂ ಮಧ್ಯಮ ಗಾತ್ರದ ಹಲವು ಉದ್ದಿಮೆಗಳ ಲಾಭದ ಪ್ರಮಾಣವು ಈಗಾಗಲೇ ಬಹಳ ಕಡಿಮೆ ಇದೆ. ಈಗ ಆಗಿರುವ ದಿಢೀರ್ ವೆಚ್ಚ ಏರಿಕೆಯನ್ನು ತಾಳಿಕೊಳ್ಳುವುದು ಅವುಗಳ ಕೆಲಸವಲ್ಲ ಎಂದು ಅವರು ವಿವರಿಸಿದ್ದಾರೆ.

'ಅಧ್ಯಕ್ಷ ಟ್ರಂಪ್ ಅವರು ಹೆಚ್ಚುವರಿಯಾಗಿ ಶೇ 25ರಷ್ಟು ತೆರಿಗೆ ವಿಧಿಸಿರುವುದು ಜಾರಿಗೆ ಬಂದಲ್ಲಿ, ಪ್ರವರ್ಧಮಾನಕ್ಕೆ ಬರುತ್ತಿರುವ ತಯಾರಿಕಾ ಕೇಂದ್ರವಾಗಿ ಭಾರತವು ಗಳಿಸಿರುವ ಆಕರ್ಷಣೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ' ಎಂದು ಕ್ಯಾಪಿಟಲ್ ಎಕನಾಮಿಕ್ಸ್ ಸಂಸ್ಥೆಯ ಶಿಲಾನ್ ಶಾ ಹೇಳಿದ್ದಾರೆ.

ರಫ್ತಿನಲ್ಲಿ ಆಗುವ ಇಳಿಕೆಯ ಪರಿಣಾಮವಾಗಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಈ ವರ್ಷದಲ್ಲಿ ಸರಿಸುಮಾರು ಶೇ 6ರಷ್ಟು ಮಾತ್ರ ಆಗಲಿದೆ ಎಂದು ಕೂಡ ಅವರು ಅಂದಾಜು ಮಾಡಿದ್ದಾರೆ.

ಸ್ಮಾರ್ಟ್‌ಫೋನ್‌ಗಳು, ಔಷಧಗಳು, ಮುತ್ತು ಮತ್ತು ಹವಳಗಳು, ಜವಳಿ ಹಾಗೂ ಕೈಗಾರಿಕಾ ಯಂತ್ರೋಪಕರಣಗಳು ಭಾರತದಿಂದ ಅಮೆರಿಕಕ್ಕೆ ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತವೆ. ಆಭರಣಗಳು ಹಾಗೂ ಸಾಗರ ಉತ್ಪನ್ನಗಳು ಕೂಡ ಹೆಚ್ಚು ರಫ್ತಾಗುತ್ತವೆ.



ಜಾಗತಿಕ ಶಕ್ತಿಗಳು ಬೆದರಿಸುತ್ತಲೇ ಇರುತ್ತವೆ: ಗೋಯಲ್

ಭಾರತವು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವವರೆಗೆ ಜಾಗತಿಕ ಶಕ್ತಿಗಳು ಭಾರತವನ್ನು ಬೆದರಿಸುತ್ತಲೇ ಇರುತ್ತವೆ ಎಂದು ಎಟರ್ನಲ್ ಕಂಪನಿಯ ಸಿಇಒ ದೀಪಿಂದರ್ ಗೋಯಲ್ ಹೇಳಿದ್ದಾರೆ. ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸುವ ಆದೇಶ ಹೊರಡಿಸಿದ ನಂತರ ಗೋಯಲ್ ಈ ಮಾತು ಆಡಿದ್ದಾರೆ. 'ಬೆದರಿಕೆ' ಹಾಗೂ 'ಸುಂಕ'ದ ನಡುವೆ ಭಾರತವು ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಲು ಸಾಮೂಹಿಕ ತೀರ್ಮಾನವೊಂದನ್ನು ಮಾಡಬೇಕು ಎಂದು ಗೋಯಲ್ ಅವರು 'ಎಕ್ಸ್' ವೇದಿಕೆಯಲ್ಲಿ ಬರೆದಿದ್ದಾರೆ.

'ಕೇಂದ್ರ ತಕ್ಷಣವೇ ನೆರವು ಒದಗಿಸಬೇಕು'

ನವದೆಹಲಿ (ಪಿಟಿಐ): ಸುಂಕವನ್ನು ದುಪ್ಪಟ್ಟು ಮಾಡಿರುವ ಅಮೆರಿಕದ ಕ್ರಮದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಿದ್ಧ ಉಡುಪು ರಫ್ತು ಉತ್ತೇಜನಾ ಮಂಡಳಿಯು (ಎಇಪಿಸಿ) ಕೇಂದ್ರ ಸರ್ಕಾರವು ತಕ್ಷಣವೇ ಹಣಕಾಸಿನ ನೆರವು ಒದಗಿಸಬೇಕು ಎಂದು ಆಗ್ರಹಿಸಿದೆ. ಅತಿಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚು ಹಾನಿಯಾಗಲಿದೆ ಎಂದು ಅದು ಹೇಳಿದೆ.

'ಈ ಪರಿಯ ಸುಂಕವನ್ನು ನಮ್ಮ ಉದ್ಯಮವು ತಾಳಿಕೊಳ್ಳಲು ಸಾಧ್ಯವೇ ಇಲ್ಲ. ಅನಪೇಕ್ಷಿತವಾದ ಈ ಸುಂಕ ಏರಿಕೆಯು ಅತಿಸಣ್ಣ ಹಾಗೂ ಮಧ್ಯಮ ಗಾತ್ರದ ಸಿದ್ಧ ಉಡುಪು ಉದ್ಯಮದ ಪಾಲಿಗೆ ಸಾವಿನ ಕರೆಗಂಟೆಯಂತೆ ಇದೆ ಎಂಬುದನ್ನು ಸರ್ಕಾರವೂ ಅರ್ಥ ಮಾಡಿಕೊಳ್ಳುತ್ತದೆ ಎನ್ನುವ ವಿಶ್ವಾಸವು ನನಗೆ ಇದೆ' ಎಂದು ಮಂಡಳಿಯ ಅಧ್ಯಕ್ಷ ಸುಧೀರ್ ಸೇಖ್ರಿ ಹೇಳಿದ್ದಾರೆ.

ಭಾರತದ ಸಿದ್ಧ ಉಡುಪು ಉದ್ಯಮಕ್ಕೆ ಅಮೆರಿಕವು ದೊಡ್ಡ ಮಾರುಕಟ್ಟೆ. 2024ರಲ್ಲಿ ಭಾರತದ ಒಟ್ಟು ಜವಳಿ ರಫ್ತಿನಲ್ಲಿ ಅಮೆರಿಕದ ಪಾಲು ಶೇ 33ರಷ್ಟು ಇತ್ತು.

ಜವಳಿ, ರಾಸಾಯನಿಕ ವಲಯಕ್ಕೆ ನೆರವು?

ನವದೆಹಲಿ (ಪಿಟಿಐ): ಅಮೆರಿಕವು ವಿಧಿಸಿರುವ ಸುಂಕದ ಪರಿಣಾಮವು ಹೆಚ್ಚು ಇರಲಿರುವ ಜವಳಿ ಹಾಗೂ ರಾಸಾಯನಿಕಗಳ ವಲಯಗಳಿಗೆ ರಫ್ತು ಉತ್ತೇಜನಾ ಮಿಷನ್ ಅಡಿಯಲ್ಲಿ ಕೇಂದ್ರ ಸರ್ಕಾರವು ಆದ್ಯತೆಯ ಮೇರೆಗೆ ನೆರವು ಒದಗಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸುಂಕದ ಪರಿಣಾಮಗಳನ್ನು ಅಂದಾಜು ಮಾಡಲು, ನೆರವು ಕ್ರಮಗಳು ಏನಿರಬೇಕು ಎಂಬುದನ್ನು ಅರಿಯಲು ಜವಳಿ ಹಾಗೂ ರಾಸಾಯನಿಕಗಳ ರಫ್ತುದಾರರ ಜೊತೆ ವಾಣಿಜ್ಯ ಸಚಿವಾಲಯವು ನಡೆಸಿದ ಸಮಾಲೋಚನಾ ಸಭೆಯಲ್ಲಿ ಈ ವಿಷಯಗಳ ಬಗ್ಗೆ ಚರ್ಚೆ ಆಗಿದೆ ಎಂದು ಗೊತ್ತಾಗಿದೆ.

ಬಜೆಟ್‌ನಲ್ಲಿ ಘೋಷಿಸಿರುವ ರಫ್ತು ಉತ್ತೇಜನಾ ಮಿಷನ್ ಕುರಿತು ಕೇಂದ್ರ ಸರ್ಕಾರ ಕಡೆಯಿಂದ ಕೆಲಸಗಳು ನಡೆದಿವೆ. ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಸುಲಭವಾಗಿ ಸಾಲ ಕೊಡಿಸುವುದು ಹಾಗೂ ದೇಶದ ಹೊರಗೆಯೂ ಗೋದಾಮು ಸೇವೆ ಒದಗಿಸುವ ಕ್ರಮಗಳನ್ನು ಈ ಮಿಷನ್ ಒಳಗೊಳ್ಳುವ ನಿರೀಕ್ಷೆ ಇದೆ.

ರಫ್ತುದಾರರು ಹೊಸ ಮಾರುಕಟ್ಟೆಗಳನ್ನು ಹುಡುಕುವ ಕೆಲಸವನ್ನೂ ಶುರು ಮಾಡಿದ್ದಾರೆ ಎಂದು ಉದ್ಯಮದ ಮೂಲಗಳು ಹೇಳಿವೆ.

ರತ್ನ, ಆಭರಣ ಉದ್ಯಮಕ್ಕೆ ಪೆಟ್ಟು



ಮುಂಬೈ (ಪಿಟಿಐ): ರತ್ನ ಮತ್ತು ಆಭರಣ ರಫ್ತುದಾರರ ಸಂಘಟನೆಯಾದ 'ರತ್ನ ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿ'ಯು ಉದ್ಯಮಕ್ಕೆ ಬೆಂಬಲವಾಗಿ ನಿಲ್ಲಲು ನೀತಿಗಳಲ್ಲಿ ತಕ್ಷಣವೇ ಸುಧಾರಣೆ ತರಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಭಾರತದ ರತ್ನ ಮತ್ತು ಆಭರಣಗಳಿಗೆ ಅಮೆರಿಕವು ದೊಡ್ಡ ಮಾರುಕಟ್ಟೆ. ಈ ಉದ್ಯಮ ವಲಯವು ನಡೆಸುವ ಜಾಗತಿಕ ವಹಿವಾಟಿನಲ್ಲಿ ಅಮೆರಿಕದ ಪಾಲು ಸರಿಸುಮಾರು ಶೇ 30ರಷ್ಟಿದೆ ಎಂದು ಮಂಡಳಿಯ ಅಧ್ಯಕ್ಷ ಕಿರೀಟ್ ಭನ್ಸಾಲಿ ಹೇಳಿದ್ದಾರೆ.

ಈ ಪ್ರಮಾಣದ ಸುಂಕವು ರತ್ನ ಮತ್ತು ಆಭರಣ ವಲಯಕ್ಕೆ ಬಹಳ ಕೇಡು ಉಂಟುಮಾಡಲಿದೆ ಎಂದು ಭನ್ಸಾಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಭಾರತದಿಂದ ರಫ್ತಾಗುವ ಕತ್ತರಿಸಿದ ಹಾಗೂ ಪಾಲಿಷ್ ಮಾಡಲಾದ ವಜ್ರಗಳ ಪೈಕಿ ಶೇ 50ರಷ್ಟು ಅಮೆರಿಕ ತಲುಪುತ್ತವೆ. ಪರಿಷ್ಕೃತ ಸುಂಕದ ಪರಿಣಾಮವಾಗಿ ಈ ಉದ್ಯಮ ವಲಯದಲ್ಲಿ ಚಟುವಟಿಕೆಗಳು ಸ್ಥಗಿತಗೊಳ್ಳಬಹುದು ಎಂಬ ಆತಂಕ ಎದುರಾಗಿದೆ.

ಭಾರತದಕ್ಕೆ ಸ್ಪರ್ಧೆ ನೀಡುವ ಇತರ ತಯಾರಿಕಾ ದೇಶಗಳ (ಟರ್ಕಿ, ವಿಯೆಟ್ನಾಂ, ಥಾಯ್ಲೆಂಡ್) ಮೇಲೆ ಕಡಿಮೆ ಸುಂಕ ವಿಧಿಸಲಾಗಿದೆ. ಇದು ಭಾರತದ ಉದ್ಯಮದ ಪಾಲಿಗೆ ಹೆಚ್ಚು ಕಳವಳಕಾರಿ ಎಂದು ಭನ್ಸಾಲಿ ಹೇಳಿದ್ದಾರೆ.

ಬಿದ್ದು, ಎದ್ದ ಷೇರುಪೇಟೆ ಸೂಚ್ಯಂಕ



ಮುಂಬೈ (ಪಿಟಿಐ): ಗುರುವಾರದ ಆರಂಭಿಕ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ವಹಿವಾಟಿನ ಕೊನೆಯ ಹೊತ್ತಿಗೆ ಪುಟಿದೆದ್ದವು. ಹೂಡಿಕೆದಾರರು ಐ.ಟಿ, ಬ್ಯಾಂಕಿಂಗ್ ವಲಯದ ಷೇರುಗಳನ್ನು ಹೆಚ್ಚಾಗಿ ಖರೀದಿಸಿದರು.

ಅಮೆರಿಕವು ಭಾರತದ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ವಿಧಿಸುವುದಾಗಿ ಬುಧವಾರ ಪ್ರಕಟಿಸಿದ್ದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದ್ದರಿಂದ ಸೂಚ್ಯಂಕಗಳು ಬೆಳಿಗ್ಗೆ ಇಳಿಕೆ ಕಂಡಿದ್ದವು.

ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ನಡುವೆ ಶಾಂತಿ ಮಾತುಕತೆ ನಡೆಯುವ ಸಾಧ್ಯತೆ ಇದೆ ಎಂಬ ವರದಿಗಳು ಬಂದ ಹೇಳಿದ ಬಳಿಕ ಸೂಚ್ಯಂಕಗಳು ಏರಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ವಾಹನಗಳು, ಔಷಧಗಳು, ಲೋಹ ಮತ್ತು ಇಂಧನ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳ ಸಹ ಸೂಚ್ಯಂಕಗಳ ಏರಿಕೆಗೆ ನೆರವಾದವು' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ) — 07-08-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಪಾಮ್ ವಾರದ ಡೆಲಿವರಿ	1198 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1285)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,00,400 (1,00,000)
ಬೆಳ್ಳಿ ಕೆ.ಜಿಗೆ	1,15,100 (1,13,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಟಿಸಿಎಸ್: ಸೆ.1ರಿಂದ ವೇತನ ಹೆಚ್ಚಳ

ನವದೆಹಲಿ/ಬೆಂಗಳೂರು (ಪಿಟಿಐ/ರಾಯಿಟರ್ಸ್): ದೇಶದ ಅತಿದೊಡ್ಡ ಐ.ಟಿ ಸೇವಾ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತನ್ನ ಶೇ 80ರಷ್ಟು ಉದ್ಯೋಗಿಗಳ ವೇತನ ಹೆಚ್ಚಳಕ್ಕೆ ನಿರ್ಧರಿಸಿದೆ.

ವೇತನ ಹೆಚ್ಚಳವು ಸೆಪ್ಟೆಂಬರ್ 1ರಿಂದ ಅನ್ವಯವಾಗಲಿದೆ ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯ ಅಧಿಕಾರಿಗಳಾದ ಮಿಲಿಂದ್ ಲಕ್ಕಡ್ ಮತ್ತು ಕೆ. ಸುದೀಪ್ ಉದ್ಯೋಗಿಗಳಿಗೆ ಕಳುಹಿಸಿದ ಇ-ಮೇಲ್‌ನಲ್ಲಿ ತಿಳಿಸಿದ್ದಾರೆ.

ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ 12 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಕೆಲಸದಿಂದ ವಜಾ ಮಾಡುವುದಾಗಿ ಹೇಳಿದ ನಂತರ ಈ ವೇತನ ಹೆಚ್ಚಳ ನಿರ್ಧಾರ ಪ್ರಕಟಿಸಿದೆ.

ಕಂಪನಿಯು ಪ್ರತಿವರ್ಷ ಏಪ್ರಿಲ್‌ನಲ್ಲಿ ವೇತನ ಹೆಚ್ಚಳ ಮಾಡುತ್ತಿತ್ತು. ಈ ಬಾರಿ ಐದು ತಿಂಗಳು ತಡವಾಗಿದೆ. ಜಾಗತಿಕವಾಗಿ ಬೇಡಿಕೆ ಕಡಿಮೆ ಆಗಿರುವುದು, ಅಮೆರಿಕದ ವಾಣಿಜ್ಯ ನೀತಿಯಲ್ಲಿನ ಅನಿಶ್ಚಿತತೆಯಿಂದ ವೇತನ ಏರಿಕೆ ತಡವಾಗಿದೆ.

ಟ್ರೈನಿಗಳಿಂದ ಆರಂಭಿಸಿ ದಶಕಕ್ಕೂ ಹೆಚ್ಚಿನ ಅವಧಿಯಿಂದ ಕೆಲಸ ಮಾಡುತ್ತಿರುವ ನೌಕರರವರೆಗೆ ವೇತನ ಹೆಚ್ಚಳ ಅನ್ವಯವಾಗಲಿದೆ. ಆದರೆ, ಉಳಿದ ಶೇ 20ರಷ್ಟು ಹಿರಿಯ ಉದ್ಯೋಗಿಗಳ ವೇತನ ಹೆಚ್ಚಳದ ಬಗ್ಗೆ ಇ-ಮೇಲ್‌ನಲ್ಲಿ ತಿಳಿಸಿಲ್ಲ.

ಸುದ್ದಿ 2 ನಿಮಿಷ

6ಜಿ ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿರುವ ಜಿಯೊ

ನವದೆಹಲಿ (ಪಿಟಿಐ): ದೂರಸಂಪರ್ಕ ಸೇವಾ ಕಂಪನಿ ಜಿಯೊ, 6ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ, ಈ ಕ್ಷೇತ್ರದಲ್ಲಿ ಜಾಗತಿಕ ನಾಯಕ ಆಗುವ ಗುರಿಯನ್ನು ಹೊಂದಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ವಾರ್ಷಿಕ ವರದಿ ತಿಳಿಸಿದೆ.

ಜಗತ್ತಿನಲ್ಲಿ ಮೊಬೈಲ್ ಮೂಲಕ ಇಂಟರ್ನೆಟ್ ಡೇಟಾ ಸೇವೆ ಒದಗಿಸುವ ಅತಿದೊಡ್ಡ ಕಂಪನಿಯಾಗಿರುವ ಜಿಯೊ, 17ಕ್ಕೂ ಹೆಚ್ಚು ಎಕ್ಸಾಬೈಟ್‌ನಷ್ಟು ಡೇಟಾವನ್ನು ಮಾಸಿಕವಾಗಿ ನಿರ್ವಹಿಸುತ್ತಿದೆ. ಭಾರತದಲ್ಲಿನ ವಯರ್‌ಲೆಸ್ ಡೇಟಾ ಬಳಕೆಯಲ್ಲಿ ಶೇ 60ರಷ್ಟು ಜಿಯೊ ಮೂಲಕ ಆಗುತ್ತಿದೆ.

'ಕಂಪನಿಯು ಭವಿಷ್ಯದ ಸಂವಹನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ. 6ಜಿ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

2016ರಲ್ಲಿ 4ಜಿ, 2018ರಲ್ಲಿ ಮನೆಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ, 2022ರಲ್ಲಿ 5ಜಿ ಮತ್ತು 2024ರಲ್ಲಿ ವಯರ್‌ಲೆಸ್ ಬ್ರಾಡ್‌ಬ್ಯಾಂಡ್ ಸಂಪರ್ಕ ಸೇವೆಯನ್ನು ಕಂಪನಿ ಆರಂಭಿಸಿದೆ.



ಕಂಪನಿಯು ತನ್ನದೇ ಆದ ಉಪಗ್ರಹ ಆಧಾರಿತ ಸಂವಹನ ವ್ಯವಸ್ಥೆ ಆರಂಭಿಸುತ್ತಿದೆ. ಅಲ್ಲದೆ, ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಜೊತೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ಭಾರತದಲ್ಲಿನ ತನ್ನ ಗ್ರಾಹಕರಿಗೆ ಈ ಸೇವೆ ಒದಗಿಸಲು ನಿರ್ಧರಿಸಿದೆ.

2025ರ ಮಾರ್ಚ್ ವೇಳೆಗೆ ಕಂಪನಿಯು 19.1 ಕೋಟಿ 5ಜಿ ಬಳಕೆದಾರರನ್ನು ಹೊಂದಿದೆ.

ವಾಹನಗಳ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ವಾಹನಗಳ ಚಿಲ್ಲರೆ ಮಾರಾಟವು ಜುಲೈ ತಿಂಗಳಲ್ಲಿ ಶೇ 4ರಷ್ಟು ಇಳಿಕೆಯಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಗುರುವಾರ ತಿಳಿಸಿದೆ.

ಕಳೆದ ವರ್ಷದ ಜುಲೈನಲ್ಲಿ 20,52,759 ವಾಹನಗಳು ಮಾರಾಟವಾಗಿದ್ದವು. ಈ ಬಾರಿ 19,64,213 ವಾಹನಗಳು ಮಾರಾಟವಾಗಿವೆ. ಪ್ರಯಾಣಿಕ ವಾಹನಗಳು ಮತ್ತು ದ್ವಿಚಕ್ರ ವಾಹನಗಳಿಗೆ ಬೇಡಿಕೆ ಕಡಿಮೆಯಾಗಿದ್ದರಿಂದ ಒಟ್ಟು ವಾಹನಗಳ ಮಾರಾಟದಲ್ಲಿ ಇಳಿಕೆ ಕಂಡುಬಂದಿದೆ ಎಂದು ಎಫ್‌ಎಡಿಎ ತಿಳಿಸಿದೆ.

ಪ್ರಯಾಣಿಕ ವಾಹನಗಳು ಕಳೆದ ಜುಲೈನಲ್ಲಿ 3,31,280 ಮಾರಾಟವಾಗಿದ್ದವು. ಈ ಬಾರಿ 3,28,613 ವಾಹನಗಳು ಮಾರಾಟವಾಗಿವೆ. ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 6ರಷ್ಟು ಇಳಿಕೆಯಾಗಿದೆ. 76,439 ವಾಣಿಜ್ಯ ವಾಹನಗಳ ಮಾರಾಟವಾಗಿದೆ. ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ.

ಬಿತ್ತನೆ ಚಟುವಟಿಕೆ ಮತ್ತು ಹೆಚ್ಚಿದ ಮಳೆಯಿಂದಾಗಿ ನಗರ ಪ್ರದೇಶಕ್ಕಿಂತಲೂ ಗ್ರಾಮೀಣ ಪ್ರದೇಶದಲ್ಲಿ ದ್ವಿಚಕ್ರ ವಾಹನಗಳಿಗೆ ಬೇಡಿಕೆ ಕಡಿಮೆಯಾಗಿದೆ. ಆದರೆ, ಆಗಸ್ಟ್‌ನಿಂದ ಹಬ್ಬಗಳ ಋತು ಪ್ರಾರಂಭವಾಗಿದ್ದು, ಮಾರಾಟ ಹೆಚ್ಚಳವಾಗುವ ವಿಶ್ವಾಸವನ್ನು ಡೀಲರ್‌ಗಳು ಹೊಂದಿದ್ದಾರೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಕೋಕ	16319-22319	ಕೋಕ	5869-24699
ಚಾಲಿ	40000-42798	ಕೆಂಪುಗೋಟು	20219-21689	ಕೆಂಪುಗೋಟು	21999-29100
ಚಿಪ್ಪು	17709-30699	ರಾಶಿ	43699-50009	ರಾಶಿ	28000-58909
ಕೋಕ	6322-22789	ತಟ್ಟಿಬೆಟ್ಟೆ	27900-30319	ಸಿಪ್ಪೆಗೋಟು	8099-20399
ಹೊಸಚಾಲಿ	36009-42799	**ಶಿರಸಿ**		**ಯಲ್ಲಾಪುರ**	
ಶಿವಮೊಗ್ಗ		ಬೆಟ್ಟೆ	31298-38989	ಅಪಿ	65179-66895
ಬೆಟ್ಟೆ	54209-61600	ಬಿಳಿಗೋಟು	24500-34299	ಬಿಳಿಗೋಟು	18969-32900
ಗೊರಬಲು	18020-34689	ಚಾಲಿ	38018-43599	ಚಾಲಿ	33701-43009
ರಾಶಿ	43009-59189	ಕೆಂಪುಗೋಟು	22199-25199	ಕೋಕ	11212-19410
ಸರಕು	50040-87100	ರಾಶಿ	45599-49299	ಕೆಂಪುಗೋಟು	18700-26899
ಸಿದ್ದಾಪುರ		**ಸಾಗರ**		ರಾಶಿ	42809-56399
ಬಿಳಿಗೋಟು	26809-32389	ಬಿಳಿಗೋಟು	7309-29009	ತಟ್ಟಿಬೆಟ್ಟೆ	28000-38628
ಚಾಲಿ	34899-42209	ಚಾಲಿ	19989-38799		

ಸಂಕ್ಷಿಪ್ತ ಸುದ್ದಿ

ಎಲ್‌ಐಸಿಗೆ ₹10,987 ಕೋಟಿ ನಿವ್ವಳ ಲಾಭ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ₹10,987 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹10,461 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 5ರಷ್ಟು ಹೆಚ್ಚಳವಾಗಿದೆ ಎಂದು ನಿಗಮವು ಷೇರುಪೇಟೆಗೆ ಗುರುವಾರ ತಿಳಿಸಿದೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹2.10 ಲಕ್ಷ ಕೋಟಿಯಷ್ಟಿತ್ತು. ಈ ಬಾರಿ ₹2.22 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಮೊದಲ ವರ್ಷದ ಕಂತಿನ ಮೂಲಕ ₹7,525 ಕೋಟಿ ಸಂಗ್ರಹವಾಗಿದೆ. ನವೀಕರಿಸಿದ ಕಂತುಗಳ ಮೂಲಕ ₹59,885 ಕೋಟಿ ಗಳಿಸಲಾಗಿದೆ ಎಂದು ತಿಳಿಸಿದೆ.

ರಾಜ್ಯದ ನಾಲ್ಕು ವಿಮಾನ ನಿಲ್ದಾಣಗಳಿಗೆ ₹560 ಕೋಟಿ ನಷ್ಟ

ನವದೆಹಲಿ: ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ವಹಿಸುವ ಕರ್ನಾಟಕದ ನಾಲ್ಕು ವಿಮಾನ ನಿಲ್ದಾಣಗಳು 2015-16ರಿಂದ ಇಲ್ಲಿಯವರೆಗೆ ₹560 ಕೋಟಿ ನಷ್ಟ ಅನುಭವಿಸಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯೆ ಜೆಬಿ ಮಾಥೂರ್ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಇಲಾಖೆಯ ರಾಜ್ಯ ಸಚಿವ ಮುರಳೀಧರ್ ಮೊಹೋಲ್, 'ರಾಜ್ಯದ ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ ಹಾಗೂ ಮೈಸೂರು ನಿಲ್ದಾಣಗಳಿಗೆ ಭಾರಿ ನಷ್ಟ ಆಗಿದೆ' ಎಂದರು. '2024-25ನೇ ಸಾಲಿನಲ್ಲಿ ದೇಶದ 81 ವಿಮಾನ ನಿಲ್ದಾಣಗಳು ನಷ್ಟ ಕಂಡಿವೆ. ಕಳೆದ ಹತ್ತು ವರ್ಷಗಳಲ್ಲಿ ಈ ವಿಮಾನ ನಿಲ್ದಾಣಗಳು ಅನುಭವಿಸಿದ ಒಟ್ಟು ನಷ್ಟ ₹10,852.9 ಕೋಟಿ. ದೆಹಲಿಯ ಸಫ್ದರ್‌ಜಂಗ್ ವಿಮಾನ ನಿಲ್ದಾಣ ಗರಿಷ್ಠ ನಷ್ಟ ಅನುಭವಿಸಿದೆ' ಎಂದರು.

ಅನಾರೋಗ್ಯ: ಮ್ಯಾನ್ಮಾರ್ ಹಂಗಾಮಿ ಅಧ್ಯಕ್ಷ ಮಿಂಟ್ ಸ್ವೆ ನಿಧನ

ಬ್ಯಾಂಕಾಕ್ (ಎಪಿ): 2021ರ ಫೆಬ್ರುವರಿಯಲ್ಲಿ ಆಂಗ್ ಸಾನ್ ಸೂಕಿ ಅವರ ನೇತೃತ್ವದ ಚುನಾಯಿತ ಸರ್ಕಾರವನ್ನು ಉರುಳಿಸಿ ಸೇನಾಪಡೆಗಳು ದೇಶವನ್ನು ಹಿಡಿತಕ್ಕೆ ತೆಗೆದುಕೊಂಡ ಬಳಿಕ ಮ್ಯಾನ್ಮಾರ್‌ನ ಹಂಗಾಮಿ ಅಧ್ಯಕ್ಷರಾಗಿದ್ದ ಮಿಂಟ್ ಸ್ವೆ (74) ಅವರು ಗುರುವಾರ ನಿಧನರಾದರು.

ನೇಪ್ಯಿಟೌನ ಸೇನಾ ಆಸ್ಪತ್ರೆಯಲ್ಲಿ ಗುರುವಾರ ಬೆಳಿಗ್ಗೆ ಕೊನೆಯುಸಿರೆಳೆದರು ಎಂದು ಮ್ಯಾನ್ಮಾರ್‌ನ ಸೇನಾ ಮಾಹಿತಿ ಕೇಂದ್ರದ ಕಚೇರಿಯು ತಿಳಿಸಿದೆ. ಮಿಂಟ್ ಸ್ವೆ ಅವರು ಅವರು ಅನಾರೋಗ್ಯಕ್ಕೊಳಗಾಗಿದ್ದಾರೆ ಎಂದು ವರ್ಷದ ಹಿಂದೆಯೇ ಸಾರ್ವಜನಿಕವಾಗಿ ಘೋಷಿಸಲಾಗಿತ್ತು. ಆದಾದ ಬಳಿಕ ಅಧ್ಯಕ್ಷೀಯ ಜವಾಬ್ದಾರಿ ನಿರ್ವಹಿಸದಂತೆ ತಡೆಯಲಾಗಿತ್ತು. ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ನಡೆಸಲಾಗುವುದು ಎಂದು ಸೇನೆಯು ತಿಳಿಸಿದ್ದು, ದಿನಾಂಕವನ್ನು ಬಹಿರಂಗಪಡಿಸಿಲ್ಲ.

ಮಿಂಟ್ ಅವರು ನರವ್ಯೂಹ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದು, ಊಟ ಸೇರಿದಂತೆ ದೈನಂದಿನ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಕಳೆದ ವರ್ಷ ಜುಲೈನಲ್ಲಿ ಸರ್ಕಾರ ಪ್ರಕಟಿಸಿತ್ತು.

'ಮುಂದಿನ ದಿನಗಳಲ್ಲಿ ಟ್ರಂಪ್– ಪುಟಿನ್ ಭೇಟಿ'

ವಾಷಿಂಗ್ಟನ್ (ಎಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮುಂದಿನ ದಿನಗಳಲ್ಲಿ ಮುಖಾಮುಖಿ ಭೇಟಿಯಾಗಲಿದ್ದಾರೆ ಎಂದು ರಷ್ಯಾದ ಅಧ್ಯಕ್ಷರ ಕಚೇರಿ (ಕ್ರೆಮ್ಲಿನ್) ತಿಳಿಸಿದೆ.

ರಷ್ಯಾವು ನಡೆಸುತ್ತಿರುವ ದಾಳಿಯನ್ನು ಕೊನೆಗೊಳಿಸಿ, ಶಾಂತಿ ಸ್ಥಾಪನೆಯಾಗಬೇಕು ಎಂದು ಉಕ್ರೇನ್‌ನ ನಿವಾಸಿಗಳು ತೀವ್ರ ಒತ್ತಡ ಹೇರುತ್ತಿರುವುದು ಹೊಸ 'ಗ್ಯಾಲಪ್ ಸಮೀಕ್ಷೆ'ಯಲ್ಲಿ ಕಂಡುಬಂದಿತ್ತು. ಈ ಕಾರಣದಿಂದ ಎರಡೂ ದೇಶಗಳ ಅಧ್ಯಕ್ಷರ ಭೇಟಿಗೆ ಕಾಲ ಕೂಡಿಬಂದಿದೆ.

'ಸಭೆ ನಿಗದಿಪಡಿಸುವ ಕುರಿತು ಎರಡೂ ಕಡೆಗಳಲ್ಲಿ ಸಮಾಲೋಚನೆಗಳು ನಡೆಯುತ್ತಿದ್ದು, ಸ್ಥಳ ನಿಗದಿಪಡಿಸಲು ಒಪ್ಪಿಗೆ ಸಿಕ್ಕಿದೆ. ಸದ್ಯದಲ್ಲೇ ಸ್ಥಳ ಪ್ರಕಟಿಸಲಾಗುತ್ತದೆ' ಎಂದು ಪುಟಿನ್ ಅವರ ವಿದೇಶಾಂಗ ಸಲಹೆಗಾರ ಯುರಿ ಉಶಕೋವ್ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಪುಟಿನ್ ಜೊತೆ ಮೊದಲ ಮುಖಾಮುಖಿ ಭೇಟಿ ಇದಾಗಿರಲಿದೆ. ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ರಷ್ಯಾ– ಉಕ್ರೇನ್ ನಡುವಿನ ಯುದ್ಧ ಕೊನೆಯಾಗಲು ಈ ಸಭೆಯು ಮಹತ್ತರ ಹೆಜ್ಜೆಯಾಗಲಿದೆ ಎಂದು ವಿಶ್ಲೇಷಿಸಲಾಗಿದೆ. ಇದರ ಹೊರತಾಗಿಯೂ ರಷ್ಯಾ ವಿರುದ್ಧ ಹೋರಾಡುತ್ತಿರುವ ಉಕ್ರೇನ್‌ಗೆ ಅಮೆರಿಕವು ತನ್ನ ಬೆಂಬಲ ಮುಂದುವರಿಸಿದೆ.



ಡೊನಾಲ್ಡ್ ಟ್ರಂಪ್ ಮತ್ತು ವ್ಲಾದಿಮಿರ್ ಪುಟಿನ್ ಎಎಫ್‌ಪಿ ಚಿತ್ರ

ಭಾರತದ ಜತೆಗಿನ ಸ್ನೇಹ ಸರ್ವಕಾಲಕ್ಕೂ ಭದ್ರ: ರಷ್ಯಾ

ಮಾಸ್ಕೊ (ಪಿಟಿಐ): 'ಅಂತರರಾಷ್ಟ್ರೀಯ ಕಾನೂನುಗಳ ರಕ್ಷಣೆಯನ್ನು ಖಾತರಿಪಡಿಸಿಕೊಳ್ಳುವುದರ ಜತೆಗೆ ಆಧುನಿಕ ಸವಾಲುಗಳನ್ನು ಜಂಟಿಯಾಗಿ ಎದುರಿಸಲು ನಾವು ಬದ್ಧರಾಗಿದ್ದೇವೆ. ರಷ್ಯಾ ಮತ್ತು ಭಾರತದ ನಡುವಿನ ಸ್ನೇಹವು ಸರ್ವಕಾಲಕ್ಕೂ ಭದ್ರವಾಗಿರಲಿದೆ' ಎಂದು ರಷ್ಯಾದ ಭದ್ರತಾ ಮಂಡಳಿಯ ಕಾರ್ಯದರ್ಶಿ ಸರ್ಗೆ ಶೊಯಿಗು ಗುರುವಾರ ಹೇಳಿದ್ದಾರೆ.

ಇಂಧನ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಸಲು ಹಾಗೂ ಭಾರತಕ್ಕೆ ಪುಟಿನ್ ಭೇಟಿಯ ಸಿದ್ಧತೆ ಕುರಿತಂತೆ ಚರ್ಚಿಸಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಬಾಲ್ ಅವರು ರಷ್ಯಾಗೆ ತೆರಳಿದ್ದು, ಗುರುವಾರ ಸರ್ಗೆ ಅವರನ್ನು ಭೇಟಿಯಾಗಿದ್ದಾರೆ.

ಈ ವೇಳೆ ಮಾತನಾಡಿರುವ ಸರ್ಗೆ, 'ಪ್ರಧಾನಿ ಮೋದಿ ಹಾಗೂ ಪುಟಿನ್ ಅವರು ನಿರಂತರ ಸಂಪರ್ಕದಲ್ಲಿದ್ದು, ಉಭಯ ರಾಷ್ಟ್ರಗಳ ನಡುವಿನ ರಾಜಕೀಯ ಸಂಬಂಧ ಉತ್ತಮವಾಗಿದೆ. ವಿಶ್ವಾಸ, ಪರಸ್ಪರ ಹಿತಾಸಕ್ತಿ, ನಂಬಿಕೆಯ ಆಧಾರದಲ್ಲಿ ಭಾರತದೊಂದಿಗೆ ಹೊಂದಿರುವ ಉತ್ತಮ ಕಾರ್ಯತಂತ್ರ ಪಾಲುದಾರಿಕೆಯನ್ನು ಬಲಗೊಳಿಸುವುದು ರಷ್ಯಾದ ಆದ್ಯತೆ' ಎಂದಿದ್ದಾರೆ.

'ಅಲ್ಲದೇ, ಭಾರತ–ರಷ್ಯಾ ನಡುವಿನ ಸಂಬಂಧವು ಸರ್ವಕಾಲಕ್ಕೂ ಭದ್ರವಾಗಿ ಇರಲಿದೆ ಎಂದಿರುವ ಅವರು, ಶೀಘ್ರವೇ ನಮ್ಮ ನಾಯಕರ ನಡುವೆ ಪೂರ್ಣ ಪ್ರಮಾಣದ ಮಾತುಕತೆಯೂ ನಡೆಯಲಿದೆ. ಇದಕ್ಕಾಗಿ ದಿನಾಂಕ ನಿಗದಿಪಡಿಸಲಿದ್ದೇವೆ' ಎಂದೂ ತಿಳಿಸಿದ್ದಾರೆ.

ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವ ವಿಚಾರದಲ್ಲಿ ಅಮೆರಿಕ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತದ ಮೇಲೆ ಶೇ 25ರ ಪ್ರತಿಸುಂಕದ ಜತೆಗೆ ಶೇ 25 ಹೆಚ್ಚುವರಿ ಸುಂಕ ವಿಧಿಸಿದೆ. ಈ ನಡುವೆಯೇ ದೋಬಾಲ್ ಅವರು ರಷ್ಯಾ ಭೇಟಿ ಕೈಗೊಂಡಿರುವುದು ಮಹತ್ವ ಪಡೆದಿದೆ.

ಗಜೇಂದ್ರಗಡ ಪಟ್ಟೆದಂಚು ಸೀರೆಗೆ ಭೌಗೋಳಿಕ ಮಾನ್ಯತೆ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಸ್ವಾತಂತ್ರ್ಯಪೂರ್ವದಲ್ಲಿ ಸ್ಥಾಪನೆಗೊಂಡ ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದ ನೇಕಾರರು ಕೈಮಗ್ಗದಲ್ಲಿ ನೇಯುವ ಪಟ್ಟೆದಂಚು ಸೀರೆಗೆ ಭೌಗೋಳಿಕ ಮಾನ್ಯತೆ (ಜಿಐ ಟ್ಯಾಗ್) ಲಭಿಸಿದೆ.

ಸೀರೆಯ ಅಂಚಿನಲ್ಲಿ ಪಟ್ಟೆ ವಿನ್ಯಾಸ ಇರುವುದಕ್ಕೆ ಪಟ್ಟೆದಂಚು ಸೀರೆ ಎಂಬ ಹೆಸರು ಬಂದಿದೆ. ಪರಿಶುದ್ಧ ಹತ್ತಿ, ಪರಿಸರ ಸ್ನೇಹಿ ಬಣ್ಣ ಮತ್ತು ನೈಸರ್ಗಿಕ ಅಂಟು ಬಳಸಿ ಸೀರೆ ತಯಾರಿಸಲಾಗುತ್ತದೆ. ಅವು 4 ಬಣ್ಣ ಹಾಗೂ 35 ವಿನ್ಯಾಸಗಳಲ್ಲಿ ಲಭ್ಯವಿದ್ದು, ಎಲ್ಲ ಋತುಗಳಿಗೂ ಹೊಂದುತ್ತವೆ.

ಸಂಘ ಸ್ಥಾಪನೆಯಾಗಿ 8 ದಶಕಗಳು ಕಳೆದಿವೆ. ಪಟ್ಟೆದಂಚು ಸೀರೆಗೆ 200 ವರ್ಷಗಳ ಇತಿಹಾಸವಿದೆ.

ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದಲ್ಲಿ ಸದ್ಯ 1,126 ಮಂದಿ ಸದಸ್ಯರಿದ್ದಾರೆ. ನಿತ್ಯ 200 ಮಂದಿ ಕೆಲಸ ಮಾಡುತ್ತಾರೆ. ಒಬ್ಬರು ಎಂಟು ಗಂಟೆ ಕೆಲಸ ಮಾಡಿದರೆ ಎರಡು ಪಟ್ಟೆದಂಚು ಸೀರೆಗಳು ಸಿದ್ಧವಾಗುತ್ತವೆ. ನೇಯ್ಗೆ ಮಾಡುವವರಲ್ಲಿ ಶೇ 25 ಪುರುಷರು ಮತ್ತು ಶೇ 75 ಮಹಿಳೆಯರು ಇದ್ದಾರೆ.

'ಪಟ್ಟೆದಂಚು ಸೀರೆಗೆ ಜಿಐ ಟ್ಯಾಗ್ ಮಾನ್ಯತೆ ಪಡೆಯಲು 2019ರಿಂದ ನಡೆಸಿದ ಪ್ರಯತ್ನಕ್ಕೆ 2025ರ ಮಾರ್ಚ್‌ನಲ್ಲಿ ಫಲ ಸಿಕ್ಕಿತು. ಜಿಐ ಟ್ಯಾಗ್ ಮಾನ್ಯತೆ ಸಿಕ್ಕಿರುವುದರಿಂದ ಪಟ್ಟೆದಂಚು ಸೀರೆಯ ಮಾರುಕಟ್ಟೆ ವಿಸ್ತರಿಸುವ ನಿರೀಕ್ಷೆ ಇದೆ' ಎಂದು ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾರುತಿ ಕಳಕಪ್ಪ ಶಾಬಾದಿ ತಿಳಿಸಿದರು.

'ಗಜೇಂದ್ರಗಡದಲ್ಲಿ ಉತ್ಪಾದನೆಯಾಗುವ ಪಟ್ಟೆದಂಚು ಸೀರೆ ಬೆಲೆ ₹850. ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿ ವಿವಿಧ ರಾಜ್ಯಗಳಲ್ಲಿ ಈ ಸೀರೆಗೆ ಬೇಡಿಕೆ ಇದೆ.

ಚಿಟಿಕೆ ಸುದ್ದಿ

ಗುಂಡಿನ ಚಕಮಕಿ ಭದ್ರತಾ ಪಡೆಯ ಮೂವರಿಗೆ ಗಾಯ



ಜಮ್ಮು – ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಉಗ್ರರ ನಿಗ್ರಹ ಕಾರ್ಯಾಚರಣೆ ನಡೆಸಿದರು –ಪಿಟಿಐ ಚಿತ್ರ

ಶ್ರೀನಗರ(ಪಿಟಿಐ): ಜಮ್ಮು–ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆ ಏಳನೇ ದಿನಕ್ಕೆ ಕಾಲಿಟ್ಟಿದ್ದು, ಗುರುವಾರ ನಡೆದ ಗುಂಡಿನ ಚಕಮಕಿಯಲ್ಲಿ ಭದ್ರತಾ ಪಡೆಯ ಮೂವರು ಯೋಧರು ಗಾಯಗೊಂಡಿದ್ದಾರೆ.

ದಕ್ಷಿಣ ಕಾಶ್ಮೀರದ ಭದ್ರತಾ ಪರಿಸ್ಥಿತಿ ಹಾಗೂ ಉಗ್ರರ ನಿಗ್ರಹ ಕಾರ್ಯಾಚರಣೆಯನ್ನು ಸೇನೆಯ ಉತ್ತರ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಪ್ರತೀಕ್ ಶರ್ಮಾ ಪರಿಶೀಲಿಸಿದರು.

ಅರಣ್ಯದಲ್ಲಿ ಉಗ್ರರನ್ನು ಪತ್ತೆಹಚ್ಚಲು ಭದ್ರತಾ ಪಡೆಗಳು ಡ್ರೋನ್ ಹಾಗೂ ಹೆಲಿಕಾಪ್ಟರ್‌ಗಳು ಸೇರಿದಂತೆ ಎಲ್ಲ ವಿಧಾನಗಳನ್ನೂ ಬಳಸುತ್ತಿವೆ ಎಂದು ಪ್ರತೀಕ್ ಶರ್ಮಾ ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ಕಳ್ಳಸಾಗಣೆ: ನಾಲ್ವರ ಬಂಧನ

ಚಂಡೀಗಢ (ಪಿಟಿಐ): ಗಡಿಯಾಚೆಗೆ ಶಸ್ತ್ರಾಸ್ತ್ರಗಳ ಕಳ್ಳಸಾಗಣೆಯಲ್ಲಿ ತೊಡಗಿದ್ದ ಆರೋಪದಡಿ ನಾಲ್ವರನ್ನು ಬಂಧಿಸಲಾಗಿದೆ.



ಪಾಕಿಸ್ತಾನದ ಕಳ್ಳಸಾಗಣೆದಾರರೊಂದಿಗೆ ಸಂಪರ್ಕ ಹೊಂದಿದ್ದ ಆರೋಪಿಗಳು, ಪಂಜಾಬ್‌ನ ಪಾತಕಿಗಳಿಗೆ ಸರಬರಾಜು ಮಾಡಲು ಭಾರತ– ಪಾಕಿಸ್ತಾನ ಗಡಿ ಸಮೀಪ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಪಡೆಯುತ್ತಿದ್ದಾಗ ಬಂಧಿಸಲಾಗಿದೆ. ಅವರಿಂದ ಪಿx5 9ಎಂಎಂ ಹಾಗೂ ಗ್ಲಾಕ್ 9ಎಂಎಂ ಸೇರಿದಂತೆ ಏಳು ಪಿಸ್ತೂಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಗುರುವಾರ ತಿಳಿಸಿದ್ದಾರೆ.

ನಾಲೆಗೆ ಬಿದ್ದ ವಾಹನ: ಮೂವರು ಯೋಧರು ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿ ಸೇನಾ ವಾಹನವೊಂದು ಗುರುವಾರ ನಾಲೆಗೆ ಬಿದ್ದ ಪರಿಣಾಮ ಮೂವರು ಸಿಆರ್‌ಪಿಎಫ್ ಸಿಬ್ಬಂದಿ ಮೃತಪಟ್ಟಿದ್ದಾರೆ ಮತ್ತು 15 ಜನರು ಗಾಯಗೊಂಡಿದ್ದಾರೆ.



ಬಸಂತಗಢದಿಂದ ಕಾರ್ಯಾಚರಣೆ ಮುಗಿಸಿ ಸಿಬ್ಬಂದಿ ಬಂಕರ್ ವಾಹನದಲ್ಲಿ ಹಿಂತಿರುಗುತ್ತಿರುವಾಗ ಕಡ್ವಾ ಪ್ರದೇಶದಲ್ಲಿ ಬೆಳಿಗ್ಗೆ 10:30ರ ಸುಮಾರಿಗೆ ಘಟನೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಠ್ಯಪುಸ್ತಕ: ತಜ್ಞರ ಸಮಿತಿ ರಚನೆ

ನವದೆಹಲಿ (ಪಿಟಿಐ): ಹೊಸ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ರೂಪಿಸಲಾಗಿರುವ ಪಠ್ಯಪುಸ್ತಕಗಳ ಕುರಿತು ಬಂದಿರುವ ಪ್ರತಿಕ್ರಿಯೆಗಳನ್ನು ಪರಿಶೀಲಿಸಲು ತಜ್ಞರ ಸಮಿತಿಯೊಂದನ್ನು ಎನ್‌ಸಿಇಆರ್‌ಟಿ ನೇಮಿಸಿದೆ.

ಯಾವ ಪಠ್ಯಪುಸ್ತಕಕ್ಕೆ ಬಂದ ಪ್ರತಿಕ್ರಿಯೆಗಳ ಕುರಿತು ಸಮಿತಿ ರಚಿಸಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿಲ್ಲ. ‘ಕೆಲವು ಪಠ್ಯಪುಸ್ತಕದಲ್ಲಿ ಇರುವ ಪಠ್ಯಗಳ ಕುರಿತು ಪ್ರತಿಕ್ರಿಯೆಗಳು ಬಂದಿವೆ. ಇದಕ್ಕಾಗಿ ಹಿರಿಯ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಶೀಘ್ರವೇ ವರದಿ ನೀಡಲಿದೆ’ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ಪಂತ್‌ಗೆ ಗಾಯ: ಕ್ಷಮೆ ಕೇಳಿದ ವೋಕ್ಸ್

ಲಂಡನ್ (ಪಿಟಿಐ): ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಸರಣಿಯ ನಾಲ್ಕನೇ ಪಂದ್ಯದಲ್ಲಿ ತನ್ನ ಬೌಲಿಂಗ್ ವೇಳೆ ರಿಷಭ್ ಪಂತ್ ಅವರ ಪಾದಕ್ಕೆ ಗಾಯವಾಗಿರುವುದಕ್ಕೆ ಇಂಗ್ಲೆಂಡ್‌ನ ವೇಗಿ ಕ್ರಿಸ್ ವೋಕ್ಸ್ ಕ್ಷಮೆ ಕೇಳಿದ್ದಾರೆ.

ಅಂತಿಮ ಟೆಸ್ಟ್ ಪಂದ್ಯದಲ್ಲಿ ಗಾಯದಿಂದಾಗಿ ಒಂಟಿಕೈಯಲ್ಲಿ ಬ್ಯಾಟಿಂಗ್ ಮಾಡುವ ಮೂಲಕ ವೋಕ್ಸ್ ಕ್ರೀಡಾಪ್ರೇಮಿಗಳ ಹೃದಯ ಗೆದ್ದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ವೋಕ್ಸ್, ‘ಭಾರತ ತಂಡದ ನಾಯಕ ಶುಭಮನ್ ಗಿಲ್ ಹಾಗೂ ಉಪನಾಯಕ ಪಂತ್ ನನ್ನನ್ನು ಅಭಿನಂದಿಸಿದರು. ನಿಜಕ್ಕೂ ಧೈರ್ಯಶಾಲಿ ಎಂದು ಗಿಲ್ ಪ್ರಶಂಸಿಸಿದರು. ಪಂತ್ ಕೂಡ ಇನ್‌ಸ್ಟಾಗ್ರಾಮ್‌ನಲ್ಲಿ ಸೆಲ್ಯೂಟ್ ಇಮೋಜಿ ಹಂಚಿಕೊಂಡರು. ಅವರ ಪ್ರೀತಿಗಾಗಿಯೂ ಧನ್ಯವಾದ ಹೇಳಿದ್ದೇನೆ. ನನ್ನಿಂದಾಗಿ ಪಂತ್ ಅವರ ಕಾಲಿಗೆ ಗಾಯಗೊಂಡಿದ್ದಕ್ಕೆ ಕ್ಷಮೆ ಕೇಳಿದ್ದೇನೆ’ ಎಂದು ದಿ ಗಾರ್ಡಿಯನ್‌ಗೆ ನೀಡಿದ ಸಂದರ್ಶನದಲ್ಲಿ ವೋಕ್ಸ್ ಹೇಳಿದ್ದಾರೆ.

ಉತ್ತರಕಾಶಿ: ಸೇನೆಯಿಂದ 274 ಮಂದಿ ರಕ್ಷಣೆ

ಇನ್ನೂ 60 ಜನರು ನಾಪತ್ತೆ • ಉತ್ತರಕಾಶಿಯಲ್ಲಿ ಸಿ.ಎಂ ಧಾಮಿ ವಾಸ್ತವ್ಯ • ರಕ್ಷಣಾ ಕಾರ್ಯದ ಮೇಲ್ವಿಚಾರಣೆ

ಡೆಹ್ರಾಡೂನ್(ಪಿಟಿಐ): ಮೇಘ ಸ್ಫೋಟ ಕಾರಣದಿಂದ ಉಂಟಾದ ದಿಢೀರ್ ಪ್ರವಾಹದಿಂದ ನಲುಗಿರುವ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಗುರುವಾರವೂ ರಕ್ಷಣಾ ಕಾರ್ಯ ಮುಂದುವರಿಯಿತು.

‘ಚಿನೂಕ್ ಹಾಗೂ ಎಂಐ–17 ಹೆಲಿಕಾಪ್ಟರ್‌ಗಳನ್ನು ಬಳಸಿ, 274 ಮಂದಿಯನ್ನು ರಕ್ಷಿಸಲಾಗಿದೆ. 9 ಮಂದಿ ಯೋಧರು, 60 ಜನರು ನಾಪತ್ತೆಯಾಗಿದ್ದು, ಶೋಧ ಕಾರ್ಯ ಮುಂದುವರಿದಿದೆ’ ಎಂದು ಸೇನೆ ತಿಳಿಸಿದೆ.

‘ಹರ್ಶಿಲ್, ಗಂಗೋತ್ರಿ ಹಾಹೂ ಝೂಲಾದಿಂದ ಒಟ್ಟು 275 ಜನರನ್ನು ಮತಲಿ ಹೆಲಿಪ್ಯಾಡ್‌ಗೆ ಕಳುಹಿಸಲಾಗಿದೆ. ಅವರನ್ನು ಅಲ್ಲಿಂದ ಅವರ ಊರುಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗುತ್ತದೆ’ ಎಂದು ಜಿಲ್ಲಾಧಿಕಾರಿ ಪ್ರಶಾಂತ ಆರ್ಯ ತಿಳಿಸಿದ್ದಾರೆ.

ಮತಲಿ ಹೆಲಿಪ್ಯಾಡ್‌ಗೆ ಕರೆದುಕೊಂಡು ಬಂದವರಲ್ಲಿ, ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ, ದೆಹಲಿ, ಅಸ್ಸಾಂ, ತೆಲಂಗಾಣ ಮತ್ತು ಪಂಜಾಬ್ ರಾಜ್ಯಗಳಿಗೆ ಸೇರಿದವರಿದ್ದಾರೆ ಎಂದು ತಿಳಿಸಿದ್ದಾರೆ.

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಉತ್ತರಕಾಶಿಯಲ್ಲಿಯೇ ವಾಸ್ತವ್ಯ ಹೂಡಿದ್ದು, ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಧರಾಲಿ ಗ್ರಾಮದಲ್ಲಿ ಅವಶೇಷಗಳಡಿ ಸಿಲುಕಿರುವವರ ಶೋಧ ಹಾಗೂ ರಕ್ಷಣೆಗೆ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಲಾಗುತ್ತದೆ. ಇವುಗಳನ್ನು ಘಟನಾಸ್ಥಳಕ್ಕೆ ಏರ್‌ಲಿಫ್ಟ್ ಮಾಡುವ ಪ್ರಯತ್ನಗಳು ಕೂಡ ನಡೆದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹರ್ಶಿಲ್ ಹಾಗೂ ನೆಲಾಂಗ್‌ನಲ್ಲಿರುವ ಮಿಲಿಟರಿ ಹೆಲಿಪ್ಯಾಡ್‌ಗಳನ್ನು ರಕ್ಷಣಾ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುತ್ತಿದೆ. ಗಂಗೋತ್ರಿಯಿಂದ ಈ ಹೆಲಿಪ್ಯಾಡ್‌ಗಳಿಗೆ ಸಂಪರ್ಕಿಸುವ ರಸ್ತೆಗಳು ಸುಸ್ಥಿತಿಯಲ್ಲಿರುವ ಕಾರಣ, ಪ್ರವಾಸಿಗಳ ಪ್ರಯಾಣಕ್ಕೆ ಅನುಕೂಲವಾಗಿದೆ.

ಪರಿಹಾರ ಘೋಷಣೆ: ಭೂಕುಸಿತ ಉಂಟಾಗಿರುವ ಪೌಡಿ ಜಿಲ್ಲೆಯ ಬುರಾಂಸಿ ಗ್ರಾಮಕ್ಕೆ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಗುರುವಾರ ಭೇಟಿ ನೀಡಿದರು.

ಅವಘಡದಲ್ಲಿ ಮೃತಪಟ್ಟಿರುವ ಇಬ್ಬರು ಸಹೋದರಿಯರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದರು.

ಮನೆಗಳು ಸಂಪೂರ್ಣ ಹಾನಿಯಾಗಿರುವುದಕ್ಕೆ ಸಂಬಂಧಿಸಿ 15 ಜನರಿಗೆ ತಲಾ ₹1.30 ಲಕ್ಷ ನೆರವು ಘೋಷಿಸಿದರು.



ಇಂಡೊ–ಟಿಬೆಟನ್ ಗಡಿ ಪೊಲೀಸರು (ಐಟಿಬಿಪಿ) ಧರಾಲಿ ಗ್ರಾಮದಲ್ಲಿ ವೃದ್ಧೆಯೊಬ್ಬರನ್ನು ರಕ್ಷಿಸಿ ಮತಲಿಯಲ್ಲಿರುವ ಐಟಿಬಿಪಿಯ ಹೆಲಿಪ್ಯಾಡ್‌ಗೆ ಗುರುವಾರ ಕರೆದುಕೊಂಡು ಬರಲಾಯಿತು –ಪಿಟಿಐ ಚಿತ್ರ

> 60 ಅಡಿಗಳಷ್ಟು ಎತ್ತರದ ಅವಶೇಷಗಳಡಿ ಹಲವರು ಸಿಲುಕಿರಬಹುದು. ರಕ್ಷಣೆಗೆ ಅತ್ಯಾಧುನಿಕ ಯಂತ್ರೋಪಕರಣ ಬಳಸಲಾಗುವುದು
> **ಅರುಣ್ ಮೋಹನ್ ಜೋಶಿ**
> ಐಜಿ, ಎಸ್‌ಡಿಆರ್‌ಎಫ್

> ಈ ಪ್ರಾಕೃತಿಕ ವಿಕೋಪದಿಂದ ಧರಾಲಿಯಲ್ಲಿ ₹300 ಕೋಟಿಯಿಂದ ₹400 ಕೋಟಿಯಷ್ಟು ನಷ್ಟ ಆಗಿರಬಹುದು
> **ಸುರೇಶ್ ಸೆಮ್ವಾಲ್**
> ಗಂಗೋತ್ರಿ ದೇವಸ್ಥಾನ ಕಮಿಟಿ ಕಾರ್ಯದರ್ಶಿ

ರಕ್ಷಣೆಗೆ ನಿಯೋಜನೆ

- ಯೋಧರು, ಎಂಜಿನಿಯರ್‌ಗಳು, ವೈದ್ಯರು ಹಾಗೂ ರಕ್ಷಣಾತಜ್ಞರು ಸೇರಿ 225ಕ್ಕೂ ಅಧಿಕ ಮಂದಿಯನ್ನು ನಿಯೋಜಿಸಲಾಗಿದೆ ಎಂದು ಸೇನೆ ತಿಳಿಸಿದೆ
- ಟೇಕಲಾ ಗ್ರಾಮದಲ್ಲಿ ಒಂದು ರೀಕೊ ರೇಡಾರ್ ತಂಡವನ್ನು ನಿಯೋಜನೆ ಮಾಡಿರುವ ಸೇನೆ, ಮತ್ತೊಂದು ರೇಡಾರ್ ತಂಡದ ನಿಯೋಜನೆಗೆ ಮುಂದಾಗಿದೆ
- ಡೆಹ್ರಾಡೂನ್‌ನ ಜಾಲಿಗ್ರ್ಯಾಂಟ್ ವಿಮಾನ ನಿಲ್ದಾಣದಲ್ಲಿ ಚಿನೂಕ್ ಹಾಗೂ ಎಂ–17 ಹೆಲಿಕಾಪ್ಟರ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ
- ನಾಗರಿಕಯಾನಕ್ಕೆ ಬಳಸುವ ಐದು ‘ಸಹಸ್ರಧಾರಾ’ ಹೆಲಿಕಾಪ್ಟರ್‌ಗಳನ್ನು ನಿಯೋಜನೆ ಮಾಡಲಾಗಿದ್ದು, ಮತಲಿ, ಭಟ್ವಾರಿ ಮತ್ತು ಹರ್ಶಿಲ್‌ಗಳಲ್ಲಿ ನಡೆಯುವ ರಕ್ಷಣಾ ಕಾರ್ಯಕ್ಕೆ ಬಳಸಲಾಗುತ್ತಿದೆ

ಪ್ರಮುಖ ಅಂಶಗಳು

- ಭೂಕುಸಿತ ಹಾಗೂ ರಸ್ತೆಗಳು ಹಾಳಾಗಿರುವ ಕಾರಣ ಪ್ರವಾಹ ಪೀಡಿತ ಪ್ರದೇಶಗಳಿಗೆ ತೆರಳಿ ರಕ್ಷಣಾ ಕಾರ್ಯ ಕೈಗೊಳ್ಳುವುದು ಈಗಲೂ ಸವಾಲಾಗಿಯೇ ಇದೆ
- 9 ಮಂದಿ ಯೋಧರು ಹಾಗೂ ಮೂವರು ನಾಗರಿಕರನ್ನು ರಕ್ಷಿಸಿ, ಹೆಲಿಕಾಪ್ಟರ್ ಮೂಲಕ ಡೆಹ್ರಾಡೂನ್‌ಗೆ ಕರೆದೊಯ್ಯಲಾಗಿದೆ
- ಗಂಭೀರವಾಗಿ ಗಾಯಗೊಂಡಿರುವ ಮೂವರನ್ನು ಹೃಷಿಕೇಶದಲ್ಲಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ(ಏಮ್ಸ್), 8 ಗಾಯಾಳುಗಳನ್ನು ಉತ್ತರಕಾಶಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ

‘ಕ್ಷಣಾರ್ಧದಲ್ಲಿ ದುರಂತ.. ಎಲ್ಲರೂ ಅಸಹಾಯಕ..’

ಧರಾಲಿ (ಉತ್ತರಾಖಂಡ) (ಪಿಟಿಐ): ಉತ್ತರಕಾಶಿಯ ಮುಖ್ಬಾ ಗ್ರಾಮದ ಅಂಚಿನಲ್ಲಿರುವ ಮನೆಗಳ ಮುಂದೆ ಕುಳಿತಿರುವ ಮಹಿಳೆಯರಲ್ಲಿ ಈಗ ಮೌನ ಆವರಿಸಿದೆ; ದುಃಖ ಮಡುಗಟ್ಟಿದೆ. ತಮ್ಮ ಕಣ್ಣೆದುರೇ, ಪರ್ವತದಿಂದ ರಭಸದಿಂದ ನುಗ್ಗಿದ ಪ್ರವಾಹ ತನ್ನೊಟ್ಟಿಗೆ ಅಪಾರ ಪ್ರಮಾಣದ ಮಣ್ಣಿನ ರಾಶಿಯನ್ನು ತಂದು, ಧರಾಲಿ ಗ್ರಾಮವನ್ನು ಬಹುತೇಕ ಹೊಸಕಿ ಹಾಕಿದ್ದನ್ನು ನೆನಪಿಸಿಕೊಂಡು ದುಃಖಿಸುತ್ತಾರೆ...

ಧರಾಲಿ ಗ್ರಾಮದಿಂದ 1.5 ಕಿ.ಮೀ. ದೂರದ ಈ ಗ್ರಾಮವು ತಗ್ಗು ಪ್ರದೇಶದಲ್ಲಿದೆ. ಪ್ರವಾಹದ ರಭಸಕ್ಕೆ ಕಟ್ಟಡಗಳು ಧರೆಗೆ ಉರುಳುತ್ತಿರುವುದು, ಜನರು ಜೀವ ರಕ್ಷಣೆಗಾಗಿ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದುದನ್ನು ಮಹಿಳೆಯರು ವಿವರಿಸುತ್ತಾರೆ. ಇವು ಧರಾಲಿ, ಮುಖ್ಬಾ ಹಾಗೂ ಇತರ ಗ್ರಾಮಗಳಲ್ಲಿ ಕಂಡು ಬರುವ ದೃಶ್ಯಗಳು. ದಿಢೀರ್ ಪ್ರವಾಹದಿಂದ ತಾವು ಅನುಭವಿಸಿದ ಆಘಾತದಿಂದ ಇಲ್ಲಿನ ಜನರು ಇನ್ನೂ ಹೊರಗೆ ಬಂದಿಲ್ಲ.

‘ಕ್ಷಣಾರ್ಧದಲ್ಲಿ ಈ ದುರಂತ ನಡೆದು ಹೋಯಿತು. ಯಾರೂ ಕೂಡ ಏನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಸಹಾಯಕ್ಕಾಗಿ ಹಲವರು ಮೊರೆ ಇಟ್ಟರಾದರೂ, ಸ್ಪಂದಿಸಲು ಅವಕಾಶವೇ ಇಲ್ಲದ ರೀತಿಯಲ್ಲಿ ಅವಘಡ ಸಂಭವಿಸಿತ್ತು’ ಎಂದು ಮುಖ್ಬಾ ಗ್ರಾಮದ ನಿವಾಸಿ ಆಶಾ ಸೆಮ್ವಾಲ್ ಹೇಳುತ್ತಾರೆ.

‘ನಾವು ಏನನ್ನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಜೋರಾಗಿ ಕಿರುಚಿ, ಶಿಳ್ಳೆ ಹಾಕುವ ಮೂಲಕ ಜನರನ್ನು ಎಚ್ಚರಿಸಲು ಯತ್ನಿಸಿದೆವು. ಧರಾಲಿ ನಮ್ಮ ಪಕ್ಕದ ಗ್ರಾಮ. ಆ ಗ್ರಾಮದ ಪ್ರತಿಯೊಬ್ಬರೂ ಪರಿಚಯ. ಅವರ ಪರಿಸ್ಥಿತಿ ಏನಾಗಿದೆ ಎಂಬುದು ದೇವರಿಗೇ ಗೊತ್ತು’ ಎಂದರು.

‘ಅದೊಂದು ದುಃಸ್ವಪ್ನ. ಕೆಲವರು ತಮ್ಮ ಇಡೀ ಕುಟುಂಬವನ್ನೇ ಕಳೆದುಕೊಂಡಿದ್ದಾರೆ’ ಎಂದು ಮಾರ್ಕಂಡೇಯ ಗ್ರಾಮದ ನಿಶಾ ಸೆಮ್ವಾಲ್ ಹೇಳುತ್ತಾರೆ.

ಮುಖ್ಬಾ ಗ್ರಾಮದ ಮತ್ತೊಬ್ಬ ನಿವಾಸಿ ಸುಲೋಚನಾ ದೇವಿ ಕೂಡ ಆಘಾತದಿಂದ ಹೊರಬಂದಿಲ್ಲ. ‘ಏನು ಹೇಳಬೇಕೋ ತಿಳಿಯುತ್ತಿಲ್ಲ. ಸಂತ್ರಸ್ತರಿಗೆ ಕೂಡಲೇ ನೆರವು ನೀಡಬೇಕು ಎಂದಷ್ಟೆ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ’ ಎಂದರು.

‘ಭಾರತದ ಮೇಲೆ ದಾಳಿಗೆ ಮನವಿ ಮಾಡಿದ್ದ ಶಮಾ’

ಅಹಮದಾಬಾದ್ (ಪಿಟಿಐ): ‘ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಬೆಂಗಳೂರಿನಲ್ಲಿ ಬಂಧಿಸಿದ್ದ ಮಹಿಳೆ ಅಲ್ ಖೈದಾ ಸಿದ್ಧಾಂತಗಳನ್ನು ಹರಡುತ್ತಿದ್ದಳು. ‘ಪ್ರಾಜೆಕ್ಟ್ ಖಿಲಾಫತ್’ ಅಡಿ ಮುಸ್ಲಿಂ ರಾಷ್ಟ್ರ ಒಗ್ಗೂಡಿಸಲು ಭಾರತದ ಮೇಲೆ ದಾಳಿ ಮಾಡುವಂತೆ ಆಪರೇಷನ್ ಸಿಂಧೂರ ಸಂದರ್ಭದಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಂ ಮುನೀರ್‌ಗೆ ಮನವಿ ಮಾಡಿಕೊಂಡಿದ್ದಳು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ ಉಪ ಖಂಡದ ನಿಷೇಧಿತ ಅಲ್ ಖೈದಾ(ಎಕ್ಯುಐಎಸ್) ಸಂಘಟನೆಯ ಸಿದ್ಧಾಂತವನ್ನು ತನ್ನ ಸಾಮಾಜಿಕ ಮಾಧ್ಯಮ ಪುಟಗಳ ಮೂಲಕ ಹರಡುತ್ತಿರುವ ಆರೋಪದ ಮೇಲೆ ಶಮಾ ಪರ್ವೀನ್ ಅನ್ಸಾರಿ ಎಂಬಾಕೆಯನ್ನು ಜುಲೈ 29ರಂದು ಗುಜರಾತ್ ಎಟಿಎಸ್ ಬೆಂಗಳೂರಿನಲ್ಲಿ ಬಂಧಿಸಿತ್ತು.

‘ಶಮಾ ಎರಡು ಫೇಸ್‌ಬುಕ್ ಪೇಜ್, 10 ಸಾವಿರ ಫಾಲೋವರ್ಸ್‌ಗಳಿರುವ ಇನ್‌ಸ್ಟಾಗ್ರಾಂ ಖಾತೆ ನಿರ್ವಹಿಸುತ್ತಿದ್ದಳು. ಅಲ್ ಖೈದಾ ಮತ್ತು ಇತರೆ ಸಮಾಜಘಾತುಕ ಶಕ್ತಿಗಳ ಜಿಹಾದಿ ಮತ್ತು ಭಾರತ ವಿರೋಧಿ ಮಾಹಿತಿಯನ್ನು ಆಕೆ ಹರಡುತ್ತಿದ್ದಳು’ ಎಂದು ಬುಧವಾರ ಎಟಿಎಸ್ ಹೇಳಿದೆ.

ಮೇ 9ರಂದು ಆಪರೇಷನ್ ಸಿಂಧೂರ ನಡೆಸಿದ ಎರಡು ದಿನಗಳ ನಂತರ ಶಮಾ, ‘ಭಾರತದ ಮೇಲೆ ದಾಳಿ ಮಾಡುವ ಚಿನ್ನದಂಥ ಸಮಯವನ್ನು ಬಳಸಿಕೊಳ್ಳಿ. ಮುಸ್ಲಿಂ ನೆಲವನ್ನು ಒಗ್ಗೂಡಿಸಿ, ಖಿಲಾಫತ್ ಪ್ರಾಜೆಕ್ಟ್ ಪೂರ್ಣಗೊಳಿಸಿ, ಹಿಂದುತ್ವ ಮತ್ತು ರಾಷ್ಟ್ರವಾದವನ್ನು ನಾಶ ಮಾಡಿ’ ಎಂದು ಜನರಲ್ ಮುನೀರ್‌ಗೆ ಮನವಿ ಮಾಡುವ ಫೇಸ್‌ಬುಕ್ ಪೋಸ್ಟ್ ಅಪ್‌ಲೋಡ್ ಮಾಡಿದ್ದಳು. ಪೋಸ್ಟ್‌ನಲ್ಲಿ ಮುನೀರ್ ಭಾವಚಿತ್ರ ಇತ್ತು ಎಂದು ಎಟಿಎಸ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಜಮ್ಮು–ಕಾಶ್ಮೀರ: 25 ಕೃತಿಗಳ ನಿಷೇಧ

ಶ್ರೀನಗರ (ಪಿಟಿಐ): ಅರುಂಧತಿ ರಾಯ್, ಎ.ಜಿ. ನೂರಾನಿ, ವಿಕ್ಟೋರಿಯಾ ಸ್ಕೊಫೀಲ್ಡ್, ಮೌಲಾನಾ ಮೌದೂದಿ ಮತ್ತು ಡೇವಿಡ್ ದೇವದಾಸ್ ಸೇರಿ ಹಲವು ಖ್ಯಾತ ಲೇಖಕರ ಸುಮಾರು 25 ಕೃತಿಗಳು, ‘ಜಮ್ಮು–ಕಾಶ್ಮೀರದ ಕುರಿತು ತಪ್ಪು ಸಂಕಥನ ಸೃಷ್ಟಿಸುತ್ತಿವೆ. ಜೊತೆಗೆ ಭಯೋತ್ಪಾನೆಯನ್ನು ವೈಭವೀಕರಿಸುತ್ತಿವೆ’ ಎಂದು ಜಮ್ಮು ಮತ್ತು ಕಾಶ್ಮೀರದ ಗೃಹ ಸಚಿವಾಲಯ ಗುರುತಿಸಿದೆ.

ಈ ಪುಸ್ತಕಗಳನ್ನು ನಿಷೇಧಿಸಿ ಸಚಿವಾಲಯವು ಬುಧವಾರ ಆದೇಶ ಹೊರಡಿಸಿದೆ. ‘ಕೆಲವು ಪುಸ್ತಕಗಳು ತಪ್ಪು ಸಂಕಥನವನ್ನು ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕತಾವಾದವನ್ನು ಪ್ರಚಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ತನಿಖೆ ಮತ್ತು ಗುಪ್ತಚರ ಮಾಹಿತಿಗಳು ಈ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಿವೆ’ ಎಂದು ಆದೇಶದಲ್ಲಿ ಹೇಳಲಾಗಿದೆ.

‘ಇಂಥ ಪುಸ್ತಕಗಳಿಂದ ಯುವಕರು ಹಿಂಸಾಚಾರದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಯುವಕರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ, ಭಯೋತ್ಪಾದನೆಯನ್ನು ವೈಭವೀಕರಿಸಲಾಗುತ್ತಿದೆ ಮತ್ತು ಭಾರತದ ವಿರುದ್ಧ ಹಿಂಸೆಯನ್ನು ಪ್ರಚೋದಿಸಲಾಗುತ್ತಿದೆ. ಸಂಕಟಗಳ ಸಂಸ್ಕೃತಿ, ಸಂತ್ರಸ್ತಭಾವ ಮತ್ತು ಭಯೋತ್ಪಾದಕರು ಹೀರೊಗಳು ಎನ್ನುವಂಥ ಅಭಿಪ್ರಾಯಗಳು ಮೂಡುವಂತೆ ಯುವಕರ ಮನೋಭಾವವನ್ನು ಈ ಪುಸ್ತಕಗಳು ಪ್ರಭಾವಿಸುತ್ತಿವೆ’ ಎಂದು ಹೇಳಿದೆ.

‘ಈ ರೀತಿ ಮಾಡುವುದು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಇದು ಅಪರಾಧ’ ಎಂದೂ ಹೇಳಿದೆ.

> ಮಾಜಿ ಪ್ರಧಾನಿ ವಾಜಪೇಯಿ ಅವರ ಶಾಂತಿ ಮಾತುಕತೆಯ ಸ್ಫೂರ್ತಿಯಲ್ಲಿಯೇ ನನ್ನ ಪುಸ್ತಕಗಳು ಶಾಂತಿ ಸ್ಥಾಪನೆಯನ್ನು, ಮಾತುಕತೆ ಮತ್ತು ಪ್ರಜಾಪ್ರಭುತ್ವವನ್ನು ತೀವ್ರವಾಗಿ ಪ್ರತಿಪಾದಿಸುತ್ತವೆ. ಪ್ರತ್ಯೇಕತಾವಾದವನ್ನು ಪ್ರತಿಪಾದಿಸದೆಯೇ ಕಾಶ್ಮೀರದಲ್ಲಿ ಏನಾಗುತ್ತಿದೆ ಎಂಬುದನ್ನು ನನ್ನ ಪುಸ್ತಕ ಹೇಳುತ್ತದೆ
> **ಡೇವಿಡ್ ದೇವದಾಸ್,** ನಿಷೇಧಿಸಲಾದ ‘ಇನ್ ಸರ್ಚ್ ಆಫ್ ಫ್ಯೂಚರ್’ ಕೃತಿಯ ಲೇಖಕ

> ಶಾಂತಿಯುತ ಪ್ರಕ್ರಿಯೆಗಳನ್ನು ಪ್ರತಿಪಾದಿಸಲು ನಾನು ಬದ್ಧ. ಸಶಸ್ತ್ರ ಸಂಘರ್ಷಗಳ ಕುರಿತು ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೂ ನಾನು ಬದ್ಧ. ಅದು ಕಾಶ್ಮೀರದಲ್ಲೇ ಆಗಲಿ, ಜಗತ್ತಿನ ಯಾವುದೇ ಭಾಗದಲ್ಲಾಗಲಿ
> **ಸುಮಂತ್ರ ಬೋಸ್,** ನಿಷೇಧಿತ ‘ಕಾಶ್ಮೀರ್ ಅಟ್ ದಿ ಕ್ರಾಸ್‌ರೋಡ್ಸ್: ಇನ್‌ಸೈಡ್ ಎ21 ಸೆಂಚುರಿ ಕಾನ್‌ಫ್ಲಿಕ್ಟ್’ ಕೃತಿಯ ಲೇಖಕ



ಹಿಮಾಚಲಪ್ರದೇಶದ ಮಂಡಿ ನಗರವನ್ನು ಮೋಡ ಸುತ್ತುವರಿದಿತ್ತು ಪಿಟಿಐ ಚಿತ್ರ

ಹಿಮಾಚಲ ಪ್ರದೇಶದ 496 ರಸ್ತೆಗಳು ಬಂದ್

ಹಿಮಾಚಲ ಪ್ರದೇಶ (ಪಿಟಿಐ): ಹಿಮಾಚಲ ಪ್ರದೇಶದ ಕೆಲವು ಭಾಗಗಳಲ್ಲಿ ಗುರುವಾರ ಮಳೆಯಾಗಿದ್ದು, ಶಿಮ್ಲಾದ ರಾಂಪುರದಲ್ಲಿ ಸಂಭವಿಸಿದ ಮೇಘ ಸ್ಫೋಟದಿಂದಾಗಿ ಆ ಪ್ರದೇಶದಲ್ಲಿ ಹಠಾತ್ ಪ್ರವಾಹ ಸಂಭವಿಸಿದೆ. ಭೂಕುಸಿತದಿಂದಾಗಿ ಮೂರು ರಾಷ್ಟ್ರೀಯ ಹೆದ್ದಾರಿ ಸೇರಿ ಹಲವು ಪ್ರದೇಶಗಳ 496 ರಸ್ತೆಗಳನ್ನು ಮುಚ್ಚಲಾಗಿದೆ.

ಬುಧವಾರ ರಾತ್ರಿ ಶಿಮ್ಲಾ ಜಿಲ್ಲೆಯ ರಾಂಪುರದ ದರ್ಶಲ್‌ನಲ್ಲಿ ಸಂಭವಿಸಿದ ಮೇಘ ಸ್ಫೋಟದಿಂದಾಗಿ ಟೆಕ್ಲೆಚ್ ಮಾರುಕಟ್ಟೆಯಲ್ಲಿ ಹಠಾತ್ ಪ್ರವಾಹ ಉಂಟಾಗಿದೆ. ಆದರೆ, ಸಂಭವನೀಯ ಅಪಾಯದ ಬಗ್ಗೆ ಎಚ್ಚರಿಕೆವಹಿಸಿ ಸುತ್ತಮುತ್ತಲಿನ ನಿವಾಸಿಗಳನ್ನು ಸ್ಥಳಾಂತರಿಸಿದ್ದರಿಂದ ಯಾವುದೇ ಸಾವು–ನೋವು ವರದಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜೂನ್ 20ರ ನಂತರ ಈವರೆಗೆ ಮಳೆ ಸಂಬಂಧಿತ ಘಟನೆಗಳಲ್ಲಿ ಸುಮಾರು 108 ಜನರು ಮೃತಪಟ್ಟಿದ್ದು, 26 ಜನರು ನಾಪತ್ತೆಯಾಗಿದ್ದಾರೆ. ಈವರೆಗೆ 58 ಹಠಾತ್ ಪ್ರವಾಹ, 28 ಮೇಘಸ್ಫೋಟ ಮತ್ತು 51 ಭಾರಿ ಭೂಕುಸಿತ ಘಟನೆಗಳು ಸಂಭವಿಸಿದೆ. ಮಳೆಯಿಂದಾಗಿ ರಾಜ್ಯದಲ್ಲಿ ₹1,905 ಕೋಟಿ ಆಸ್ತಿ–ಪಾಸ್ತಿ ನಷ್ಟವಾಗಿದೆ.

ಅಧಿಕಾರಿಗಳ ಬೆಂಬಲಕ್ಕೆ ಮಮತಾ



ಮಮತಾ

ಕೋಲ್ಕತ್ತ (ಪಿಟಿಐ): ನಾಲ್ವರು ಅಧಿಕಾರಿಗಳನ್ನು ಚುನಾವಣಾ ಆಯೋಗವು ಅಮಾನತು ಮಾಡಿರುವುದನ್ನು ಪ್ರಶ್ನಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ‘ಸರ್ಕಾರವು ನಮ್ಮ ನೌಕರರೊಂದಿಗೆ ಇದೆ’ ಎಂದು ಗುರುವಾರ ಹೇಳಿದರು.

ಎರಡು ಜಿಲ್ಲೆಗಳಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಾಗ ದೋಷ ಎಸಗಿದ ಹಾಗೂ ಕರ್ತವ್ಯಲೋಪದ ಆರೋಪದ ಮೇಲೆ ಇಬ್ಬರು ಅಧಿಕಾರಿಗಳು ಸೇರಿ ನಾಲ್ವರನ್ನು ಅಮಾನತುಗೊಳಿಸಿ ಆಯೋಗವು ಮಂಗಳವಾರ ಆದೇಶ ಹೊರಡಿಸಿತ್ತು.

ಇಬ್ಬರು ಮತದಾರರ ನೋಂದಣಿ ಅಧಿಕಾರಿಗಳು, ಇಬ್ಬರು ಸಹಾಯಕ ನೋಂದಣಿ ಅಧಿಕಾರಿಗಳು ಮತ್ತು ಒಬ್ಬ ಡೇಟಾ ಎಂಟ್ರಿ ಆಪರೇಟರ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆಯೂ ಆಯೋಗದ ಸಮಿತಿಯು ನಿರ್ದೇಶಿಸಿದೆ.

ನಗದು ಪತ್ತೆ: ವಿಚಾರಣಾ ಸಮಿತಿ ವರದಿ ಅನೂರ್ಜಿತಗೊಳಿಸಲು ಕೋರಿಕೆ

ನ್ಯಾ. ವರ್ಮಾ ಮೇಲ್ಮನವಿ ವಜಾ

ನವದೆಹಲಿ(ಪಿಟಿಐ): ನಿವಾಸದಲ್ಲಿ ನಗದು ಪತ್ತೆಯಾದ ಪ್ರಕರಣದಲ್ಲಿ ತಮ್ಮ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಆಂತರಿಕ ವಿಚಾರಣಾ ಸಮಿತಿ ನೀಡಿರುವ ವರದಿಯನ್ನು ಅಮಾನ್ಯ ಮಾಡುವಂತೆ ಕೋರಿ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

‘ನ್ಯಾಯಮೂರ್ತಿ ವರ್ಮಾ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಅಂತರಿಕ ವಿಚಾರಣಾ ಸಮಿತಿಯು ಬಹಳ ಸೂಕ್ಷ್ಮವಾಗಿ ಗಮನಿಸಿ, ವರದಿ ನೀಡಿದೆ. ಈ ಹಿಂದಿನ ಸಿಜೆಐ ಖನ್ನಾ ಕೂಡ ಬಹಳ ಎಚ್ಚರಿಕೆಯಿಂದ ಪ್ರಕ್ರಿಯೆ ಅನುಸರಿಸಿದ್ದಾರೆ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

‘ನ್ಯಾಯಮೂರ್ತಿ ವರ್ಮಾ ಅವರ ವರ್ತನೆ ವಿಶ್ವಾಸ ಮೂಡಿಸುವುದಿಲ್ಲ. ಹೀಗಾಗಿ, ಅವರ ಮೇಲ್ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲ’ ಎಂದು ನ್ಯಾಯಮೂರ್ತಿಗಳಾದ ದೀಪಾಂಕರ ದತ್ತ ಹಾಗೂ ಎ.ಜಿ.ಮಸೀಹ್ ಅವರು ಇದ್ದ ನ್ಯಾಯಪೀಠ ಹೇಳಿದೆ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಸಂದರ್ಭದಲ್ಲಿ ವರ್ಮಾ ಅವರ ಅಧಿಕೃತ ನಿವಾಸದಲ್ಲಿ ನಗದು ಪತ್ತೆಯಾದ ಆರೋಪ ಕೇಳಿಬಂದಿತ್ತು.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ನೇತೃತ್ವದ ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡಿದ್ದ ವಿಚಾರಣಾ ಸಮಿತಿಯು 10 ದಿನ ವಿಚಾರಣೆ ನಡೆಸಿತ್ತು. 55 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, ಘಟನಾ ಸ್ಥಳಕ್ಕೆ ಭೇಟಿ ನೀಡಿ 64 ಪುಟಗಳ ಈ ವರದಿಯನ್ನು ಸಿದ್ಧಪಡಿಸಿತ್ತು.

ಈಗ, ಈ ವರದಿಯನ್ನು ಅನೂರ್ಜಿತಗೊಳಿಸುವಂತೆ ಕೋರಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿರುವುದು ನ್ಯಾಯಮೂರ್ತಿ ವರ್ಮಾ ಅವರಿಗಾದ ದೊಡ್ಡ ಹಿನ್ನಡೆಯಾಗಿದೆ.

‘ನ್ಯಾಯಮೂರ್ತಿ ವರ್ಮಾ ನಿವಾಸದಲ್ಲಿ ಅಗ್ನಿಶಾಮಕ ದಳ ಸಿಬ್ಬಂದಿ ನಡೆಸಿದ ಬೆಂಕಿ ನಂದಿಸುವ ಕಾರ್ಯಾಚರಣೆಯ ಚಿತ್ರಗಳು ಹಾಗೂ ವಿಡಿಯೊಗಳನ್ನು, ಸಮಿತಿ ಹಾಗೂ ಈ ಹಿಂದಿನ ಸಿಜೆಐ ಖನ್ನಾ ಅವರು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಹಾಕಿಲ್ಲ. ನಿಯಮಗಳ ಪ್ರಕಾರ, ಇಂತಹ ಕ್ರಮ ಅಗತ್ಯವಿರಲಿಲ್ಲ ಎಂಬುದು ನಮ್ಮ ಅನಿಸಿಕೆ. ಇದನ್ನು ಹೊರತುಪಡಿಸಿ ಎಲ್ಲ ಪ್ರಕ್ರಿಯೆಗಳನ್ನು ಅನುಸರಿಸಲಾಗಿದೆ’ ಎಂದು ತೀರ್ಪು ಓದಿದ ನ್ಯಾಯಮೂರ್ತಿ ದತ್ತ ಹೇಳಿದರು.

‘ಈ ವಿಚಾರದಲ್ಲಿ ನ್ಯಾಯಮೂರ್ತಿ ವರ್ಮಾ ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗಿಲ್ಲ’ ಎಂದ ನ್ಯಾಯಪೀಠ, ‘ಯಾವುದೇ ತಕರಾರುಗಳು ಇದ್ದಲ್ಲಿ, ತಮ್ಮ ವಿರುದ್ಧ ನಡೆಯುವ ವಾಗ್ದಂಡನೆ ಪ್ರಕ್ರಿಯೆ ವೇಳೆ ಪ್ರಸ್ತಾಪಿಸಲು ನ್ಯಾಯಮೂರ್ತಿ ವರ್ಮಾ ಸ್ವತಂತ್ರರು’ ಎಂದು ಹೇಳಿದೆ.

₹1 ಕೋಟಿ ಠೇವಣಿ ಬಿಡುಗಡೆಗೆ ಆದೇಶ

ಸಂಸದ ಕಾರ್ತಿ ಪಿ. ಚಿದಂಬರಂ ಅವರು ವಿದೇಶ ಪ್ರವಾಸಕ್ಕೆ ತೆರಳಲು, ನ್ಯಾಯಾಲಯದ ಸೂಚನೆಯಂತೆ 2022ರಲ್ಲಿ ಇರಿಸಿದ್ದ ₹1 ಕೋಟಿ ಭದ್ರತಾ ಠೇವಣಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ಗುರುವಾರ ಆದೇಶಿಸಿದೆ.

ಏರ್‌ಸೆಲ್–ಮ್ಯಾಕ್ಸಿಸ್ ಹಾಗೂ ಐಎನ್‌ಎಕ್ಸ್ ಮೀಡಿಯಾ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಕಾರ್ತಿ ಅವರು ಆರೋಪಿಯಾಗಿದ್ದಾರೆ. ಈ ಎರಡೂ ಪ್ರಕರಣಗಳಲ್ಲಿ ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ.

ಕಾರ್ತಿ ಅವರು ವಿದೇಶಕ್ಕೆ ತೆರಳಲು ಅನುಮತಿ ನೀಡಲು ₹1 ಕೋಟಿ ಮೊತ್ತದ ಭದ್ರತಾ ಠೇವಣಿ ಇಡುವಂತೆ ನ್ಯಾಯಾಲಯ 2022ರಲ್ಲಿ ಷರತ್ತು ವಿಧಿಸಿತ್ತು.

ಅದರಂತೆ ಠೇವಣಿ ಇರಿಸಿ, ಬಳಿಕ ವಿದೇಶ ಪ್ರವಾಸ ಮುಗಿಸಿ ಭಾರತಕ್ಕೆ ಮರಳಿದ ಕಾರ್ತಿ ಅವರು ನಿಯಮದಂತೆ ತಮ್ಮ ಪಾಸ್‌ಪೋರ್ಟ್ ಅನ್ನು ತನಿಖಾಧಿಕಾರಿಗಳಿಗೆ ಹಸ್ತಾಂತರಿಸಿದ್ದರು.



ಕಾರ್ತಿ ಚಿದಂಬರಂ

ತಮ್ಮ ಠೇವಣಿಯನ್ನು ಹಿಂದಿರುಗಿಸುವಂತೆ 2023ರಲ್ಲಿ ಕಾರ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಉಜ್ಜಲ್ ಭುಯಾನ್ ಹಾಗೂ ಎನ್. ಕೋಟೀಶ್ವರ್ ಸಿಂಗ್ ಅವರಿದ್ದ ಪೀಠವು, ಬಡ್ಡಿಸಹಿತ ಸಂಪೂರ್ಣ ಮೊತ್ತವನ್ನು ಹಿಂದಿರುಗಿಸಲು ಆದೇಶಿಸಿದೆ.

ಇ.ಡಿ ವಂಚಕನಂತೆ ವರ್ತಿಸಬಾರದು : ‘ಸುಪ್ರೀಂ’



‘ಜಾರಿ ನಿರ್ದೇಶನಾಲಯವು ವಂಚಕನಂತೆ ವರ್ತಿಸದೇ ಕಾನೂನಿನ ಚೌಕಟ್ಟಿಗೆ ತನ್ನ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಬೇಕು’ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಜಾರಿ ನಿರ್ದೇಶನಾಲಯ ದಾಖಲಿಸಿರುವ ಪ್ರಕರಣಗಳ ಪೈಕಿ ಕೆಲವೇ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ಪ್ರಕಟವಾಗಿರುವ ಕಾರಣದಿಂದ ಸುಪ್ರೀಂ ಕೋರ್ಟ್ ಈ ವಿಚಾರ ಪ್ರಸ್ತಾಪಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣಗಳ (ಪಿಎಂಎಲ್‌ಎ) ತನಿಖೆಯಲ್ಲಿ ಆರೋಪಿಗಳನ್ನು ಬಂಧಿಸಲು ಜಾರಿ ನಿರ್ದೇಶನಾಲಯ ಹೊಂದಿರುವ ಅಧಿಕಾರವನ್ನು ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್‌ನ 2022ರ ತೀರ್ಪಿನ ಪುನರ್ ಪರಿಶೀಲನೆಗೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಉಜ್ಜಲ್ ಭುಯಾನ್, ಕೋಟಿಶ್ವರ್ ಸಿಂಗ್ ಅವರಿದ್ದ ತ್ರಿಸದಸ್ಯ ಪೀಠ ವಿಚಾರಣೆ ನಡೆಸಿತು.

ಈ ವೇಳೆ ಕೇಂದ್ರ ಸರ್ಕಾರ ಮತ್ತು ಇ.ಡಿ. ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ತೀರ್ಪಿನ ಪುನರ್ ಪರಿಶೀಲನೆ ಕೋರಿರುವ ಅರ್ಜಿಗಳ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ. ಅಲ್ಲದೇ, ‘ಪ್ರಭಾವಿ ಆರೋಪಿಗಳು ಈ ರೀತಿ ಅರ್ಜಿ ಸಲ್ಲಿಸುವ ತಂತ್ರ ಹೂಡುವುದರಿಂದ ಅಪರಾಧಿಗಳಿಗೆ ಶಿಕ್ಷೆ ವಿಧಿಸುವಲ್ಲಿ ವಿಳಂಬವಾಗುತ್ತಿದೆ’ ಎಂದಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಮೂರ್ತಿ ಭುಯಾನ್ ತಾವೇ ತೀರ್ಪು ನೀಡಿದ್ದ ಪ್ರಕರಣವೊಂದನ್ನು ಉಲ್ಲೇಖಿಸಿ, ‘ಇ.ಡಿ ಕೂಡ ವಂಚಕನ ರೀತಿ ವರ್ತಿಸದೇ ಕಾನೂನಿನ ಚೌಕಟ್ಟಿನಲ್ಲಿರಬೇಕು. ಕಳೆದ 5 ವರ್ಷದಲ್ಲಿ 5000 ಪ್ರಕರಣಗಳನ್ನು ಇ.ಡಿ ದಾಖಲಿಸಿದೆ. ಆದರೆ, ಕೇವಲ ಶೇ 10ರಷ್ಟು ಪ್ರಕರಣಗಳಲ್ಲಿ ಶಿಕ್ಷೆ ಪ್ರಟಕವಾಗಿದೆ. 5–6 ವರ್ಷಗಳ ಕಾಲ ವ್ಯಕ್ತಿಯೊಬ್ಬ ನ್ಯಾಯಾಂಗ ಬಂಧನದಲ್ಲಿದ್ದು ನಂತರ ಖುಲಾಸೆ ಆದರೆ ಅದಕ್ಕೆ ಹೊಣೆ ಯಾರು? ಇದು ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಚಾರ. ಹೀಗಾಗಿಯೇ ನೀವು ತನಿಖಾ ವೈಖರಿಯನ್ನು ಉತ್ತಮ ಪಡಿಸಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ’ ಎಂದಿದ್ದಾರೆ.

ಡುರಾಂಡ್ ಕಪ್: ಮೊಹಮಡನ್‌ಗೆ ಜಯ

ಕೋಲ್ಕತ್ತ (ಪಿಟಿಐ): ಮೊಹಮಡನ್ ಸ್ಪೋರ್ಟಿಂಗ್ ತಂಡವು. ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿ ‘ಬಿ’ ಗುಂಪಿನ ಪಂದ್ಯದಲ್ಲಿ ಗುರುವಾರ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತಂಡವನ್ನು 3–0ರಿಂದ ಸೋಲಿಸಿತು. ಕಿಶೋರ ಭಾರತಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಜಲ್ ಬಾಗ್ (5ನೇ ನಿಮಿಷ), ಮಕ್ಸಿಯೊನ್ (21 ಮತ್ತು 30ನೇ ನಿಮಿಷ) ಅವರು ಕೋಲ್ಕತ್ತದ ಕ್ಲಬ್ ಪರ ಗೋಲುಗಳನ್ನು ಗಳಿಸಿದರು.

ಸೂಪರ್ ಕಪ್: ಎಐಎಫ್‌ಎಫ್ ಆಸಕ್ತಿ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ಎರಡನೇ ಅಥವಾ ಮೂರನೇ ವಾರದಿಂದ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿ ನಡೆಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಉದ್ದೇಶಿಸಿದೆ. ಆದರೆ ಈ ಋತುವಿನಲ್ಲಿ ಐಎಸ್‌ಎಲ್ ಟೂರ್ನಿ ನಡೆಯುವುದು ಇನ್ನೂ ಖಚಿತವಾಗಿಲ್ಲ.

ಐಎಸ್‌ಎಲ್ ಕ್ಲಬ್ ಪ್ರತಿನಿಧಿಗಳ ಜೊತೆ ಸಭೆ ನಡೆಸಿದ ಎಐಎಫ್‌ಎಫ್ ಸೂಪರ್ ಕಪ್ ನಡೆಸುವ ಪ್ರಸ್ತಾವ ಮುಂದಿಟ್ಟಿತು. ಎಐಎಫ್‌ಎಫ್ ಮತ್ತು ಲೀಗ್ ಆಯೋಜಕ ಎಫ್‌ಎಸ್‌ಡಿಎಲ್ ನಡುವೆ ಮಾಸ್ಟರ್ ರೈಟ್ಸ್ ಒಪ್ಪಂದ ನವೀಕರಣಕ್ಕೆ ಸಂಬಂಧಿಸಿದ ಗೊಂದಲ ಬಗೆಹರಿದಿಲ್ಲದ ಕಾರಣ ಐಎಸ್‌ಎಲ್ ಅನಿಶ್ಚಿತವಾಗಿದೆ.

‘ಐಎಸ್‌ಎಲ್ ಕ್ಲಬ್ ಆಟಗಾರರಿಗೆ ಸ್ಪರ್ಧೆಗಳು ತಪ್ಪಿಹೋಗದಂತೆ ಮುಂದಿನ ತಿಂಗಳ ಎರಡನೇ ಅಥವಾ ಮೂರನೇ ವಾರದಿಂದ ಸೂಪರ್ ಕಪ್ ನಡೆಸಲು ಉದ್ದೇಶಿಸಲಾಗಿದೆ. ನಂತರ ಐಎಸ್‌ಎಲ್‌ಗೆ ಅವಕಾಶವಿದೆ’ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ರಾಷ್ಟ್ರದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಎಐಎಫ್‌ಎಫ್ ಮತ್ತು 13 ಐಎಸ್‌ಎಲ್ ಕ್ಲಬ್‌ಗಳು ಸಾಮೂಹಿಕವಾಗಿ ಈ ನಿರ್ಧಾರಕ್ಕೆ ಬಂದಿವೆ. ನಾವೆಲ್ಲ 7 ರಿಂದ 10 ದಿನಗಳ ಒಳಗೆ ಮತ್ತೊಮ್ಮೆ ಸಭೆ ಸೇರಲಿದ್ದು, ಸೂಪರ್ ಕಪ್ ಆರಂಭಿಸುವ ದಿನಾಂಕ ನಿಗದಿಪಡಿಸಲಿದ್ದೇವೆ’ ಎಂದು ಚೌಬೆ ಹೇಳಿದರು.

ಬೆಳಗಾವಿಯ ಶುಭಂಗೆ ಜಾವೆಲಿನ್ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಶುಭಂ ಕುಂಡೇಕರ ಅವರು ರಾಷ್ಟ್ರೀಯ ಜಾವೆಲಿನ್ ದಿನದ ಪ್ರಯುಕ್ತ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಜಾವೆಲಿನ್ ಥ್ರೋ ಸ್ಪರ್ಧೆಯ 20 ವರ್ಷದೊಳಗಿನವರ ಪುರುಷರ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಶುಭಂ ಅವರು 64.88 ಮೀಟರ್ ದೂರ ಜಾವೆಲಿನ್ ಎಸೆದರು. ಬೆಳಗಾವಿಯ ಮತ್ತೊಬ್ಬ ಅಥ್ಲೀಟ್ ಕಲ್ಲೋಲೆಪ್ಪ ಡಿ ಬಂಡಿವಡ್ಡರ (63.81ಮೀ) ಮತ್ತು ಬೆಂಗಳೂರಿನ ಪವನ್ ಕುಮಾರ್ ಬಿ.ಎಂ. ಕ್ರಮವಾಗಿ ಬೆಳ್ಳಿ ಕಂಚಿನ ಪದಕ ಗೆದ್ದರು.

18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಉಡುಪಿಯ ರಾಘವೇಂದ್ರ ಆರ್. (60 ಮೀ) ಮತ್ತು ಪುರುಷರ ವಿಭಾಗದಲ್ಲಿ ಬೆಂಗಳೂರಿನ ಸಿ. ಶಿವಮಣಿ (48.12 ಮೀ) ಚಿನ್ನ ಗೆದ್ದರು.

ಫಲಿತಾಂಶ: ಪುರುಷರು: ಸಿ ಶಿವಮಣಿ (ಬೆಂಗಳೂರು, ಎಸೆತ: 48.12 ಮೀ)–1; ವಿ. ವೆಂಕಟೇಶ್ (ಬೆಂಗಳೂರು)– 2; ಮೊಹಮ್ಮದ್ ಅಜೀಜ್ (ಬೆಂಗಳೂರು)– 3. **20 ವರ್ಷದೊಳಗಿನ ಪುರುಷರು:** ಶುಭಂ ಕುಂಡೇಕರ್ (ಬೆಳಗಾವಿ, ಎಸೆತ: 64.88 ಮೀ)–1; ಕಲ್ಲೋಲೆಪ್ಪ ಡಿ. ಬಂಡಿವಡ್ಡರ (ಬೆಳಗಾವಿ)–2; ಪವನ್ ಕುಮಾರ ಬಿ.ಎಂ. (ಬೆಂಗಳೂರು)–3. **18 ವರ್ಷದೊಳಗಿನ ಬಾಲಕರು:** ರಾಘವೇಂದ್ರ ಆರ್. (ಉಡುಪಿ, ಎಸೆತ: 60 ಮೀ)–1; ಮನೋಜ್ ಎ,ಎಸ್, (ಚಿಕ್ಕಮಗಳೂರು)–2; ಪುನೀತ್ ಗೌಡ (ಬೆಂಗಳೂರು)– 3. **16 ವರ್ಷದೊಳಗಿನ ಬಾಲಕರು:** ಕುಶಾನ್ (ಬೆಂಗಳೂರು, ಎಸೆತ 32.03 ಮೀ)–1; ಬಸವರಾಜ (ಬೀದರ್)–2; ಆದರ್ಶ ಬಿ.ಎಂ. (ಬೆಂಗಳೂರು)–3.

20 ವರ್ಷದೊಳಗಿನ ಮಹಿಳೆಯರು: ಬಾಳಕ್ಕ ಪಾಟೀಲ (ಬೆಳಗಾವಿ, ಎಸೆತ: 28.85 ಮೀ)–1; ತನ್ಮಯ ಪ್ರಸಾದ್ (ಬೆಂಗಳೂರು)–2; ವರ್ಷಿತಾ ಸಿ. (ಬೆಂಗಳೂರು)–3. **18 ವರ್ಷದೊಳಗಿನ ಬಾಲಕಿಯರು:** ಭವ್ಯಾ ಸಿ.ಜೆ. (ಬೆಳಗಾವಿ, ಎಸೆತ: 43.44 ಮೀ)–1; ಗಾಯತ್ರಿ ಜಿ.ಕೆ (ಬೆಳಗಾವಿ)–2; ಶಾರಿಣಿ ಜೆ. (ಬೆಂಗಳೂರು) –3. **16 ವರ್ಷದೊಳಗಿನ ಬಾಲಕಿಯರು:** ಸಿಂಚನಾ ಡಿ. (ಬೆಂಗಳೂರು, ಎಸೆತ: 27.59 ಮೀ)–1; ಸಿಂಹಸ್ತಿಹ ಸಿಂಗ್ (ಬೆಂಗಳೂರು)– 2



20 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ಚಿನ್ನ ಗೆದ್ದ ಬೆಳಗಾವಿಯ ಶುಭಂ ಕುಂಡೇಕರ (ಮಧ್ಯ), ಬೆಳ್ಳಿ ಗೆದ್ದ ಕಲ್ಲೋಲೆಪ್ಪ ಡಿ. ಬಂಡಿವಡ್ಡರ (ಎಡ) ಮತ್ತು ಕಂಚು ಗೆದ್ದ ಬೆಂಗಳೂರಿನ ಪವನ್ ಕುಮಾರ ಬಿ.ಎಂ. (ಬಲ)

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ ಟೂರ್ನಿ

ಅರ್ಜುನ್ ಇರಿಗೇಶಿಗೆ ಜಯ

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಇರಿಗೇಶಿ ಅವರು ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗುರುವಾರ ಅಮೋಘವಾಗಿ ಆಡಿ ಅಮೆರಿಕದ ಅವಂಡರ್ ಲಿಯಾಂಗ್ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು. ಆದರೆ ಭಾರತದ ಮತ್ತೊಬ್ಬ ಆಟಗಾರ ನಿಹಾಲ್ ಸರಿನ್ ಅವರು ಜರ್ಮನಿಯ ವಿನ್ಸೆಂಟ್ ಕೀಮರ್ ಅವರಿಗೆ ಮಣಿದರು.

ಮಾಸ್ಟರ್ಸ್ ಮತ್ತು ಚಾಲೆಂಜರ್ ವಿಭಾಗಗಳಲ್ಲಿ ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುವ ಈ ಟೂರ್ನಿಯು 9 ಸುತ್ತುಗಳನ್ನು ಒಳಗೊಂಡಿದೆ. ಒಂದು ಕೋಟಿ ರೂಪಾಯಿ ಬಹುಮಾನ ಮೊತ್ತ ಹೊಂದಿದೆ. ಎರಡೂ ವಿಭಾಗಗಳಲ್ಲಿ ತಲಾ 10 ಮಂದಿ ಭಾಗವಹಿಸುತ್ತಿದ್ದಾರೆ. ಚೆನ್ನೈನ ಇಬ್ಬರು ಗ್ರ್ಯಾಂಡ್ ಮಾಸ್ಟರ್‌ಗಳಾದ ವಿ. ಪ್ರಣವ್ ಮತ್ತು ಕಾರ್ತಿಕೇಯನ್ ಮುರಳಿ ನಡುವಣ ಬಹುನಿರೀಕ್ಷಿತ ಸೆಣಸಾಟ ‘ಡ್ರಾ’ದಲ್ಲಿ ಕೊನೆಗೊಂಡಿತು. ನೆದರ್ಲೆಂಡ್ಸ್‌ನ ಅನುಭವಿ ಆಟಗಾರ ಅನಿಶ್ ಗಿರಿ ಮತ್ತು ಅಮೆರಿಕದ ಜಿಎಂ ರೇ ರಾಬ್ಸನ್ ನಡುವಣ ಪಂದ್ಯವೂ ಡ್ರಾ ಆಯಿತು.



ಇರಿಗೇಶಿ

ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅವರು ಡಚ್ ಆಟಗಾರ ಜೋರ್ಡನ್ ವಾನ್ ಫೋರಿಸ್ಟ್ ಜೊತೆ ಪಾಯಿಂಟ್ ಹಂಚಿಕೊಂಡರು. ಚಾಲೆಂಜರ್ ವಿಭಾಗದಲ್ಲಿ ಅಗ್ರ ಆಟಗಾರರಾದ ದೀಪ್ತಾಯನ ಘೋಷ್, ಲಿಯಾನ್ ಲ್ಯೂಕ್ ಮೆಂಡೋನ್ಸಾ ಮತ್ತು ಎಂ.ಪ್ರಾಣೇಶ್ ತಮ್ಮ ಮೊದಲ ಪಂದ್ಯಗಳಲ್ಲಿ ಜಯಗಳಿಸಿದರು. ದೀಪ್ತಾಯನ ಘೋಷ್, ಡಿ.ಹಾರಿಕಾ ವಿರುದ್ಧ, ಮೆಂಡೋನ್ಸಾ, ಹರ್ಷವರ್ಧನ್ ಜಿ.ಬಿ. ವಿರುದ್ಧ ಗೆಲುವು ದಾಖಲಿಸಿದರು.

ಆರ್.ವೈಶಾಲಿ, ಪಾ.ಇನಿಯನ್ ಜೊತೆ, ಅಧಿಬನ್ ಭಾಸ್ಕರನ್, ಅಭಿಮನ್ಯು ಪುರಾಣಿಕ್ ಜೊತೆ ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ರಾಜ್ಯಕ್ಕೆ 86 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಅಹಮದಾಬಾದ್‌ನಲ್ಲಿ ಗುರುವಾರ ಮುಕ್ತಾಯಗೊಂಡ 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 86 ಪದಕಗಳನ್ನು ಗೆದ್ದು, ಸಮಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡರು.

37 ಚಿನ್ನ, 26 ಬೆಳ್ಳಿ ಮತ್ತು 23 ಕಂಚಿನ ಪದಕಗಳೊಂದಿಗೆ ಕರ್ನಾಟಕ ತಂಡವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು. ಮಹಾರಾಷ್ಟ್ರ 38 (17 ಚಿನ್ನ, 10 ಬೆಳ್ಳಿ ಮತ್ತು 11 ಕಂಚು), ಬಂಗಾಳ 11 (6 ಚಿನ್ನ, 4 ಬೆಳ್ಳಿ ಮತ್ತು 1 ಕಂಚು) ಕ್ರಮವಾಗಿ ನಂತರದ ಸ್ಥಾನ ಪಡೆದವು.

ಬಾಲಕರ ಗುಂಪು 1 ವಿಭಾಗದಲ್ಲಿ 161 ಅಂಕ, ಗುಂಪು 2ರಲ್ಲಿ 183 ಅಂಕಗಳೊಂದಿಗೆ ಕರ್ನಾಟಕ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತು. ಬಾಲಕಿಯರ ಗುಂಪು 1ರಲ್ಲಿ ಕರ್ನಾಟಕ (206) ಮತ್ತು ಗುಂಪು 2ರಲ್ಲಿ ಮಹಾರಾಷ್ಟ್ರ (138) ಸಮಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡವು.

ಕರ್ನಾಟಕದ ಉದಯೋನ್ಮುಖ ತಾರೆ ದಕ್ಷಣ್ ಎಸ್. (ಗುಂಪು 1) ಅವರು ಎರಡು ಕೂಟ ದಾಖಲೆಯೊಂದಿಗೆ ನಾಲ್ಕು ಚಿನ್ನ, ಒಂದು ಕಂಚು ಗೆದ್ದು ಬಾಲಕರಲ್ಲಿ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಗೆ ಪಾತ್ರವಾದರು. ರಾಜ್ಯದ ತನಿಷಿ ಗುಪ್ತಾ (ಗುಂಪು 1) ಮೂರು ಕೂಟ ದಾಖಲೆಯೊಂದಿಗೆ ಐದು ಚಿನ್ನ ಗೆದ್ದು, ಬಾಲಕಿಯರ ವೈಯಕ್ತಿಕ ಪ್ರಶಸ್ತಿ ಗೆದ್ದರು.

ಮಣಿಪುರದ ಲೈತೊಂಜಮ್ ಲ್ಯಾಂಚೆನ್ಬಾ (5 ಚಿನ್ನ) ಬಾಲಕರ ಗುಂಪು 2ರಲ್ಲಿ, ಮಹಾರಾಷ್ಟ್ರದ ಸಾನ್ವಿ ದೇಶ್‌ವಾಲ್ (5 ಚಿನ್ನ) ಬಾಲಕಿಯರ ಗುಂಪು 2ರಲ್ಲಿ ವೈಯಕ್ತಿಕ ಚಾಂಪಿಯನ್ ಆದರು.

ತನಿಶಿ, ರುಜುಲಾ ರಾಷ್ಟ್ರೀಯ ದಾಖಲೆ: ಕೂಟದ ಕೊನೆಯ ದಿನ ಕರ್ನಾಟಕದ ತನಿಷಿ ಗುಪ್ತಾ ಅವರು ಬಾಲಕಿಯರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. 2 ನಿಮಿಷ 20.34 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ಅವರು ಕರ್ನಾಟಕದ ದಮಣಿ ಗೌಡ ಅವರು (2:21.53) 2015ರಲ್ಲಿ ನಿರ್ಮಿಸಿದ್ದ ದಾಖಲೆಯನ್ನು ಮುಳುಗಿಸಿದರು.

ರಾಜ್ಯದ ರುಜುಲಾ ಎಸ್. ಅವರು ಬಾಲಕಿಯರ 100 ಮೀಟರ್ ಫ್ರೀಸ್ಟೈಲ್‌ನಲ್ಲಿ 58.54 ಸೆಕೆಂಡ್ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ಬರೆದರು. ಅವರು 2014ರಲ್ಲಿ ಶಿವಾನಿ ಕಟಾರಿಯಾ (58.71ಸೆ)



ಅಹಮದಾಬಾದ್‌ನಲ್ಲಿ ನಡೆದ 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡದ ಈಜುಪಟುಗಳು

ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ಮಣಿಪುರದ ಲೈತೊಂಜಮ್ ಅವರು ಬಾಲಕರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. 26.03 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದ ಅವರು 2018ರಲ್ಲಿ ಆರ್ಯನ್ ವರ್ಣೇಕರ್ (26.13) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು.

ಫಲಿತಾಂಶ (ಕರ್ನಾಟಕದವರು ಮಾತ್ರ): ಬಾಲಕರು: ಗುಂಪು 1: 50 ಮೀ ಬಟರ್‌ಫ್ಲೈ: ಹರಿಕಾರ್ತಿಕ್ ವೇಲು (25.97ಸೆ)–3. 100 ಮೀ ಬ್ರೆಸ್ಟ್ ಸ್ಟ್ರೋಕ್: ಆಯುಷ್ ಶಿವರಾಜು ಮಾಗನಹಳ್ಳಿ (1ನಿ.07.07ಸೆ)–3. 100 ಮೀ ಫ್ರೀಸ್ಟೈಲ್: ದಕ್ಷಣ್ ಎಸ್. (52.68ಸೆ)– 1; ಮೋನಿಶ್ ಪಿ.ವಿ. (53.06ಸೆ)–3. ಗುಂಪು 2: 100 ಮೀ ಫ್ರೀಸ್ಟೈಲ್: ಶರಣ್ ಎಸ್. (55.50ಸೆ)–1. 100 ಮೀ ಬ್ರೆಸ್ಟ್ ಸ್ಟ್ರೋಕ್: ರೆಯಾನ್ಶ್ ಕಂಠಿ ವೈ. (1ನಿ.12.01ಸೆ)–2.

ಬಾಲಕಿಯರು: ಗುಂಪು 1: 50 ಮೀ ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (35.09ಸೆ)–2; ಹಿಯಾ ಎಂ. (35.94ಸೆ)–3. 100 ಮೀ ಫ್ರೀಸ್ಟೈಲ್: ರುಜುಲಾ ಎಸ್. (ನೂತನ ದಾಖಲೆ: 58.54ಸೆ; ಹಳೆಯದು: 58.71ಸೆ, ಶಿವಾನಿ ಕಟಾರಿಯಾ)–1. 200 ಮೀ ಬಟರ್‌ಫ್ಲೈ: ತನಿಷಿ ಗುಪ್ತಾ (ನೂತನ ದಾಖಲೆ: 2ನಿ.20.34ಸೆ, ಹಳೆಯದು: ದಾಮಿನಿ ಗೌಡ, 2:21.53) 1; ಹಶಿಕಾ ರಾಮಚಂದ್ರ (2:22.47)–2.

ಗುಂಪು 2: 50 ಮೀ ಬ್ರೆಸ್ಟ್‌ಸ್ಟ್ರೋಕ್: ಇಂಚರ ಎಚ್.ಆರ್ (35.95ಸೆ)–3. 100 ಮೀ ಫ್ರೀಸ್ಟೈಲ್: ತ್ರಿಶಾ ಸಿಂಧು ಎಸ್. (1:00.87)–1.

ಸಮಗ್ರ ಪ್ರಶಸ್ತಿ: ಕರ್ನಾಟಕ (645 ಅಂಕ).

11ರಿಂದ 28ರವರೆಗೆ ಟೂರ್ನಿ • ಪ್ರೇಕ್ಷಕರಿಗೆ ನಿರ್ಬಂಧ


ಮಹಾರಾಜ ಟ್ರೋಫಿ: ಮೈಸೂರು ಸಜ್ಜು

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ‘ಮಹಾರಾಜ ಟ್ರೋಫಿ ಟ್ವೆಂಟಿ–20 ಕ್ರಿಕೆಟ್ ಟೂರ್ನಿ’ಯನ್ನು ನಗರದ ‘ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ’ದಲ್ಲಿ ಆಯೋಜಿಸಿದ್ದು, ಆ.11ರಿಂದ 28ರವರೆಗೆ ನಡೆಯಲಿದೆ.

ಕಳೆದ ಬಾರಿಯ ಚಾಂಪಿಯನ್ಸ್ ಆತಿಥೇಯ ಮೈಸೂರು ವಾರಿಯರ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಮಂಗಳೂರು ಡ್ರಾಗನ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್ ನಡುವೆ ಉದ್ಘಾಟನಾ ದಿನದ ಪಂದ್ಯಗಳು ನಡೆಯಲಿದೆ. ನಿತ್ಯ ಎರಡು ಪಂದ್ಯಗಳು ನಡೆಯಲಿದ್ದು, ಎರಡನೇ ಪಂದ್ಯ ಹೊನಲು ಬೆಳಕಿನಡಿ ನಡೆಯಲಿದೆ.

2022ರಲ್ಲಿ ಮೊದಲ ಹಂತದ 14 ಪಂದ್ಯಗಳು ಇಲ್ಲಿಯೇ ನಡೆದಿದ್ದವು. ಮೂರು ವರ್ಷಗಳ ನಂತರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಸಾಂಸ್ಕೃತಿಕ ನಗರಿಗೆ ಟೂರ್ನಿ ಸ್ಥಳಾಂತರಗೊಂಡಿದೆ.



30 ಲೀಗ್, ಕ್ವಾಲಿಫೈಯರ್–1, ಎಲಿಮಿನೇಟರ್, ಕ್ವಾಲಿಫೈಯರ್–2, ಫೈನಲ್ ಸೇರಿದಂತೆ ಒಟ್ಟು 34 ಪಂದ್ಯಗಳು ನಡೆಯಲಿವೆ.

ಪ್ರಸಿದ್ಧ ಕೃಷ್ಣ, ಕರುಣ್ ನಾಯರ್, ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ಮನೀಷ್ ಪಾಂಡೆ ಸೇರಿ ತಾರಾ ಕ್ರಿಕೆಟಿಗರು ಆಡುತ್ತಿದ್ದಾರೆ.

‘ಟೂರ್ನಿ ಆಯೋಜನೆಗೆ ಪೊಲೀಸ್ ಇಲಾಖೆಯ ಅನುಮತಿಯನ್ನು ಆ.7ರಂದು ಕೆಎಸ್‌ಸಿಎ ಪಡೆದಿದೆ. ಪಂದ್ಯಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶವಿಲ್ಲ. ಆಟಗಾರರು, ಕೆಎಸ್‌ಸಿಎ ಮತ್ತು ತಂಡಗಳ ಸಿಬ್ಬಂದಿ ಹಾಗೂ ಮಾಧ್ಯಮದವರಿಗೆ ಮಾತ್ರ ಪ್ರವೇಶಾವಕಾಶವಿದೆ’ ಎಂದು ಸಂಸ್ಥೆಯ ವಲಯ ನಿಮಂತ್ರಕ ಹರಿಕೃಷ್ಣ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಭದ್ರತೆಯನ್ನು ನೀಡುವಂತೆ ಪೊಲೀಸ್ ಇಲಾಖೆಗೆ ಪತ್ರ ಬರೆಯಲಾಗಿತ್ತು. ಗುರುವಾರವಷ್ಟೇ ಅನುಮತಿ ಸಿಕ್ಕಿದೆ. ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದರು.

ಸಿದ್ಧತೆ: ಕ್ರೀಡಾಂಗಣದ ಸುತ್ತಲೂ ಬ್ಯಾರಿಕೇಡ್ ಹಾಗೂ ಕಬ್ಬಿಣದ ಶೀಟ್‌ಗಳಿಂದ ತಡೆಗೋಡೆ ನಿರ್ಮಿಸಲಾಗುತ್ತಿದೆ. ಗುರುವಾರ 4 ಪಿಚ್‌ಗಳು ಹಾಗೂ ಹುಲ್ಲುಹಾಸನ್ನು ಹದಗೊಳಿಸುವ ಕಾರ್ಯದಲ್ಲಿ ಸಿಬ್ಬಂದಿ ಮಗ್ನರಾಗಿದ್ದರು.

ಮೈಸೂರು ವಾರಿಯರ್ಸ್, ಬೆಂಗಳೂರು ಬ್ಲಾಸ್ಟರ್ಸ್, ಹುಬ್ಬಳ್ಳಿ ಟೈಗರ್ಸ್, ಶಿವಮೊಗ್ಗ ಲಯನ್ಸ್, ಮಂಗಳೂರು ಡ್ರ್ಯಾಗನ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ತಂಡಗಳು ಭಾಗಿಯಾಗಲಿವೆ.



ಸಿದ್ಧಾಂತ್ ಎಂ.

ರ್‍ಯಾಂಕಿಂಗ್ ಟಿಟಿ: ಸಿದ್ಧಾಂತ್‌ಗೆ ಪ್ರಶಸ್ತಿ

ಬೆಂಗಳೂರು: ಮಲ್ಲೇಶ್ವರಂ ಅಸೋಸಿಯೇಷನ್ ಆಶ್ರಯದ 5ನೇ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿನವರ ವಿಭಾಗದಲ್ಲಿ ನಗರದ ಸಿದ್ಧಾಂತ್ ಎಂ. ಅವರು 13 ವರ್ಷದೊಳಗಿನವರ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

ಗುರುವಾರ ನಡೆದ ಫೈನಲ್‌ನಲ್ಲಿ ಸಿದ್ಧಾಂತ್ 11–7, 11–8, 11–8 ರಿಂದ ಆರ್ನವ್ ಮಿಥುನ್ ವಿರುದ್ಧ ಜಯಗಳಿಸಿದರು. ಸೆಮಿಫೈನಲ್‌ನಲ್ಲಿ ಸಿದ್ಧಾಂತ್ 9–11, 11–8, 11–7, 12–10 ರಿಂದ ರಿಯಾನ್ಶ್ ಗರ್ಗ್ ಅವರನ್ನು, ಆರ್ನವ್ 9–11, 11–5, 11–6, 11–5 ರಿಂದ ಸಿ.ಎಂ. ಹರ್ಷಿತ್ ಅವರನ್ನು ಮಣಿಸಿದ್ದರು.

ಚಿಟಿಕೆ ಸುದ್ದಿ

ಐವರು ಬಾಕ್ಸರ್‌ಗಳು ಸೆಮಿಫೈನಲ್‌ಗೆ

ಬ್ಯಾಂಕಾಕ್ (ಪಿಟಿಐ): ಭಾರತದ ಐವರು ಬಾಕ್ಸರ್‌ಗಳು ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್‌ನ ತಮ್ಮ ತಮ್ಮ ತೂಕ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಶಿವಂ (55 ಕೆ.ಜಿ), ಮೌಸಮ್ ಸುಹಾಗ್ (65 ಕೆ.ಜಿ), ರಾಹುಲ್ (75 ಕೆ.ಜಿ), ಗೌರವ್ (85 ಕೆ.ಜಿ) ಮತ್ತು ಹೇಮಂತ್ ಸಾಂಗ್ವಾನ್ (90 ಕೆ.ಜಿ) ತಮ್ಮ ಎದುರಾಳಿಗಳನ್ನು ಸೋಲಿಸಿ ಗುರುವಾರ ನಾಲ್ಕರ ಘಟ್ಟಕ್ಕೆ ಮುನ್ನಡೆದರು. ಮಹಿಳಾ ವಿಭಾಗದಲ್ಲಿ ಈಗಾಗಲೇ 7 ಮಂದಿ ಸೆಮಿಫೈನಲ್ ಪ್ರವೇಶಿಸಿದ್ದರಿಂದ 12 ಪದಕ ಖಚಿತಗೊಂಡಿವೆ.

22 ವರ್ಷದೊಳಗಿನವರ ವಿಭಾಗದಲ್ಲಿ ಭಾರತಕ್ಕೆ 13 ಪದಕಗಳು ಖಚಿತವಾಗಿದ್ದು, ಐದು ಬಾಕ್ಸರ್‌ಗಳು ಚಿನ್ನದ ಪದಕಕ್ಕಾಗಿ ಸೆಣಸಲಿದ್ದಾರೆ.

ಹೊಟ್ಟೆಂಗಡ ಸಿ. ತಿಮ್ಮಯ್ಯ ನಿಧನ



ಬೆಂಗಳೂರು: ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ (ಕೆಎಸ್‌ಎಚ್‌ಎ) ಮಾಜಿ ಅಧ್ಯಕ್ಷ ಹೊಟ್ಟೆಂಗಡ ಸಿ. ತಿಮ್ಮಯ್ಯ (81) ಅವರು ಗುರುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಕೊಡಗು ಮೂಲದ ಅವರು ಕೆಎಸ್‌ಎಚ್‌ಎ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇಲ್ಲಿನ ಹಾಕಿ ಕ್ರೀಡಾಂಗಣದ ಆವರಣದಲ್ಲಿ ಕ್ಲಬ್ ಹೌಸ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಲವಾರು ಅಭಿವೃದ್ಧಿ ಕ್ರಮಗಳನ್ನು ಕೈಗೊಂಡಿದ್ದರು. ದೇಶದ ಖ್ಯಾತ ವಾಸ್ತುಶಿಲ್ಪಿಗಳಲ್ಲಿ ಒಬ್ಬರಾಗಿದ್ದ ಅವರು, ಅಖಿಲ ಭಾರತ ವಾಸ್ತುಶಿಲ್ಪಿಗಳ ಸಂಘದಲ್ಲಿ ಪ್ರಮುಖ ಹುದ್ದೆಯನ್ನು ನಿರ್ವಹಿಸಿದ್ದರು.

ಅವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಬೆಂಗಳೂರಿನ ಕಲ್ಪಳ್ಳಿಯ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೂನಿಯರ್ ರಾಷ್ಟ್ರೀಯ ವಾಟರ್‌ಪೋಲೊ

ಕರ್ನಾಟಕದ ಬಾಲಕಿಯರು ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೇಯ ಓಟವನ್ನು ಮುಂದುವರಿಸಿದ ಕರ್ನಾಟಕದ ಬಾಲಕಿಯರು ಇಲ್ಲಿ ನಡೆಯುತ್ತಿರುವ 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ವಾಟರ್‌ಪೋಲೊ ಸ್ಪರ್ಧೆಯಲ್ಲಿ ಫೈನಲ್ ಪ್ರವೇಶಿಸಿದರು. ಆದರೆ, ರಾಜ್ಯದ ಬಾಲಕರ ತಂಡವು ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿತು.

ಬಸವನಗುಡಿ ಈಜು ಕೇಂದ್ರದಲ್ಲಿ ಕೂಟದ ನಾಲ್ಕನೇ ದಿನವಾದ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಆತಿಥೇಯ ಬಾಲಕಿಯರ ತಂಡವು 21–12ರಿಂದ ಒಡಿಶಾ ತಂಡವನ್ನು ಮಣಿಸಿತು. ನಿತ್ಯಾ ಸಿ (6), ರೋಶಣಿ ಎಸ್. (5), ಮಾನ್ಯಾ ಆರ್ (4) ಮತ್ತು ಇಶಾನಿ ಕಿರಣ್ (4) ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಡಿಶಾ ತಂಡದ ಪರ ಕೃಷ್ಣ ಪ್ರಿಯ ನಾಯಕ್ 5 ಅಂಕ ಮತ್ತು ಪೂಜಾ ಪ್ರಧಾನ್ 4 ಅಂಕ ಕಲೆಹಾಕಿದರು.

ರಾಜ್ಯದ ಬಾಲಕಿಯರ ತಂಡವು ಇದಕ್ಕೂ ಮುನ್ನ 7–6ರಿಂದ ಮಹಾರಾಷ್ಟ್ರ ವಿರುದ್ಧ; 8–1ರಿಂದ ತಮಿಳುನಾಡು ವಿರುದ್ಧ; 9–0ರಿಂದ ಅಸ್ಸಾಂ ವಿರುದ್ಧ ಗೆಲುವು ಸಾಧಿಸಿತ್ತು. ಶುಕ್ರವಾರ ನಡೆಯುವ ಫೈನಲ್‌ನಲ್ಲಿ ಕೇರಳ ವಿರುದ್ಧ ಸೆಣಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಕೇರಳ ತಂಡವು 14–4ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು.

ಹ್ಯಾಟ್ರಿಕ್ ಗೆಲುವು ಸಾಧಿಸಿದ್ದ ಕರ್ನಾಟಕದ ಬಾಲಕರ ತಂಡವು ಸೆಮಿಫೈನಲ್‌ನ ರೋಚಕ



ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ ಬಾಲಕಿಯರ ವಾಟರ್‌ಪೋಲೊ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕದ ಮಾನ್ಯಾ ಆರ್ (ಬಿಳಿ ಟೋಪಿ 3) ಮತ್ತು ಒಡಿಶಾ ತಂಡದ ರೇಣುಕಾ ತಿರಿಯ ಚೆಂಡಿಗಾಗಿ ಸೆಣಸಾಡಿದರು.

ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್‌.ಜಿ.

ಹಣಾಹಣಿಯಲ್ಲಿ 13–15ರಿಂದ ಬಂಗಾಳ ತಂಡಕ್ಕೆ ಮಣಿಯಿತು. ಕಂಚಿನ ಪದಕದ ಸ್ಪರ್ಧೆಗಾಗಿ ಕರ್ನಾಟಕ ಮತ್ತು ಕೇರಳ ತಂಡಗಳು ಸೆಣಸಲಿವೆ.

ಮಹಾರಾಷ್ಟ್ರ ಮಿಂಚು: ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆಯುತ್ತಿರುವ ಡೈವಿಂಗ್ ಸ್ಪರ್ಧೆಯಲ್ಲಿ ಗುರುವಾರ ಮಹಾರಾಷ್ಟ್ರದ ಈಜುಪಟುಗಳು ಮೂರು ಚಿನ್ನದ ಪದಕಗಳಿಗೆ ಕೊರಳೊಡ್ಡಿ, ಪಾರಮ್ಯ ಮುಂದುವರಿಸಿದರು. ಒಂದು ಚಿನ್ನ ಮಣಿಪುರದ ಪಾಲಾಯಿತು.

ಫಲಿತಾಂಶ: ಬಾಲಕರು: ಜಿ–1 1ಎಂಟಿ ಎಸ್‌ಬಿ: ಸ್ವರಾಜ್ ರಾಜೇಂದ್ರ ಲಾಡ್ (ಮಹಾರಾಷ್ಟ್ರ, 381.15 ಅಂಕ)–1, ಸೌಮಿಕ್ ಪೊಲ್ಲಿ (ಎಸ್‌ಎಸ್‌ಸಿಬಿ)–2, ಅರಿತ್ರಾ ಕೋಲಿ (ಎಸ್‌ಎಸ್‌ಸಿಬಿ)–3. ಜಿ–3 3ಎಂಟಿ ಎಸ್‌ಬಿ: ಅರುಬಮ್ ಬೆನ್ಹರ್ (ಮಣಿಪುರ, 246.15 ಅಂಕ)–1, ಹಿರೋಮ್ ಬೋನ್ಸನ್ ಸಿಂಗ್ (ಮಣಿಪುರ)–2, ಇಂದ್ರನಿಲ್ ದಿಗ್ವಿಜಯ್ ಪಾಟೀಲ (ಮಹಾರಾಷ್ಟ್ರ)–3.

ಬಾಲಕಿಯರು: ಜಿ–1 3ಎಂಟಿ ಎಸ್‌ಬಿ: ಶ್ರಾವಣಿ ಪ್ರತಾಪ್ ಸೂರ್ಯವಂಶಿ (ಮಹಾರಾಷ್ಟ್ರ, 313.30 ಅಂಕ)–1, ಅನ್ವೇಶಾ ಧಾರಾ (ಬಂಗಾಳ)–2, ಕೆಯಾ ಹೆರಾಂಬ್ ಪ್ರಭು (ಮಹಾರಾಷ್ಟ್ರ)–3. ಜಿ 3 1ಎಂಟಿ ಎಸ್‌ಬಿ: ಮಾನಸ್ವಿ ರಾಜಶೇಖರ್ ಮಾನೆ (ಮಹಾರಾಷ್ಟ್ರ, 188.15 ಅಂಕ)–1, ಉರ್ಜಿತಾ ದಾಸ್ (ಬಂಗಾಳ)–2, ನಿಶಿತಾ ರಾಜ್ ಠಾಕೂರ್ (ಮಹಾರಾಷ್ಟ್ರ)–3.



ಬೆಂಗಳೂರಿನಲ್ಲಿ ಬುಧವಾರ ‘ಉಲ್ಲಾಸ್ ಯುವಿಪೆ ಬ್ಯಾಸ್ಕೆಟ್‌ಬಾಲ್ ಅಕಾಡೆಮಿ’ಗೆ ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್ ಚಾಲನೆ ನೀಡಿದರು. ಅಕಾಡೆಮಿ ಸಿಇಒ ಅಜಿತ್ ಕುಮಾರ್, ಅಕಾಡೆಮಿ ಮುಖ್ಯಸ್ಥ, ಬ್ಯಾಸ್ಕೆಟ್‌ಬಾಲ್ ಆಟಗಾರ ಉಲ್ಲಾಸ್ ಕೆ.ಎಸ್. ಅವರು ಭಾಗವಹಿಸಿದ್ದರು

ಮೈಸೂರು ವಾರಿಯರ್ಸ್‌ಗೆ ಜಯ

ಬೆಂಗಳೂರು: ಮೈಸೂರು ವಾರಿಯರ್ಸ್ ತಂಡ ಮಹಾರಾಣಿ ಕಪ್ ಮಹಿಳಾ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಗುರುವಾರ ಮಂಗಳೂರು ಡ್ರ್ಯಾಗನ್ಸ್ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಈ ಪಂದ್ಯವನ್ನು ಮಳೆಯ ಕಾರಣ ತಲಾ 11 ಓವರುಗಳಿಗೆ ಇಳಿಸಲಾಯಿತು. ಮೊದಲು ಆಡಿದ ಮಂಗಳೂರು ತಂಡ 11 ಓವರುಗಳಲ್ಲಿ 5 ವಿಕೆಟ್‌ಗೆ 97 ರನ್ ಹೊಡೆಯಿತು. ಮೈಸೂರು ತಂಡ ಮೂರು ಎಸೆತಗಳು ಉಳಿದಿರುವಂತೆ 2 ವಿಕೆಟ್‌ಗೆ 98 ರನ್ ಬಾರಿಸಿತು.

ಬೆಳಿಗ್ಗೆ ನಿಗದಿಯಾಗಿದ್ದ ಹುಬ್ಬಳ್ಳಿ ಟೈಗರ್ಸ್ ಮತ್ತು ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ನಡುವಣ ಪಂದ್ಯವನ್ನು ಹೊರಾಂಗಣ ತೇವವಾಗಿದ್ದ ಕಾರಣ ರದ್ದುಗೊಳಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 11 ಓವರುಗಳಲ್ಲಿ 5 ವಿಕೆಟ್‌ಗೆ 97 (ಪ್ರೇರಣಾ ಜಿ.ಆರ್. 29, ಇಂಚರಾ ಸಿ.ಯು ಔಟಾಗದೇ 37; ಅಹ್ಲಾಮ್ ಎಫ್. ಸೈಯದ್ 17ಕ್ಕೆ2, ಸಹನಾ ಎಸ್.ಪವಾರ್ 20ಕ್ಕೆ2); ಮೈಸೂರು ವಾರಿಯರ್ಸ್: 10.3 ಓವರುಗಳಲ್ಲಿ 2 ವಿಕೆಟ್‌ಗೆ 98 (ಶುಭಾ ಸತೀಶ್ 47, ರಚಿತಾ ಹತ್ವಾರ್ ಔಟಾಗದೇ 39).

ವೇಲಮ್ಮಾಳ್ ವಿದ್ಯಾಲಯಕ್ಕೆ ಚಿನ್ನ

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್ ಗುಕೇಶ್, ಹಾಲಿ ವಿಶ್ವಕಪ್ ರನ್ನರ್ ಅಪ್ ಪ್ರಜ್ಞಾನಂದ ಅವರು ಕಲಿತಿರುವ ಚೆನ್ನೈನ ವೇಲಮ್ಮಾಳ್ ವಿದ್ಯಾಲಯ, ಅಮೆರಿಕದ ವರ್ಜೀನಿಯಾದಲ್ಲಿ ನಡೆದ ವಿಶ್ವ ಶಾಲೆಗಳ ಟೀಮ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದೆ. ವೇಲಮ್ಮಾಳ್ ವಿದ್ಯಾಲಯ ಎಂಟು ಸುತ್ತುಗಳಿಂದ 16 ಅಂಕಗಳನ್ನು ಗಳಿಸಿದೆ.

ಕಜಕಸ್ತಾನದ ನ್ಯಾಷನಲ್ ಸ್ಕೂಲ್ ಆಫ್ ಫಿಸಿಕ್ಸ್ ಆ್ಯಂಡ್ ಮ್ಯಾಥಮೆಟಿಕ್ಸ್ ತಂಡ ಬೆಳ್ಳಿ ಮತ್ತು ಅಮೆರಿಕದ ಹಾರ್ಕರ್ ಸ್ಕೂಲ್ ಕಂಚು ಗೆದ್ದುಕೊಂಡವು.

ನಕಲಿ ಪ್ರಮಾಣಪತ್ರ: 11 ಕುಸ್ತಿಪಟುಗಳ ಅಮಾನತು

ನವದೆಹಲಿ (ಪಿಟಿಐ): ನಕಲಿ ಜನನ ಪ್ರಮಾಣಪತ್ರಗಳನ್ನು ಸಲ್ಲಿಸಿದ 11 ಮಂದಿ ಕುಸ್ತಿಪಟುಗಳನ್ನು ಭಾರತ ಕುಸ್ತಿ ಫೆಡರೇಷನ್ ಅಮಾನತುಗೊಳಿಸಿದೆ.

ದೆಹಲಿ ಮುನ್ಸಿಪಲ್ ಕಾರ್ಪೋರೇಷನ್ (ಎಂಸಿಡಿ) ಇಂಥ 110 ಪ್ರಮಾಣಪತ್ರಗಳನ್ನು ಪರಿಶೀಲನೆ ನಡೆಸಿತ್ತು. ವಯೋಮಿತಿ ಮೀರಿದವರು ಇಂಥ ಪ್ರಮಾಣಪತ್ರದ ಮೂಲಕ ಕೆಲ ವಯೋವರ್ಗ ವಿಭಾಗಗಳಲ್ಲಿ ಸ್ಪರ್ಧಿಸುತ್ತಿದ್ದರು. ಇನ್ನು ಕೆಲವರು ನಕಲಿ ಪ್ರಮಾಣಪತ್ರ ಬಳಸಿ ತಮ್ಮ ಮೂಲ ರಾಜ್ಯದ ಬದಲು ಬೇರೆ ರಾಜ್ಯಗಳನ್ನು ಪ್ರತಿನಿಧಿಸುವ ‘ಅವಕಾಶ’ ಗಿಟ್ಟಿಸಿಕೊಳ್ಳುತ್ತಿದ್ದರು.

ಕೆಲವು ಪ್ರಕರಣಗಳಲ್ಲಿ ಕ್ರೀಡಾಪಟು ಜನಿಸಿದ 12–15 ವರ್ಷಗಳ ನಂತರ ಪ್ರಮಾಣಪತ್ರಗಳನ್ನು ನೀಡಿದ ನಿದರ್ಶನಗಳೂ ಬಯಲಾಗಿವೆ. ಕೆಲವು ಪ್ರಮಾಣಪತ್ರಗಳನ್ನು ಎಂಸಿಡಿ ನೀಡಿದೆ. ಕೆಲವು ಪ್ರಮಾಣಪತ್ರಗಳನ್ನು ಉಪ ವಿಭಾಗಾಧಿಕಾರಿ ಆದೇಶದಂತೆ ನೀಡಲಾಗಿದೆ.

ಬ್ಯಾಸ್ಕೆಟ್‌ಬಾಲ್ ಟೂರ್ನಿ 21ರಿಂದ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಸಹಯೋಗದಲ್ಲಿ ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ಆಯೋಜಿಸುವ ಜೇಮ್ಸ್ ನೈಸ್ಮಿತ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿ ಇದೇ 21ರಿಂದ 24ರ ವರೆಗೆ ನಡೆಯಲಿದೆ.

ಕರಾವಳಿ ಉತ್ಸವ ಮೈದಾನದ ಸಮೀಪವಿರುವ ಯು.ಶ್ರೀನಿವಾಸ ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಪ್ರಾಥಮಿಕ, ಪ್ರೌಢಶಾಲೆಯ ಬಾಲಕ ಬಾಲಕಿಯರು, ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.

ಪ್ರವೇಶ ಪತ್ರಗಳನ್ನು ಎಂಬಿಸಿ ಮುಖ್ಯ ಕೋಚ್ ಆದಿತ್ಯ ಮಹಾಲೆ ಅವರಿಗೆ ಕಳುಹಿಸಿಕೊಡುವಂತೆ ದಕ್ಷಿಣ ಕನ್ನಡ ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ನವೀನ್ ಶೆಟ್ಟಿ ತಿಳಿಸಿದ್ದಾರೆ.

ವಿಚಾರಣೆಗೆ ಸಮಿತಿ ರಚಿಸಿದ ಭಾರತ ಒಲಿಂಪಿಕ್ ಸಂಸ್ಥೆ

ಬಿಎಫ್‌ಐ ಅಧಿಕಾರಿ ವಿರುದ್ಧ ಲವ್ಲಿನಾ ದೂರು

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್ ಕಾರ್ಯನಿರ್ವಾಹಕ ನಿರ್ದೇಶಕ ಕರ್ನಲ್ ಅರುಣ್ ಮಲಿಕ್ ಅವರು ‘ಅಗೌರವದ ಮತ್ತು ಲಿಂಗ ತಾರತಮ್ಯದ ಹೇಳಿಕೆ’ ನೀಡಿದ್ದಾರೆ ಎಂದು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಅವರು ಆರೋಪಿಸಿದ್ದಾರೆ.

ಆರೋಪದ ಬಗ್ಗೆ ವಿಚಾರಣೆ ನಡೆಸಲಾಗುತ್ತಿದ್ದು ಶೀಘ್ರವೇ ವರದಿ ಸಲ್ಲಿಸಲಾಗುತ್ತಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಅಧಿಕಾರಿ ತಿಳಿಸಿದ್ದಾರೆ.

ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಸಾಯ್ ಮಹಾನಿರ್ದೇಶಕ, ಟಾಪ್ಸ್ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್) ಮತ್ತು ಭಾರತ ಬಾಕ್ಸಿಂಗ್ ಫೆಡರೇಷನ್ ಉದ್ದೇಶಿಸಿ ಬರೆದ ಪತ್ರದಲ್ಲಿ ಲವ್ಲಿನಾ ಈ ಬಗ್ಗೆ ದೂರಿದ್ದಾರೆ. ಜುಲೈ 8ರಂದು ಸಾಯ್ ಮತ್ತು ಟಾಪ್ಸ್ ಅಧಿಕಾರಿಗಳು ಭಾಗವಹಿಸಿದ್ದ ಝೂಮ್ ಸಭೆಯಲ್ಲಿ ಮಲಿಕ್ ಅವರು ತಮ್ಮನ್ನು ಅವಮಾನಿಸಿದ್ದು, ತಮ್ಮ ಸಾಧನೆಗಳನ್ನು ಕಡೆಗಣಿಸಿ ಮಾತನಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಸಭೆಯ ವೇಳೆ ತಮ್ಮ ವೈಯಕ್ತಿಕ ಕೋಚ್‌ಗೆ (ಅವರೂ ಆನ್‌ಲೈನ್ ಸಭೆಯಲ್ಲಿದ್ದರು) ರಾಷ್ಟ್ರೀಯ ಶಿಬಿರದಲ್ಲಿರಲು



ಲವ್ಲಿನಾ ಬೊರ್ಗೊಹೈನ್

ಅವಕಾಶ ನೀಡಬೇಕು, ಯುರೋಪ್ ತರಬೇತಿ ಸಮಯದಲ್ಲಿ ತಮ್ಮೊಂದಿಗೆ ತೆರಳಲು ಅನುಮತಿ ನೀಡಬೇಕು ಎಂದು ವಿನಂತಿ ಮಾಡಿದ್ದರು. ಬಿಎಫ್‌ಐ ನಿಯಮದಂತೆ ರಾಷ್ಟ್ರೀಯ ಶಿಬಿರದಲ್ಲಿ ವೈಯಕ್ತಿಕ ಕೋಚ್‌ಗೆ ಭಾಗಿಯಾಲು ಅವಕಾಶವಿರುವುದಿಲ್ಲ.

‘ತಮ್ಮ ಮನವಿಗೆ ಮಲಿಕ್ ಒರಟಾಗಿ ಪ್ರತಿಕ್ರಿಯಿಸಿದ್ದಾರೆ. ತಮ್ಮನ್ನು ಉದ್ದೇಶಿಸಿ ತುಚ್ಛವಾಗಿ ಮಾತನಾಡಿದ್ದಾರೆ’ ಎಂದು ಲವ್ಲಿನಾ ಹೇಳಿದ್ದಾರೆ. ‘ಅವರು ಗದರುವ ದಾಟಿಯಲ್ಲಿ ‘ಶಟ್ ಅಪ್. ತಲೆತಗ್ಗಿಸಿ ಮಾತಾಡಿ. ನಾವು ಹೇಳಿದಷ್ಟೇ ಕೇಳಿ’ ಎಂದಿದ್ದಾರೆ. ಇದು ಅಗೌರವದ ರೀತಿಯಲ್ಲಿತ್ತು, ಮಾತ್ರವಲ್ಲ ಲಿಂಗ ತಾರತಮ್ಯದ ಧಾಟಿಯಲ್ಲಿತ್ತು’ ಎಂದು ದೂರಿನಲ್ಲಿ ಅವರು ವಿವರಿಸಿದ್ದಾರೆ.

‘ಇದು ನನಗಷ್ಟೇ ಆದ ಅವಮಾನವಲ್ಲ, ಇದು ಅಂಕಣದಲ್ಲಿ ಮತ್ತು ಹೊರಗೆ ಉತ್ತಮ ಸಾಧನೆ ಮಾಡಬಯಸುವ ಮಹಿಳಾ ಅಥ್ಲೀಟ್‌ಗೆ ಆದ ಅಪಮಾನ’ ಎಂದಿದ್ದಾರೆ. ಈ ಬಗ್ಗೆ ನ್ಯಾಯಸಮ್ಮತ ಮತ್ತು ತ್ವರಿತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಆದರೆ ಮಲಿಕ್ ಈ ಆರೋಪಗಳನ್ನು ನಿರಾಕರಿಸಿದ್ದಾರೆ. ‘ಲವ್ಲಿನಾ ಅವರ ವಿನಂತಿಗಳನ್ನು ಪರಿಗಣಿಸಿದ್ದೇವೆ ಮತ್ತು ಗೌರವಯುತವಾಗಿ ನಿರಾಕರಿಸಿದ್ದೇವೆ. ಅವು ಬಾಕ್ಸಿಂಗ್ ಫೆಡರೇಷನ್ ನಿಯಮಗಳಿಗೆ ಅನುಗುಣವಾಗಿಲ್ಲ’ ಎಂದು ಹೇಳಿದ್ದಾರೆ.

ಎಲ್ಲರಿಗೂ ಸಮಾನ ಭಾವ ಮೂಡಲು, ರಾಷ್ಟ್ರೀಯ ಶಿಬಿರದಲ್ಲಿ ವೈಯಕ್ತಿಕ ಕೋಚ್ ಅಥವಾ ನೆರವು ಸಿಬ್ಬಂದಿಗೆ ಅವಕಾಶ ಇರುವುದಿಲ್ಲ ಎಂದೂ ಹೇಳಿದ್ದಾರೆ.

ಲವ್ಲಿನಾ ದೂರನ್ನು ಪರಿಗಣಿಸಿರುವ ಐಒಎ, ಸಮಿತಿಯೊಂದನ್ನು ರಚಿಸಿದೆ. ಟಾಪ್ಸ್ ಸಿಇಒ ಎನ್.ಎಸ್.ಜೋಹಲ್, ಐಒಎ ಅಥ್ಲೀಟ್ಸ್ ಕಮಿಷನ್ ವೈಸ್ ಚೇರ್ಮನ್ ಶರತ್ ಕಮಲ್ ಮತ್ತು ಮಹಿಳಾ ವಕೀಲರೊಬ್ಬರು ಸಮಿತಿಯಲ್ಲಿದ್ದಾರೆ. ಆನ್‌ಲೈನ್ ಸಭೆಯಲ್ಲಿ ಲವ್ಲಿನಾ ಮತ್ತು ಮಲಿಕ್ ನಡುವೆ ನಡೆದ ಸಂಭಾಷಣೆ ರೆಕಾರ್ಡ್ ಆಗಿದ್ದು, ವಿಚಾರಣಾ ಸಮಿತಿ ಶೀಘ್ರವೇ ವರದಿ ಸಲ್ಲಿಸಲಿದೆ ಎಂದಿದ್ದಾರೆ.